# ಅನುದಿನದ ಆಹಾರ

February 2018



Tree - 19
Fruit - 2
Pages - 44

Annual Subscription Rs. 100/-
Single Copy Rs. 10/-

# ಈ ಕೃಪೆಯ ಕಾಲವನ್ನು ಉಪಯೋಗಿಸಿಕೊಳ್ಳಿರಿ

ಪ್ರಿಯರೇ, ಕರ್ತನು ನಿಮ್ಮನ್ನು ಆಶೀರ್ವದಿಸಲಿ. ಬೆಲೆ ಕಟ್ಟಲಾಗದ ಕರ್ತನ ವಾಕ್ಯಗಳನ್ನು, ವಾಗ್ದಾನಗಳನ್ನು ಹೊತ್ತುಕೊಂಡು ನಿಮ್ಮ ಮನೆ ಬಾಗಿಲಿಗೇ;

-> ನಿಮ್ಮನ್ನು ಹುಡುಕಿಕೊಂಡು ಬರುವ ಅನುದಿನದ ಆಹಾರ ಮಾಸಿಕ ಪತ್ರಿಕೆಯ ಚಂದಾಹಣವನ್ನು ನವೀಕರಿಸಿರುವಿರಾ...?


-> ನಿಮಗೆ ಚೈತನ್ಯ ನೀಡುತ್ತಿರುವ ಈ ಪತ್ರಿಕೆಯನ್ನು ನಿಮ್ಮ ಆಪ್ತರಿಗೂ ಸಂಬಂಧಿಕರಿಗೂ ಪರಿಚಯಿಸುವಿರಾ...?

-> ಈ ಪತ್ರಿಕೆ ಸೇವೆಗೆ, ಕರ್ತನ ಚಿತ್ತದ ಮೇರೆಗೆ, ನಿಮ್ಮ ಉದಾರವಾದ ಕಾಣಿಕೆಗಳನ್ನು ಬಿತ್ತಿ ಪ್ರೋತ್ಸಾಹಿಸುವಿರಾ...?

**ಮೇಲೆ ಸೂಚಿಸಿರುವ ಪ್ರಶ್ನೆಗಳಿಗೆ ಉತ್ತರಿಸಲು ಇಂದೇ ತೀರ್ಮಾನಿಸಿರಿ**

**ಉತ್ತರ**

ಪತ್ರಿಕೆಯ ವಾರ್ಷಿಕ ಚಂದಾಹಣವನ್ನು ತಪ್ಪದೇ ನವೀಕರಿಸಿರಿ.
ಒಬ್ಬರಿಗಾದರೂ ಮಾಸಿಕ ಪತ್ರಿಕೆಯನ್ನು ಪರಿಚಯಿಸಿ, ವಿಳಾಸ ಕಳುಹಿಸಿರಿ
ನಿಮ್ಮ ಪ್ರಾರ್ಥನೆ ಹಾಗೂ ಉದಾರವಾದ ಕಾಣಿಕೆಗಳನ್ನು ನೀಡಿರಿ.



## ಪವಿತ್ರ ದೇಶದ ಪ್ರವಾಸ

ಇಸ್ರಾಯೇಲ್
ಪಾಲೆಸ್ತೈನ್
ಜೋರ್ಡಾನ್
ಐಗುಪ್ತ

ಏಪ್ರಿಲ್ ತಿಂಗಳಿನಲ್ಲಿ 10 ದಿನಗಳ ಪವಿತ್ರ ದೇಶದ ಪ್ರವಾಸದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ನಮ್ಮ ಕಛೇರಿಯನ್ನು ವಿವರಗಳಿಗಾಗಿ ಸಂಪರ್ಕಿಸಿರಿ

**ಈ ಪ್ರವಾಸ ಸುಕ್ಷೇಮವಾಗಿ ಕೂಡಿಬರಲೆಂದು ಪ್ರಾರ್ಥಿಸಿರಿ**




*ವಿವರಗಳಿಗಾಗಿ ಸಂಪರ್ಕಿಸಿರಿ*
**Ph: 080 - 25712448**
**e-mail: goldenbibletext@gmail.com**
**Website: anudhinadaahara.weebly.com**

ಅನುದಿನದ ಆಹಾರ
Anudhinada Ahara
ಫೆಬ್ರವರಿ – 2018 FEBRUARY - 2018
ಮರ 19 ಹಣ್ಣು 2 Tree 19 Fruit 2

# ಮಾರ್ಪಡಿಸುವಾತನು!

**ಆತನು ಕಾಲಸಮಯಗಳನ್ನು ಮಾರ್ಪಡಿಸುತ್ತಾನೆ, ರಾಜರನ್ನು ತಳ್ಳುತ್ತಾನೆ, ನಿಲ್ಲಿಸುತ್ತಾನೆ; ಜ್ಞಾನಿಗಳ ಜ್ಞಾನವು ವಿವೇಕಿಗಳ ವಿವೇಕವು ಆತನ ವರವೇ (ದಾನಿ 2:21)**

ನಮ್ಮ ದೇವರು ಮಾರ್ಪಡಿಸುವಾತನು. ಆದರೆ, ಆತನಾದರೋ ಮಾರ್ಪಡದಾತನು. ಆತನ ಪ್ರೀತಿ, ಮಾರ್ಪಡದು, ಕರುಣೆ ಮಾರ್ಪಡದು, ದಯೆ ಮಾರ್ಪಡದು, ಕೃಪೆ ಮಾರ್ಪಡದು, ಕನಿಕರ ಮಾರ್ಪಡದು "ಯೆಹೋವನಾದ ನಾನು ಮಾರ್ಪಟ್ಟಿಲ್ಲ' ಎಂದು ಹೇಳುತ್ತಾನೆ (ಮಲಾ 3:6). ಹೌದು, "ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿ 13:8).

ನಮ್ಮ ಕರ್ತನು ಎಂಥವನು? ಆತನು ಮಾರ್ಪಡದವನಾದರೂ, ಸಕಲವನ್ನೂ ಮಾರ್ಪಡಿಸುವಾತನು. ಹರಿಯುವ ನೀರನ್ನು ತಿರುಗಿಸುವವನು ರಾಜರ ಹೃದಯಗಳನ್ನು ನೀರಿನ ಕಾಲುವೆಗಳಂತೆ ತಿರುಗಿಸುವನು. ನಿಮ್ಮ ಪ್ರಾರ್ಥನೆಗಳನ್ನು ಕೇಳಿ, ಅಧಿಕಾರಿಗಳ ಹೃದಯವನ್ನು ಮಾರ್ಪಡಿಸಿ, ನಿಮ್ಮ ಕಡೆಗೆ ತಿರುಗಿಸುವನು. ಕಠಿಣವಾದ ಹೃದಯವನ್ನು ಒಡೆಯುವಾತನು "ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2ಕೊರಿ 5:17) ಎಂದು ಸತ್ಯವೇದ ಹೇಳುತ್ತದೆ.

ಕೆಲವರು ತಮ್ಮ ಜೀವಿತದಲ್ಲಿ ಮಾರ್ಪಾಟು ಹೊಂದಲು ಜ್ಯೋತಿಷಿಗಳನ್ನೂ, ಮಂತ್ರವಾದಿಗಳನ್ನೂ, ಹುಡುಕಿ ಹೋಗುವರು. ಇನ್ನೂ ಕೆಲವರು ರಾಜಕಾರಿಣಿಗಳನ್ನು, ಅಧಿಕಾರಿಗಳನ್ನು ಹುಡುಕಿ ಹೋಗುವರು. ಆದರೆ ಕರ್ತನನ್ನು ನಂಬುವದು ದೊಡ್ಡ ಆಶೀರ್ವಾದವನ್ನು ತರುವದು. ಕರ್ತನು ಯಾವದನ್ನೆಲ್ಲಾ ಮಾರ್ಪಡಿಸುವನು?

**1. ದುಃಖವನ್ನು ಮಾರ್ಪಡಿಸುವನು, 2. ಪ್ರಲಾಪ ಅಥವಾ ಗೋಳಾಟವನ್ನು ಮಾರ್ಪಡಿಸುವನು, 3. ಸೆರೆಯನ್ನು ಮಾರ್ಪಡಿಸುವನು, 4. ಮಾರಾದ ಕಹಿಯನ್ನು ಮಾರ್ಪಡಿಸುವನು, 5. ಶಾಪವನ್ನು ಮಾರ್ಪಡಿಸುವನು, 6. ಇರುಳನ್ನು ಮಾರ್ಪಡಿಸುವಾತನು**

## ಆತನು ಕಾಲಸಮಯಗಳನ್ನು ಮಾರ್ಪಡಿಸುತ್ತಾನೆ, ರಾಜರನ್ನು ತಳ್ಳುತ್ತಾನೆ, ನಿಲ್ಲಿಸುತ್ತಾನೆ; ಜ್ಞಾನಿಗಳ ಜ್ಞಾನವು ವಿವೇಕಿಗಳ ವಿವೇಕವು ಆತನ ವರವೇ (ದಾನಿ 2:21)

ನಮ್ಮ ದೇವರು ಮಾರ್ಪಡಿಸುವಾತನು. ಆದರೆ, ಆತನಾದರೋ ಮಾರ್ಪಡದಾತನು. ಆತನ ಪ್ರೀತಿ, ಮಾರ್ಪಡದು, ಕರುಣೆ ಮಾರ್ಪಡದು, ದಯೆ ಮಾರ್ಪಡದು, ಕೃಪೆ ಮಾರ್ಪಡದು, ಕನಿಕರ ಮಾರ್ಪಡದು "ಯೆಹೋವನಾದ ನಾನು ಮಾರ್ಪಟ್ಟಿಲ್ಲ' ಎಂದು ಹೇಳುತ್ತಾನೆ (ಮಲಾ 3:6). ಹೌದು, "ಯೇಸುಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿ 13:8).

ನಮ್ಮ ಕರ್ತನು ಎಂಥವನು? ಆತನು ಮಾರ್ಪಡದವನಾದರೂ, ಸಕಲವನ್ನೂ ಮಾರ್ಪಡಿಸುವಾತನು. ಹರಿಯುವ ನೀರನ್ನು ತಿರುಗಿಸುವವನು ರಾಜರ ಹೃದಯಗಳನ್ನು ನೀರಿನ ಕಾಲುವೆಗಳಂತೆ ತಿರುಗಿಸುವನು. ನಿಮ್ಮ ಪ್ರಾರ್ಥನೆಗಳನ್ನು ಕೇಳಿ, ಅಧಿಕಾರಿಗಳ ಹೃದಯವನ್ನು ಮಾರ್ಪಡಿಸಿ, ನಿಮ್ಮ ಕಡೆಗೆ ತಿರುಗಿಸುವನು. ಕಠಿಣವಾದ ಹೃದಯವನ್ನು ಒಡೆಯುವಾತನು "ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2ಕೊರಿ 5:17) ಎಂದು ಸತ್ಯವೇದ ಹೇಳುತ್ತದೆ.

ಕೆಲವರು ತಮ್ಮ ಜೀವಿತದಲ್ಲಿ ಮಾರ್ಪಾಟು ಹೊಂದಲು ಜ್ಯೋತಿಷಿಗಳನ್ನೂ, ಮಂತ್ರವಾದಿಗಳನ್ನೂ, ಹುಡುಕಿ ಹೋಗುವರು. ಇನ್ನೂ ಕೆಲವರು ರಾಜಕಾರಿಣಿಗಳನ್ನು, ಅಧಿಕಾರಿಗಳನ್ನು ಹುಡುಕಿ ಹೋಗುವರು. ಆದರೆ ಕರ್ತನನ್ನು ನಂಬುವದು ದೊಡ್ಡ ಆಶೀರ್ವಾದವನ್ನು ತರುವದು. ಕರ್ತನು ಯಾವದನ್ನೆಲ್ಲಾ ಮಾರ್ಪಡಿಸುವನು?

**1. ದುಃಖವನ್ನು ಮಾರ್ಪಡಿಸುವನು, 2. ಪ್ರಲಾಪ ಅಥವಾ ಗೋಳಾಟವನ್ನು ಮಾರ್ಪಡಿಸುವನು, 3. ಸೆರೆಯನ್ನು ಮಾರ್ಪಡಿಸುವನು, 4. ಮಾರಾದ ಕಹಿಯನ್ನು ಮಾರ್ಪಡಿಸುವನು, 5. ಶಾಪವನ್ನು ಮಾರ್ಪಡಿಸುವನು, 6. ಇರುಳನ್ನು ಮಾರ್ಪಡಿಸುವಾತನು**

### 1. ದುಃಖವನ್ನು ಮಾರ್ಪಡಿಸುವನು

ಯೇಸುಕ್ರಿಸ್ತನು ಹೇಳುತ್ತಾನೆ "ನೀವು ಅಳುತ್ತಾ ಗೋಳಾಡುತ್ತಾ ಇರುವಿರಿ, ಆದರೆ ಲೋಕವು ಸಂತೋಷಿಸುವದು; ನಿಮಗೆ ದುಃಖವಾಗುವದು, ಆದರೆ ನಿಮ್ಮ ದುಃಖವು ಹೋಗಿ ಆನಂದ ಬರುವದು' ಎಂದು (ಯೋಹಾ 16:20).

ಅರಣ್ಯದಲ್ಲಿ ಅಲೆಯುತ್ತಿದ್ದ ಹಾಗರಳು ತಂದಿದ್ದ ತಿತ್ತಿಯಲ್ಲಿನ ನೀರು ತೀರಿಹೋಯಿತು, ರೊಟ್ಟಿಯೂ ಮುಗಿದು ಹೋಯಿತು. ಮಗು ದಾಹದಿಂದ

ಅಳುತ್ತಿತ್ತು. ಏನು ಮಾಡುವದೆಂದು ತಿಳಿಯದೆ ಕಳವಳಗೊಂಡಳು. ಕರ್ತನೋ, ಅವಳ ಕಣ್ಣುಗಳನ್ನು ತೆರೆದು, ನೀರಿನ ಬುಗ್ಗೆಯನ್ನು ತೋರಿಸಿದನು. ಅವಳು ಕೂಡಲೇ ಓಡಿಹೋಗಿ ತಿತ್ತಿಯಲ್ಲಿ ನೀರು ತುಂಬಿ ಮಗುವಿಗೆ ಕುಡಿಯಲು ಕೊಟ್ಟಳು. ಮಕ್ಕಳಿಲ್ಲದ, ಹನ್ನಳ ಕಣ್ಣೀರಿನ ಪ್ರಾರ್ಥನೆಯನ್ನು ಕೇಳಿದ ಕರ್ತನು ಸಮುವೇಲನನ್ನಲ್ಲದೆ, ಇನ್ನೂ ಐದು ಮಕ್ಕಳನ್ನು ಕೊಟ್ಟನು. ಹನ್ನಳ ದುಃಖ ಸಂತೋಷವಾಗಿ ಮಾರ್ಪಟ್ಟಿತು.

ಪ್ರಿಯರೇ, ಇಂದು ಯಾವದರಿಂದ ದುಃಖಕ್ಕೆ ಈಡಾಗಿರುವಿರಿ? ಯಾವ ದುಃಖವಾದರೂ ಸರಿ, ಕರ್ತನು ನಿಮ್ಮ ದುಃಖವನ್ನು ಸಂತೋವಾಗಿ ಮಾರ್ಪಡಿಸಲು ಶಕ್ತನಾಗಿರುವನು.

## 2. ಪ್ರಲಾಪ ಅಥವಾ ಗೋಳಾಟವನ್ನು ಮಾರ್ಪಡಿಸುವನು

"ನೀನು ನನ್ನ ಗೋಳಾಟವನ್ನು....ಸಂತೋಷದಿಂದ ಕುಣಿದಾಡುವಂತೆ ಮಾಡಿದಿ' (ಕೀರ್ತ 30:11).

ಕಣ್ಣೀರಿನ ಪ್ರವಾದಿಯೆಂದೇ ಕರೆಯಲ್ಪಡುವ ಯೆರೆಮೀಯನು, ಪ್ರಲಾಪಗಳ ಪುಸ್ತಕವನ್ನು ಬರೆದನು. ಅವನು ಎಷ್ಟೋ ಸತ್ಯದಿಂದಲೂ, ಯಥಾರ್ಥವಾಗಿಯೂ ಪ್ರವಾದನಾ ಸೇವೆ ಮಾಡಿದರೂ ಜನರು ಅವನನ್ನು ಅಂಗೀಕರಿಸಲಿಲ್ಲ. ರಾಜರು ಅವನನ್ನು ಸೆರೆಗೆ ತಳ್ಳಿದರು. ಆದರೆ ಕರ್ತನು ಅಂತ್ಯದಲ್ಲಿ, ಯೆರೆಮೀಯನ ಮೂಲಕ ಹೇಳಿದ ಒಂದೊಂದು ಕಾರ್ಯವನ್ನೂ ನೆರವೇರಿಸಿದನು. ಅವನ ಗೋಳಾಟವನ್ನು ಸಂತೋಷವಾಗಿ ಮಾರ್ಪಡಿಸಿದನು.

ಒಂದು ದಿನ ಯಾಕೋಬನು ರಕ್ತದಿಂದ ತೊಯ್ದು ತನ್ನ ಮಗನಾದ ಯೋಸೇಫನ ಅಂಗೀಯನ್ನು ನೋಡಿ, ತನ್ನ ಮಗನು ಸತ್ತು ಹೋದನೆಂದು ಗೋಳಾಡಿದನು. ಆದರೆ ಕರ್ತನೋ, ಯೇಸೇಫನನ್ನು ಐಗುಪ್ತಕ್ಕೆ ತೆಗೆದುಕೊಂಡು ಹೋಗಿ, ಕಾಪಾಡಿ ಬಹಳ ದೊಡ್ಡ ಸ್ಥಾನದಲ್ಲಿ ಇಟ್ಟಿದ್ದನು. ಯಾಕೋಬನ ಕೊನೆಯ ದಿನಗಳಲ್ಲಿ, ಯೋಸೇಫನನ್ನು ಉನ್ನತ ಅಧಿಕಾರಿಯಾಗಿ ಕಂಡಾಗ, ಅವನ ದುಃಖ ಸಂತೋವಾಗಿ ಮಾರ್ಪಟ್ಟಿತು.

## 3. ಸೆರೆಯನ್ನು ಮಾರ್ಪಡಿಸುವನು

ಅನೇಕ ಭಕ್ತರ ಸೆರೆವಾಸಗಳಲ್ಲಿ, ಯೋಸೇಫನ ಸೆರೆವಾಸ ಮನಸ್ಸನ್ನು ಬಹಳ ಕರಗಿಸುವದು. ಸತ್ಯವೇದ ಹೇಳುತ್ತದೆ "ಅವನ ಕಾಲುಗಳು ಕೋಳದಲ್ಲಿ ನೊಂದವು; ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು" (ಕೀರ್ತ 105:18).

ಆದರೆ ಕರ್ತನು ಎಲ್ಲವನ್ನೂ ಮಾರ್ಪಡಿಸುವವನು. ಯೋಸೇಫನ

ಅಳುತ್ತಿತ್ತು. ಏನು ಮಾಡುವದೆಂದು ತಿಳಿಯದೆ ಕಳವಳಗೊಂಡಳು. ಕರ್ತನೋ, ಅವಳ ಕಣ್ಣುಗಳನ್ನು ತೆರೆದು, ನೀರಿನ ಬುಗ್ಗೆಯನ್ನು ತೋರಿಸಿದನು. ಅವಳು ಕೂಡಲೇ ಓಡಿಹೋಗಿ ತಿತ್ತಿಯಲ್ಲಿ ನೀರು ತುಂಬಿ ಮಗುವಿಗೆ ಕುಡಿಯಲು ಕೊಟ್ಟಳು. ಮಕ್ಕಳಿಲ್ಲದ, ಹನ್ನಳ ಕಣ್ಣೀರಿನ ಪ್ರಾರ್ಥನೆಯನ್ನು ಕೇಳಿದ ಕರ್ತನು ಸಮುವೇಲನನ್ನಲ್ಲದೆ, ಇನ್ನೂ ಐದು ಮಕ್ಕಳನ್ನು ಕೊಟ್ಟನು. ಹನ್ನಳ ದುಃಖ ಸಂತೋಷವಾಗಿ ಮಾರ್ಪಟ್ಟಿತು.

ಪ್ರಿಯರೇ, ಇಂದು ಯಾವದರಿಂದ ದುಃಖಕ್ಕೆ ಈಡಾಗಿರುವಿರಿ? ಯಾವ ದುಃಖವಾದರೂ ಸರಿ, ಕರ್ತನು ನಿಮ್ಮ ದುಃಖವನ್ನು ಸಂತೋವಾಗಿ ಮಾರ್ಪಡಿಸಲು ಶಕ್ತನಾಗಿರುವನು.

## 2. ಪ್ರಲಾಪ ಅಥವಾ ಗೋಳಾಟವನ್ನು ಮಾರ್ಪಡಿಸುವನು

"ನೀನು ನನ್ನ ಗೋಳಾಟವನ್ನು....ಸಂತೋಷದಿಂದ ಕುಣಿದಾಡುವಂತೆ ಮಾಡಿದಿ' (ಕೀರ್ತ 30:11).

ಕಣ್ಣೀರಿನ ಪ್ರವಾದಿಯೆಂದೇ ಕರೆಯಲ್ಪಡುವ ಯೆರೆಮೀಯನು, ಪ್ರಲಾಪಗಳ ಪುಸ್ತಕವನ್ನು ಬರೆದನು. ಅವನು ಎಷ್ಟೋ ಸತ್ಯದಿಂದಲೂ, ಯಥಾರ್ಥವಾಗಿಯೂ ಪ್ರವಾದನಾ ಸೇವೆ ಮಾಡಿದರೂ ಜನರು ಅವನನ್ನು ಅಂಗೀಕರಿಸಲಿಲ್ಲ. ರಾಜರು ಅವನನ್ನು ಸೆರೆಗೆ ತಳ್ಳಿದರು. ಆದರೆ ಕರ್ತನು ಅಂತ್ಯದಲ್ಲಿ, ಯೆರೆಮೀಯನ ಮೂಲಕ ಹೇಳಿದ ಒಂದೊಂದು ಕಾರ್ಯವನ್ನೂ ನೆರವೇರಿಸಿದನು. ಅವನ ಗೋಳಾಟವನ್ನು ಸಂತೋಷವಾಗಿ ಮಾರ್ಪಡಿಸಿದನು.

ಒಂದು ದಿನ ಯಾಕೋಬನು ರಕ್ತದಿಂದ ತೊಯ್ದ ತನ್ನ ಮಗನಾದ ಯೋಸೇಫನ ಅಂಗೀಯನ್ನು ನೋಡಿ, ತನ್ನ ಮಗನು ಸತ್ತು ಹೋದನೆಂದು ಗೋಳಾಡಿದನು. ಆದರೆ ಕರ್ತನೋ, ಯೇಸೇಫನನ್ನು ಐಗುಪ್ತಕ್ಕೆ ತೆಗೆದುಕೊಂಡು ಹೋಗಿ, ಕಾಪಾಡಿ ಬಹಳ ದೊಡ್ಡ ಸ್ಥಾನದಲ್ಲಿ ಇಟ್ಟಿದ್ದನು. ಯಾಕೋಬನ ಕೊನೆಯ ದಿನಗಳಲ್ಲಿ, ಯೋಸೇಫನನ್ನು ಉನ್ನತ ಅಧಿಕಾರಿಯಾಗಿ ಕಂಡಾಗ, ಅವನ ದುಃಖ ಸಂತೋವಾಗಿ ಮಾರ್ಪಟ್ಟಿತು.

## 3. ಸೆರೆಯನ್ನು ಮಾರ್ಪಡಿಸುವನು

ಅನೇಕ ಭಕ್ತರ ಸೆರೆವಾಸಗಳಲ್ಲಿ, ಯೋಸೇಫನ ಸೆರೆವಾಸ ಮನಸ್ಸನ್ನು ಬಹಳ ಕರಗಿಸುವದು. ಸತ್ಯವೇದ ಹೇಳುತ್ತದೆ "ಅವನ ಕಾಲುಗಳು ಕೋಳದಲ್ಲಿ ನೊಂದವು; ಕಬ್ಬಿಣದ ಬೇಡಿಗಳಿಂದ ಅವನು ಬಂಧಿತನಾದನು" (ಕೀರ್ತ 105:18).

ಆದರೆ ಕರ್ತನು ಎಲ್ಲವನ್ನೂ ಮಾರ್ಪಡಿಸುವವನು. ಯೋಸೇಫನ

ಸೆರೆಯನ್ನು ಮಾರ್ಪಡಿಸಿ, ನೇರವಾಗಿ ಫರೋಹನ ಅರಮನೆಗೆ ಸೇರುವಂತೆ ಕೃಪೆ ನೀಡಿದನು. ಫರೋಹನನ ಕನಸಿನ ಅರ್ಥವನ್ನು ಹೇಳಿದಾಗ ಫರೋಹನನು ಯೋಸೇಫನನ್ನು ಅಧಿಕವಾಗಿ ಉನ್ನತಿಗೆ ತಂದನು.

ಯೇಸುಕ್ರಿಸ್ತನು ಈ ಭೂಮಿಗೆ ಬಂದ ಉದ್ದೇಶವೇನು? ಸೆರೆಯಲ್ಲಿರುವವರನ್ನು ಬಿಡುಗಡೆಗೊಳಿಸಲು, ಆತನನ್ನು ಕಳುಹಿಸಿದನು (ಯೆಶಾ 61:1). ಹೌದು ಕರ್ತನು ಸೆರೆಯನ್ನು ಮಾರ್ಪಡಿಸುವಾತನು ಕಟ್ಟುಗಳಿಂದ ಬಿಡಿಸುವಾತನು.

ನಿಮ್ಮ ಕಟ್ಟುಗಳು ಬಿಚ್ಚಲ್ಪಡಬೇಕಾ? ಇತರರಿಗಾಗಿ ಪ್ರಾರ್ಥಿಸಿರಿ ಕರ್ತನು ನಿಶ್ಚಯವಾಗಿ ನಿಮ್ಮ ಸೆರೆಯನ್ನು ಮಾರ್ಪಡಿಸುವನು. ದೇವರು ದುರವಸ್ಥೆಯಿಂದ ತಪ್ಪಿಸಿದಾಗ ಆತನ ಪ್ರಜೆಗಳಾಗಿರುವ ಯಾಕೋಬ ವಂಶದವರು ಉಲ್ಲಾಸಗೊಳ್ಳುವರು (ಕೀರ್ತ 53:6).

## ನಿಮ್ಮ ಮಾರ್ಗದರ್ಶನಕ್ಕಾಗಿ.

ಸನ್ನಿವೇಶಗಳೆಂದರೆ, ಕ್ರೈಸ್ತನ ಸುತ್ತಮುತ್ತ ಇರುವ ವಸ್ತುಸ್ಥಿತಿ ಮಾತ್ರ ಎನ್ನುವುದನ್ನು ಆತನು ತನ್ನ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು ಅವು ದೈವೀಕವೂ ಆಗಿರಬಹುದು, ಸೈತಾನನು ನಮ್ಮನ್ನು ದೇವರ ಚಿತ್ತದಿಂದ ದೂರ ಸೆಳೆಯಲು ತೋರಿಸುವ ಮಾರ್ಗವೂ ಆಗಿರಬಹುದು. ಆದಕಾರಣ ಬರೀ ಸನ್ನಿವೇಶಗಳಿಂದ ಮಾರ್ಗದರ್ಶನ ಪಡೆಯುವುದು ಅಪಾಯಕರ. ನೀವು ಯಾವಾಗಲೂ ಸನ್ನಿವೇಶಗಳನ್ನು ಸತ್ಯವೇದದೊಡನೆ ಹಾಗೂ ಪ್ರಾರ್ಥನೆಯ ಮೂಲಕ ಹೊಂದುವ ದೇವರ ಪವಿತ್ರಾತ್ಮನ ಭರವಸೆಯೊಂದಿಗೆ ಹೋಲಿಸಿ ನೋಡಬೇಕು.

ದೇವರು ತನ್ನ ಚಿತ್ತವನ್ನು ನಾವು ನಿರ್ಧರಿಸುವ ಹಾಗೆ ಮಾರ್ಗದರ್ಶನ ನೀಡುವ ಮೂರು ಸ್ಪಷ್ಟ ದಾರಿಗಳನ್ನು ನಾವು ಖಚಿತವಾಗಿ ತಿಳಿದುಕೊಳ್ಳಬೇಕು. ಪ್ರತಿದಿನವೂ ಸತ್ಯವೇದವನ್ನು ಓದುವುದು, ಹಾಗೂ ಪ್ರಾರ್ಥನೆಯಲ್ಲಿ ಪವಿತ್ರಾತ್ಮನ ನಡೆಸುವಿಕೆಯನ್ನು ಎಚ್ಚರಿಕೆಯಿಂದ ಆಲಿಸುವುದು, ಇದಕ್ಕಾಗಿ ಒಂದು ನಿರ್ದಿಷ್ಟ ಸಮಯವನ್ನು ಕಾದಿರಿಸುವುದು, ನಾವು ದೇವರ ಚಿತ್ತವನ್ನು ತಿಳಿದುಕೊಳ್ಳಬೇಕೆಂಬ ಆಕಾಂಕ್ಷೇ ದೇವರಿಗೆ ಇರುವುದರಿಂದ ಆತನು ನಮಗೆ ಅದರ ಕುರಿತು ಮಾರ್ಗದರ್ಶನವನ್ನು ನೀಡಿದ್ದಾನೆ.

# ಹೊಸ ಒಡಂಬಡಿಕೆಯ ಆಶೀರ್ವಾದಗಳು

1. **ಪಾಪಕ್ಷಮೆ :** "ಇದು ನನ್ನ ರಕ್ತ ಇದು ಒಡಂಬಡಿಕೆಯ ರಕ್ತ ಇದು ಪಾಪಗಳ ಕ್ಷಮೆಗಾಗಿ...ಸುರಿಸಲ್ಪಡುವ ರಕ್ತ" (ಮತ್ತಾ 26:28).
2. **ನಿತ್ಯ ವಿಮೋಚನೆ** : ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ... (ಇಬ್ರಿ 9:12).
3. **ಪಾಪದಿಂದ ಬಿಡುಗಡೆ :** ಮೋಶೆಯ ಧರ್ಮಶಾಸ್ತ್ರದ ಮೂಲಕ ನೀವು ಬಿಡುಗಡೆ ಹೊಂದಲಾಗದ ಎಲ್ಲಾ ಪಾಪಗಳಿಂದ... ಆತನ ಮೂಲಕವಾಗಿ ಬಿಡುಗಡೆ...(ಅ.ಕೃ 13:39).
4. **ನಿಯಮವು ನೆರವೇರುವಿಕೆ :** ಧರ್ಮಶಾಸ್ತ್ರವು...ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು...ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವುದಕ್ಕೆ (ರೋಮಾ 8:3,4).
5. **ಆತ್ಮ ಸಂಬಂಧವಾದದ್ದು :** ಈ ಒಡಂಬಡಿಕೆಯ ಲಿಖಿತರೂಪವಾದದ್ದಾಗಿರದೆ ದೇವರಾತ್ಮ ಸಂಬಂಧವಾದದ್ದು ಆಗಿದೆ (2ಕೊರಿ 3:6)

## ನಿಮ್ಮ ಚಿಂತನೆಗಾಗಿ - 2

1. ಕರ್ತನ ದೃಷ್ಟಿಯಲ್ಲಿ ಉತ್ತಮವಾಗಿಯೂ ಮೆಚ್ಚಿಗೆಯಾಗಿಯೂ ಇರಬೇಕೆಂದು ಬಯಸುವ ವ್ಯಕ್ತಿ, ಮನುಷ್ಯರ ಕಣ್ಣುಗಳು ತನ್ನನ್ನು ತಪ್ಪಾಗಿ ಕಾಣುತ್ತಿದೆಯಲ್ಲಾ ಎಂದು ಚಿಂತಿಸಬಾರದು.
2. ಕರ್ತನ ಮಾರ್ಗದಲ್ಲಿ ನಡೆಯುವದೇ ಕರ್ತನನ್ನು ಘನಪಡಿಸುವ ಕಾರ್ಯವಾಗಿದೆ.
3. ದೈವಿಕ ಸ್ವಭಾವದಿಂದ ಕೂಡಿ ಬಾಳುವದೇ ಕರ್ತನನ್ನು ಘನಪಡಿಸುವ ಜೀವಿತವಾಗಿದೆ.
4. ನಿನ್ನನ್ನು ನೀನು ಕ್ರಮಪಡಿಸಿಕೊಳ್ಳಲು ಎಷ್ಟೇ ಶ್ರಮಪಟ್ಟರೂ ನಿನ್ನನ್ನು ಕಟ್ಟುಪಾಡಿನಲ್ಲಿಟ್ಟುಕೊಂಡರೂ, ನಿನ್ನ ಪ್ರಯತ್ನಗಳಿಂದ ಪೂರ್ಣವಾದ ಜಯವನ್ನು ಕಾಣಲಾರೆ; ಆದರೆ ಕರ್ತನಿಗೆ ನಿನ್ನನ್ನು ಒಪ್ಪಿಸು, ನಿನ್ನ ಅಮೂಲ್ಯವಾದ ಯೌವನಕಾಲವನ್ನು ಕರ್ತನ ಆಶ್ರಯಕ್ಕೆ ಅಧೀನಪಡಿಸು.
5. ದೇವಭಕ್ತರು ಎಂಬ ಮಟ್ಟಕ್ಕೆ ನಿಮ್ಮನ್ನು ನೀವು ಕ್ರಮಪಡಿಸಿಕೊಂಡರೂ, ದೇವಮಗು ಎಂಬ ಆತ್ಮೀಕ ಸ್ಥಿತಿಗೆ ನೀವು ಬಂದು ಸೇರಬೇಕೆಂಬುದೇ ದೇವರ ಉದ್ದೇಶ.

# 6 ದಿನದ ಯುದ್ಧ

ನೂರಾರು ವರ್ಷಗಳ ತರುವಾಯ 1948ರಲ್ಲಿ ಇಸ್ರಾಯೇಲ್ ಒಂದು ರಾಷ್ಟ್ರವಾಯಿತು. ಇಸ್ರಾಯೇಲ್ಯರು ಇನ್ನು ನೆಲೆಗೊಳ್ಳುತ್ತಿರುವಾಗಲೇ ಅವರ ವಿರುದ್ಧವಾಗಿ ರಷ್ಯ ಹಾಗೂ ಪಾಲೆಸ್ತೀನದವರ ನೆರವಿನಿಂದ 5 ರಾಷ್ಟ್ರಗಳು ಯುದ್ಧಕ್ಕೆ ಬಂದವು. ಆಗ ಅವರ ಹತ್ತಿರ ಕೆಲವು ನೂರು ಮೆಷಿನ್ ಗನ್‌ಗಳೂ, ಕೇವಲ 9 ವಿಮಾನಗಳು (ಅದರಲ್ಲಿ ಒಂದು ವಿಮಾನಕ್ಕೆ ಮಾತ್ರ ಎರಡು ಇಂಜಿನ್‌ಗಳು) ಇದ್ದವು. ಅವರ ಬಳಿ ಒಂದು ಫಿರಂಗಿ ರಥ ಟ್ಯಾಂಕ್ ಸಹ ಇರಲಿಲ್ಲ. ಈಜಿಪ್ಟ್ ರಾಷ್ಟ್ರವು ತನ್ನ 80,000 ಸೈನಿಕರನ್ನು ಇಸ್ರಾಯೇಲಿಗೆ ವಿರುದ್ಧವಾಗಿ ಸೀನಾಯಿ ತೀರದಲ್ಲಿ ನಿಲ್ಲಿಸಿತ್ತು. ಉತ್ತರದಲ್ಲಿ 40,000 ಸಿರಿಯಾದವರು. ಪೂರ್ವದಲ್ಲಿ ಜೋರ್ಡಾನಿನ 40,000 ಸೈನಿಕರು. ಸೌದಿ ಅರೇಬಿಯಾದಿಂದ 20,000 ಸೈನಿಕರು, ಇರಾಕಿನಿಂದ 5000 ಸೈನ್ಯದಳಗಳು ಇಷ್ಟೊಂದು ಬಲ ಒಟ್ಟು ಗೂಡಿ ಬಂದಿರುವಾಗ ಇಸ್ರೇಲ್ 'ಕಥೆ ಮುಗಿಯಿತು ಎಂದು ಲೋಕದವರು ಅಭಿಪ್ರಾಯಪಟ್ಟರು.

ಯಾರೂ ಮೊಟ್ಟ ಮೊದಲು ದಾಳಿ ಮಾಡಿದರು ಇಲ್ಲವೆ ಬಾಂಬ್ ಹಾಕಿದರು ಎಂಬುದು ಇಂದಿಗೂ ವಾಗ್ವಾದ ವಿಷಯವಾಗಿದೆ. ಆದರೆ ಯುದ್ಧಕ್ಷೇತ್ರದ ಹೊಗೆಯು ಮೊಬ್ಬು ಸ್ವಚ್ಛವಾದಾಗ 5 ಅರಬು ರಾಷ್ಟ್ರಗಳ 400 ವಿಮಾನಗಳು ಚೂರು ಚೂರಾಗಿ ಇಸ್ರಾಯೇಲ್ ಸಂಪೂರ್ಣ ಹತೋಟಿಯಿಂದ ಪುರಾತನ ನಗರವಾದ ಯೆರೂಸಲೇಮನ್ನು ವಶಪಡಿಸಿಕೊಂಡಿತ್ತು. ವೈರಿಗಳು ಚದರಿಸಲ್ಪಟ್ಟರು.

**"ಇಗೋ, ಇಸ್ರಾಯೇಲ್ಯರನ್ನು ಕಾಯುವಾತನು ತೂಕಡಿಸುವದಿಲ್ಲ, ನಿದ್ರಿಸುವದಿಲ್ಲ" (ಕೀರ್ತ 121:4).**

## ವಾಗ್ದಾನ ವಚನ : ಯೆರೆ 31:13

**ನಾನು ಅವರ ದುಃಖವನ್ನು ನೀಗಿಸಿ ಸಂತೋಷವನ್ನುಂಟು ಮಾಡಿ ಅವರು ತಮ್ಮ ವ್ಯಸನವನ್ನು ಬಿಟ್ಟು ಆನಂದಿಸುವಂತೆ ಅವರನ್ನು ಸಂತೈಸುವೆನು**

## ನಿಮ್ಮೊಳಗೆ ವಾಸವಾಗಿರುವ ಪ್ರಾರ್ಥನಾ ಪಾಲುಗಾರ

ತ್ರೆಯೇಕತ್ವದಲ್ಲಿ ಮೂರನೇ ವ್ಯಕ್ತಿಯಾಗಿರುವ ಪವಿತ್ರಾತ್ಮನು ಪರಲೋಕದಲ್ಲಿ ಮಾತ್ರವೇ ಇರುವಾತನಲ್ಲ, ವಿಶ್ವಾಸಿಗಳೊಳಗೆ ವಾಸಿಸುವಂತೆ ತಂದೆ ದೇವರಿಂದಲೂ, ಯೇಸುಕ್ರಿಸ್ತನಿಂದಲೂ ಕಳುಹಿಸಲ್ಪಟ್ಟಾತನೇ ಪವಿತ್ರಾತ್ಮನು. ಪವಿತ್ರಾತ್ಮನು ನಿಮ್ಮೊಳಗೆ ವಾಸವಾಗಿರುವದರಿಂದ ವಿಶ್ವಾಸಿಗಳಾದ ನೀವು ದೇವರ ಆಲಯವಾಗಿರುವಿರಿ (1ಕೊರಿ 3:16,17). ನಿಮ್ಮೊಳಗೆ ವಾಸಿಸುವ ಪವಿತ್ರಾತ್ಮನು ಏನು ಮಾಡುತ್ತಿದ್ದಾನೆ. ಆತನು ನಮ್ಮನ್ನು ಶುದ್ಧೀಕರಿಸಿ ನಮ್ಮನ್ನು ಬಲಪಡಿಸಿ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಪವಿತ್ರಾತ್ಮನೇ ಪ್ರಾರ್ಥನೆಯ ಆತ್ಮನಾಗಿದ್ದಾನೆ. ತಂದೆ ದೇವರ ಬಳಿಯಲ್ಲೂ ಯೇಸುಕ್ರಿಸ್ತನ ಬಳಿಯಲ್ಲೂ ಆತನು ನೇರವಾಗಿ ಮಾತನಾಡುತ್ತಾನೆ. ನಿಮ್ಮ ಮೂಲಕವಾಗಿಯೂ ಮಾತಾಡುತ್ತಾನೆ.

ನೀವು ಪವಿತ್ರಾತ್ಮನಿಂದ ಪ್ರೇರಿತರಾಗುವಾಗ, ಪ್ರಾರ್ಥನೆಯೇ ನಿಮ್ಮ ಉಸಿರಾಗಿರುವದು, ನಿಮ್ಮ ಆತ್ಮೀಕ ಜೀವಿತದ ಸೂಚನೆಯಾಗಿ ನೀವು ಪ್ರಾರ್ಥನೆಯ ಆತ್ಮದಿಂದ ತುಂಬಿದವರಾಗಿ ದೇವಚಿತ್ತವು ಇ ಪ್ರಪಂಚದಲ್ಲಿ ನೆರವೇರುವಂತೆ ಸಲ್ಲಿಸುವ ಪ್ರಾರ್ಥನಾ ಮನವಿಗಳಿಗೆ ಕರ್ತನು ಸ್ಪಂದಿಸಲು ಇದು ಉಪಯುಕ್ತವಾಗಿರುವದು. ತಂದೆ ದೇವರ ಮಗನಾದ ಯೇಸುಕ್ರಿಸ್ತನು ಸಿಂಹಾಸನಾರೂಢನಾಗಿ ನಿಮ್ಮ ಪ್ರಾರ್ಥನಾ ಸಹಭಾಗಿಯಾಗಿರುವ ಪ್ರಕಾರ. ಪವಿತ್ರಾತ್ಮನು ಸಹ ನಿಮ್ಮೊಳಗೆ ವಾಸಿಸುವ ಪ್ರಾರ್ಥನಾ ಸಹಭಾಗಿಯಾಗಿರುವನು.

## ತಪ್ಪು ಯಾರದು?


ರೊಟ್ಟಿ (ಬ್ರೆಡ್) ಅಂಗಡಿಯವನು ಯಾವಾಗಲೂ ಹಾಲಿನ ಅಂಗಡಿಯವನ ಹತ್ತಿರ 1ಕಿಲೋ ರೊಟ್ಟಿ ಕೊಟ್ಟು ಬೆಣ್ಣೆಯನ್ನು ತೆಗೆದುಕೊಳ್ಳುತ್ತಾನೆ. ಬೆಣ್ಣೆ ಉಂಡೆ ದಿನ ದಿನಕ್ಕೆ ಕಡಿಮೆಯಾಗುತ್ತಾ ಇರುವುದನ್ನು ನೋಡಿ, ನ್ಯಾಯಾದೀಶನ ಹತ್ತಿರ ಹೋಗಿ ದೂರು ನೀಡಿದನು. ನ್ಯಾಯಾದೀಶನು ನೋಡಿ ಹಾಲಿನವನ್ನು ಕಠೋರವಾಗಿ ಅವನ ತಪ್ಪಿನ ಬಗ್ಗೆ ಖಂಡಿಸಿದನು, ಆಗ ಅವನು

ಸ್ವಾಮಿ ನಾನು ತಪ್ಪು ಮಾಡಿಲ್ಲ, ಅವನ 1ಕಿಲೋ ರೊಟ್ಟಿಗೆ ತಕ್ಕಂತೆ ನಾನು ಬೆಣ್ಣೆ ಉಂಡೆಯನ್ನು ಕೊಡುವೆನು ಎಂದು ಹೇಳಿದನು, ಆಗ ನ್ಯಾಯಾದೀಶನು ತಕ್ಕಡಿಯನ್ನು ತರಿಸಿ ಪರೀಕ್ಷೆ ಮಾಡಿದಾಗ ಎರಡನ್ನು ತಕ್ಕಡಿಯಲ್ಲಿಟ್ಟು ತೂಗಿ ನೋಡಿದಾಗ ರೊಟ್ಟಿ ಕಡಿಮೆ ಇತ್ತು ಆಗ ಹಾಲಿನವನು ನೋಡಿ ಸ್ವಾಮಿ ಅವನ ರೊಟ್ಟಿಗೆ ತಕ್ಕಂತೆ ನಾನು ಬೆಣ್ಣೆ ಕೊಡುತ್ತಿದ್ದೆ ಎಂದು ಹೇಳಿದನು ಇದರಿಂದಾಗಿ ರೊಟ್ಟಿಯವನ ತಪ್ಪು ಎದ್ದು ಕಾಣುತಿತ್ತು ನಾವು ನಮ್ಮ ತಪ್ಪುಗಳನ್ನು ತಿದ್ದಿ ಕೊಳ್ಳದೆ ಬೇರೆಯವರ ತಪ್ಪುಗಳನ್ನೇ ಎಣಿಸುತ್ತೇವೆ.

1. **ಪೋಟಿಫರನ ಹೆಂಡತಿ ಯೋಸೇಫನ ಮೇಲೆ ತಪ್ಪು ಹೊರಿಸಿದ್ದಳು (ಆದಿ 39:11–20).**
2. **ಶಾಸ್ತ್ರಿಗಳು, ಫರಿಸಾಯರು ಯೇಸುಕ್ರಿಸ್ತನ ಮೇಲೆ ತಪ್ಪುಗಳನ್ನು ಹುಡುಕಲು ಕಾಯುತ್ತಿದ್ದರು (ಮತ್ತಾ 16:1,25:15).**
3. **ಮರಿಯಳು ಯೇಸುಕ್ರಿಸ್ತನ ಪಾದಕ್ಕೆ ಪರಿಮಳ ತೈಲವನ್ನು ಸುರಿದಾಗ ಇಸ್ಕರಿಯೋತ ಯೂದ ಅವಳ ಮೇಲೆ ತಪ್ಪು ಹೊರಿಸಿದನು (ಯೋಹಾನ 2:1–7).**
4. **ನೀವು ಮತ್ತೊಬ್ಬರನ್ನು ತೀರ್ಪು ಮಾಡಿದರೆ ನಿಮಗೂ ತೀರ್ಪಾಗುವುದು (ಮತ್ತಾಯ 7:2).**

## ನೀವು ಅನುಸರಿಸಬೇಕಾದ ಬೋಧನೆಗಳು

1. **ನಿನ್ನ ಮಾರ್ಗವನ್ನು ಕರ್ತನಿಗೆ ಒಪ್ಪಿಸು :** ನಿನ್ನ ಎಲ್ಲಾ ನಡವಳಿಕೆಯಲ್ಲಿ ಆತನ ಚಿತ್ತಕ್ಕೆ ವಿಧೇಯನಾಗಿರು ಆತನೇ ನಿನ್ನ ಮಾರ್ಗವನ್ನು ಸರಾಗಮಾಡುವನು. ನಿನ್ನ ಮಾರ್ಗಗಳಿಗಿಂತ ಕರ್ತನ ಮಾರ್ಗಗಳು ಉತ್ತಮವಾದದು.
2. **ಸಂತೋಷದಿಂದ ಕರ್ತನನ್ನು ಸ್ತುತಿಸು :** ಕರ್ತನಲ್ಲಿ ಸಂತೋಷಿಸುವಿ ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು. ನಿನ್ನ ಮಾರ್ಗಗಳನ್ನು ಆತನಿಗೆ ಒಪ್ಪಿಸಿದ ನಂತರ ಕಳವಳಪಡಬೇಡ, ಪೂರ್ಣ ಹೃದಯದಿಂದ ಸಂತೋಷದಿಂದ ಕರ್ತನನ್ನು ಸ್ತುತಿಸು.
3. **ಕರ್ತನ ಸನ್ನಿಧಿಯಲ್ಲಿ ಕಾದಿರು :** ಕರ್ತನ ಸನ್ನಿಧಿಯಲ್ಲಿ ಶಾಂತನಾಗಿ ಆತನಿಗೋಸ್ಕರ ಕಾದಿರು. ಆತನು ತನ್ನ ಚಿತ್ತವನ್ನು ನಿನಗೆ ತಿಳಿಸುವನು. ನೀನು ಇದನ್ನು ಅರಿತು ನಂಬಿಕೆಯಿಂದ ನೀನು ಮಾಡಬೇಕಾದ ಕಾರ್ಯಗಳನ್ನು ಮಾಡಲು ಸಿದ್ಧನಾಗಿರು.



# ನಮ್ಮ ದೇಶದ ಸುದ್ದಿಗಳು
# (INDIA NEWS)

1. **ಕುವೆಂಪು ಸಾಹಿತ್ಯ ನೊಬೆಲ್ ಪುರಸ್ಕಾರಕ್ಕೆ ಅರ್ಹ** : ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕುವೆಂಪು ಛಾಪು ಮೂಡಿಸಿದ್ದಾರೆ. ಅವರ ಸಾಹಿತ್ಯ ನೊಬೆಲ್ ಪುರಸ್ಕಾರಕ್ಕೆ ಅರ್ಹವಾಗಿದೆ ಇಲ್ಲಿಯವರೆಗೆ ಸಾಹಿತ್ಯ ಕ್ಷೇತ್ರದಲ್ಲಿ ನೊಬಲ್ ಪುರಸ್ಕಾರ ಪಡೆದಿರುವ ಎಲ್ಲರ ಸಾಹಿತ್ಯಗಳಲ್ಲಿ ಅವರೆಲ್ಲರ ಸಾಹಿತ್ಯಕ್ಕಿಂತ ಕುವೆಂಪು ಸಾಹಿತ್ಯ ಶ್ರೇಷ್ಠವಾಗಿದೆ, ಮೂರು ಬಾರಿ ಮರಣೋತ್ತರವಾಗಿ ಈ ಪುರಸ್ಕಾರವನ್ನು ನೀಡಲಾಗಿದೆ. ಕುವೆಂಪು ಅವರನ್ನು ಈ ಪುರಸ್ಕಾರಕ್ಕೆ ಪರಿಗಣಿಸಬೇಕು ಎಂದು ತಿಳಿದು ಬಂದಿದೆ.

2. **ಸೈಕ್ಲಿಂಗ್ ಮೇಘಾ, ದಾನಮ್ಮಗೆ ಪದಕ** : ನವದೆಹಲಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸಬ್ ಜೂನಿಯರ್, ಜೂನಿಯರ್ ಮತ್ತು ಸೀನಿಯರ್ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ತಲಾ ಒಂದು ಪದಕ ಜಯಿಸಿದರು. 18 ವರ್ಷದ ಒಳಗಿನವರ ಬಾಲಕಿಯರ 10 ಕಿ.ಮೀ. ವಿಭಾಗದ ಪಾಯಿಂಟ್ ರೇಸ್ ಸ್ಪರ್ಧೆಯಲ್ಲಿ ಮೊದಲು ಎರಡು ಚಿನ್ನ ಜಯಿಸಿದ್ದರು ಎಂದು ತಿಳಿದು ಬಂದಿದೆ.

3. **ಜರ್ಮನಿಯ ಯಂತ್ರಕ್ಕೆ ರೂ.2 ಕೋಟಿ** : ಗಂಟೆಗೆ 100 ಅಡಿ ಕೊರೆಯುವ ಕೊಳವೆಬಾವಿ ಯಂತ್ರ, ಅತ್ಯಾಧುನಿಕ ತಂತ್ರಜ್ಞಾನದ ದೇಸಿ ಯಂತ್ರಗಳು, ನೀರು ಗುರುತಿಸುವ ತಂತ್ರಜ್ಞಾನ ಹೀಗೆ ಕೊಳವೆಬಾವಿ ಕುರಿತ ಭರಪೂರ ಮಾಹಿತಿಗಳ ಲೋಕ ಇಲ್ಲಿ ಅನಾವರಣಗೊಂಡಿತ್ತು. ಇದು ಕಂಡುಬಂದದ್ದು, ರಿಗ್ ಮಾಲೀಕರ ಸಂಘ, ಬೋರ್‌ವೆಲ್ ಡ್ರಿಲ್ಲಿಂಗ್ ಗುತ್ತಿಗೆದಾರರ ಸಂಘ, ಡ್ರಿಲ್ಲಿಂಗ್ ಟುಡೆ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದೆ ಎಂದು ತಿಳಿದು ಬಂದಿದೆ.

4. **ಉನ್ನತ ಶಿಕ್ಷಣದಲ್ಲಿ ಹೆಣ್ಣು ಮಕ್ಕಳೇ ಹೆಚ್ಚು** : ಉನ್ನತ ಶಿಕ್ಷಣ ಪಡೆಯಲು ಬಯಸುವ ಹೆಣ್ಣು ಮಕ್ಕಳ ಸಂಖ್ಯೆ ಕರ್ನಾಟಕದಲ್ಲಿ ಹೆಚ್ಚುತ್ತಿದೆ. ಹುಡುಗರಿಗಿಂತಲೂ ಹೆಚ್ಚಿನ ಸಂಖ್ಯೆಯ ಹುಡುಗಿಯರು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಬಿಡುಗಡೆ ಮಾಡಿರುವ ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ 2016–17 ರ ವರದಿ ಇದನ್ನು ಬಹಿರಂಗಪಡಿಸಿದೆ.

5. **ಪುಸ್ತಕ ಓದಿಸಲೊಂದು ಪಯಣ** : ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪುಸ್ತಕ ಓದಿನ "ಪಯಣ" ಆರಂಭವಾಗಿದೆ. ವಿದ್ಯಾರ್ಥಿಗಳಲ್ಲಿ, ಪಠ್ಯದೊಂದಿಗೆ ಪಠ್ಯೇತರ ಪುಸ್ತಕಗಳನ್ನೂ ಓದುವ ಅಭಿರುಚಿ ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿದು ಬಂದಿದೆ.



# ಹೊರ ದೇಶದ ಸುದ್ದಿಗಳು (FOREIGN NEWS)

1. **ಸ್ತನ, ಗರ್ಭಕೋಶ ಕ್ಯಾನ್ಸರ್: ಭಾರತ ಚೀನಾ ಅಗ್ರಸ್ಥಾನ:** ಸ್ತನ ಮತ್ತು ಗರ್ಭಕೋಶ ಕ್ಯಾನ್ಸರ್ ಪ್ರಕರಣಗಳ ಸಂಖ್ಯೆಯಲ್ಲಿ ಭಾರತ ಮತ್ತು ಚೀನಾ ಮುಂಚೂಣಿಯಲ್ಲಿವೆ ಎಂದು "ದಿ ಲಾನ್ಸೆಟ್" ವೈದ್ಯಕೀಯ ನಿಯತಕಾಲಿಕೆ ನಡೆಸಿದ ಹೊಸ ಅಧ್ಯಯನದಿಂದ ಬಹಿರಂಗವಾಗಿದೆ. ಪ್ರತಿ ವರ್ಷ ಸ್ತನ ಕ್ಯಾನ್ಸರ್ ಮಾರಿಗೆ ತುತ್ತಾಗುವ ಮಹಿಳೆಯರ ಸಂಖ್ಯೆ 2015ರಲ್ಲಿ 1.7ದಶಲಕ್ಷವಿದ್ದು, ಗರ್ಭಕೋಶ ಕ್ಯಾನ್ಸರ್ 25 ಪ್ರತಿಶತ ಹೆಚ್ಚಾಗಿ ಪ್ರತಿವರ್ಷ 7ಲಕ್ಷ ಮಹಿಳೆಯರು ಇದಕ್ಕೆ ಬಲಿಯಾಗುವ ಅಪಾಯ ಕಂಡು ಬಂದಿದೆ ಎಂದು ಅಧ್ಯಯನ ತಿಳಿಸಿದೆ.

2. **ಆಟ ಕ್ಲೋಸ್ ಎಂದ ಮಿರೋಸ್ಲಾವ್:** ಜರ್ಮನಿಯ ಫುಟ್ಬಾಲ್ ದಿಗ್ಗಜ ಮತ್ತು ಫಿಫಾ ವಿಶ್ವಕಪ್ನಲ್ಲಿ ಸಾರ್ವಕಾಲಿಕ ಅತ್ಯಧಿಕಗೋಲು ಗಳಿಸಿದ ಸ್ಟ್ರೈಕರ್ ಮಿರೋಸ್ಲಾವ್ ಕ್ಲೋಸ್ ಎಲ್ಲಾ ಮಾದರಿಯ ಫುಟ್ಬಾಲ್‌ಗೆ ವಿದಾಯ ಘೋಷಿಸಿದ್ದಾರೆ.

3. **ಪೌಲ್ ಬೆಟ್ಟಿಗೆ ಪ್ರತಿಷ್ಠಿತ ಮ್ಯಾನ್‌ಬುಕರ್:** ಅಮೆರಿಕದ ಲೇಖಕ ಪೌಲ್ ಜೆಟ್ಟಿ ಅವರು ಪ್ರತಿಷ್ಠಿತ ಮ್ಯಾನ್‌ಬುಕರ್ ಪ್ರಶಸ್ತಿಗೆ ಪಾತ್ರರಾಗಿದ್ದು ಈ ಪ್ರಶಸ್ತಿಗಳಿಸಿದ ಅಮೆರಿಕದ ಮೊದಲ ಲೇಖಕರಾಗಿದ್ದಾರೆ. ಅಮೆರಿಕದ ಪೌಲ್ ಬೆಟ್ಟಿ ಜನಾಂಗೀಯ ರಾಜ ಕಾರಣ ಕುರಿತು ವಿಡಂಬನಾತ್ಮಕವಾಗಿರುವ ತಮ್ಮ ದಿ ಸೆಲ್‌ಔಟ್ ಕೃತಿಗೆ ಅವರು ಈ ಪ್ರಶಸ್ತಿಗಳಿಸಿದ್ದಾರೆ ಇದರಲ್ಲಿ ಆಫ್ರಿಕನ್ ಅಮೆರಿಕನ್ ವ್ಯಕ್ತಿಯೋರ್ವ ತನ್ನ ಅಸ್ತಿತ್ವ ದೃಢಪಡಿಸಿಕೊಳ್ಳುವುದೇ ಆಗಿದೆ.

4. **ಮೋಸುಲ್ ಉಳಿಸಿಕೊಳ್ಳಲು ಮಾನವ ಗುರಾಣಿ:** ಇಸ್ಲಾಮಿಕ್ ಸ್ಟೇಟ್ (ಐಪಿಸ್) ಉಗ್ರರ ವಶದಲ್ಲಿರುವ ಮೋಸುಲ್ ನಗರವನ್ನು ಮರಳಿ ವಶಕ್ಕೆ ಪಡೆಯಲು ಇರಾಕ್ ಸೇನೆ ಕಾರ್ಯಾಚರಣೆ ನಡೆಸುತ್ತಿದೆ. ಆದರೆ ಮೊಸುಲ್ ನಗರವನ್ನು ಉಳಿಸಿಕೊಳ್ಳಲು ಐಎಸ್ ಉಗ್ರರು ನಾಗರಿಕರನ್ನು ಮಾನವ ಗುರಾಣಿಗಳಂತೆ ಬಳಸಿಕೊಳ್ಳುತ್ತಿದ್ದಾರೆ.

5. **ಮೆಕ್ಸಿಕೊ ಗಡಿಯಲ್ಲಿ ಗೋಡೆ ನಿರ್ಮಾಣ:** ಮೆಕ್ಸಿಕೊ ಗಡಿಯಲ್ಲಿ ದುರ್ಗಮ ಗೋಡೆ ನಿರ್ಮಿಸುವ ಮೂಲಕ ಅಕ್ರಮ ವಲಸಿಗರಿಗೆ ಕಡಿವಾಣ ಹಾಗೂ ದಾಖಲಾತಿಗಳನ್ನು ಹೊಂದದೆ ನೆಲೆಸಿರುವ ಲಕ್ಷಾಂತರ ಮಂದಿಯನ್ನು ಶೀಘ್ರದಲ್ಲಿ ಗಡೀಪಾರು ಮಾಡುವ ಎರಡು ಮಹತ್ವದ ಆದೇಶಗಳಿಗೆ ಅಮೆರಿಕ ಅಧ್ಯಕ್ಷರೂ ಸಹಿಹಾಕಿದ್ದಾರೆ. ಈ ಮೂಲಕ ಚುನಾವಣಾ ಪ್ರಚಾರದಲ್ಲಿ ದೇಶದ ಜನರಿಗೆ ನೀಡಿದ ವಾಗ್ದಾನದಂತೆ ನಡೆದುಕೊಂಡಿದ್ದಾರೆ.

# ಸಮುದ್ರದಲ್ಲಿ ನಡೆದ ಅದ್ಭುತ!

ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಸಮಯ. ದಕ್ಷಿಣ ಫೆಸಿಫಿಕ್ ಸಮುದ್ರದ ದೀಪವೊಂದರಲ್ಲಿ ಪಕ್ಕದ ದೇಶದ ವಿಮಾನ ಪಡೆಯೊಂದು ಬೀಡುಬಿಟ್ಟಿತ್ತು. ಆ ಸೈನ್ಯದ ಮುಖಂಡ ಕ್ಯಾಪ್ಟನ್ ಜಾನ್‌ಸನ್ ಎಂಬುವವರು ದೇವರಲ್ಲಿ ಭಯಭಕ್ತಿಯುಳ್ಳವರು. ಅಲ್ಲಿದ್ದ ವೀರರುಗಳನ್ನು ಕರೆದು ರಜಾ ದಿನಗಳಲ್ಲಿ ಆರಾಧನೆಗಳನ್ನು ನಡೆಸುವುದು ಅವರ ಅಭ್ಯಾಸ.

ಒಂದು ದಿನ ಅವರು ಪ್ರಸಂಗ ಮಾಡುತ್ತಿರುವಾಗ ತನ್ನ ವೀರರುಗಳೊಂದಿಗೆ ಹೀಗೆ ಹೇಳಿದರು "ನಾವು ಒಂದು ದೊಡ್ಡ ಯುದ್ಧದಲ್ಲಿ ಸಿಕ್ಕಿಕೊಂಡಿದ್ದೇವೆ. ಯಾವ ಸಮಯದಲ್ಲಿ ಏನು ಸಂಭವಿಸುವುದೋ ಗೊತ್ತಿಲ್ಲ. ಆದರೆ ಎಂಥಹ ಅಪತ್ತು ಸಂಭವಿಸಿದರೂ ನಾವು ದೇವರನ್ನು ನೋಡಿ ಕೂಗಿದರೆ ಆತನು ನಿಶ್ಚಯವಾಗಿ ನಮಗೆ ಉತ್ತರ ಕೊಟ್ಟೇ ಕೊಡುತ್ತಾನೆ. ಕೆಲವು ವಾರಗಳ ನಂತರ ವೈರಿಗಳು ಬೀಡುಬಿಟ್ಟಿದ್ದ ಒಂದು ದ್ವೀಪಕ್ಕೆ ಅವರು ಯುದ್ಧ ಮಾಡಲು ಹೋಗಬೇಕಾಗಿ ಬಂತು. ನೂರಾರು ಮೈಲಿಗಳಷ್ಟು ದೂರದಲ್ಲಿದ್ದ ಆ ದ್ವೀಪಕ್ಕೆ ಒಂದು ವಿಮಾನದ ಮೂಲಕ ಕ್ಯಾಪ್ಟನ್ ಜಾನ್‌ಸನ್ ಹಾಗೂ ಕೆಲವು ವೀರರೂ ಹೊರಟರು. ಯುದ್ಧವನ್ನು ಜಯಕರವಾಗಿ ಮುಗಿಸಿ ಹಿಂದಿರುಗುವಾಗ ವಿಮಾನದಲ್ಲಿದ್ದ ಪೆಟ್ರೋಲ್ ಮುಗಿದು ಹೋಯಿತು. ಒಂದು ದಟ್ಟಡವಿಯಲ್ಲಿ ವಿಮಾನವನ್ನಿಳಿಸ ಬೇಕಾಯಿತು.

ವಿಮಾನವು ಇಳಿದು ಕೆಲವು ಸಮಯದಲ್ಲಿ ಅವರಿಗೆ ತಿಳಿದ ಸುದ್ದಿಯಿಂದ ಅವರಿಗೆ ಗಾಬರಿಯಾಯಿತು. ಅವರುಗಳಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಶತೃಸೈನ್ಯದವರು 4 ದಿಕ್ಕುಗಳಿಂದಲೂ ಸುತ್ತುವರಿದಿದ್ದರು. ಇವರಿಗೆ ಏನು ಮಾಡಬೇಕೆಂಬುದೇ ತಿಳಿಯದಾಯಿತು. ಒಬ್ಬ ವೀರನು ಕ್ಯಾಪ್ಟನ್ ಜಾನ್‌ಸನ್‌ರವರ ಬಳಿ ಒಂದು ದಿನ ದೇವರ ರಕ್ಷಣೆಯನ್ನು ಕುರಿತು ಕೊಟ್ಟಿದ್ದ ಸಂದೇಶವನು ಕುರಿತು ನೆನಪು ಮಾಡಿದನು. ದೇವರ ಬಳಿಯಲ್ಲಿ ಪ್ರಾಥಿಸಲು ತೀರ್ಮಾನಿಸಿದರು. ಕ್ಯಾಪ್ಟನ್ ಜಾನ್‌ಸನ್ ಪೆಟ್ರೋಲ್ ಸಿಕ್ಕದಿದ್ದರೆ ವಿಮಾನವು ಅಲ್ಲಿಂದ ಹೊರಡಲು ಸಾಧ್ಯವಾಗುವುದಿಲ್ಲ. ದೇವರು ಒಂದು ಅದ್ಭುತವನ್ನು ಮಾಡುವ ಹಾಗೆ ಅವರು ಪ್ರಾರ್ಥಿಸುತ್ತಿದ್ದರು. ಮಧ್ಯರಾತ್ರಿ ಕಳೆದು ಬೆಳಗಿನ ಜಾವ 3 ಗಂಟೆ ಆಯಿತು. ಜಾನ್‌ಸನ್‌ರವರು ದೇವರಿಂದ ಉತ್ತೇಜಿಸಲ್ಪಟ್ಟವರಾಗಿ ಎದ್ದು ಸಮುದ್ರದ ಪಕ್ಕಕ್ಕೆ ಬಂದರು. ಸಮುದ್ರದ ಅಲೆಗಳ ಮಧ್ಯದಲ್ಲಿ ಏನೋ ಒಂದು ಲೋಹದಿಂದ ಮಾಡಲ್ಪಟ್ಟ ಒಂದು ಪೀಪಾಯಿ ಅಲ್ಲಿರುವುದು ಕಂಡಿತು. ಅದನ್ನು ತೆಗೆದುಕೊಂಡು ವಿಮಾನದಲ್ಲಿ ತುಂಬಿ ವಿಮಾನದಲ್ಲಿ ತಿರುಗಿ ತಮ್ಮ ಸ್ಥಳಕ್ಕೆ ಪ್ರಯಾಣ ಬೆಳೆಸಿದರು. ದೇವರು ಎಷ್ಟು ಅದ್ಭುತ ಸ್ವರೂಪನು ನೋಡಿರಿ.

ಎಲ್ಲಾ ಕಡೆಗಳಲ್ಲಿಯೂ ಕಷ್ಟಗಳೇ? ವ್ಯಾಧಿ, ಸೈತಾನ, ಶತೃಗಳಿಂದ ಹಿಂಸೆ ಇವುಗಳಿಂದ ಸೋತುಹೋಗಿರುವಿರಾ? ದೇವರ ಬಳಿಯಲ್ಲಿ ಪ್ರಾರ್ಥಿಸಿರಿ. ಆತನ ಅತಿಶಯವಾದ ಸಂರಕ್ಷಣೆಯನ್ನು ಅನುಭವಿಸಿರಿ.

# ಯಾರು ಬಿಡಿಸುವರು!

ಬೆಳಿಗ್ಗೆ : ವಿಮೋ 27,28
ಸಂಜೆ : ಮತ್ತಾ 21:1–22

**'ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?' (ರೋಮಾ 7:24).**

ಯಾರು ನನ್ನನ್ನು ಬಿಡಿಸುವರು? ಎಂಬುದು ಒಬ್ಬ ಮನುಷ್ಯನ ಕೂಗಲ್ಲ, ಇಡೀ ಮಾನವ ಕುಲದ ಕೂಗಾಗಿರುವದು. ಪ್ರತಿ ಮನುಷ್ಯನಲ್ಲಿಯೂ ಯಾವದೋ ಒಂದು ಬಲಹೀನತೆ ಅಥವಾ ಪಾಪಸ್ವಭಾವ ಅವನಲ್ಲಿರುವದು. ಅದರಿಂದ ಅವನಿಗೆ ಬಿಡುಗಡೆ ಬೇಕಾಗಿರುವದು. ಪ್ರತಿಯೊಬ್ಬ ಮನುಷ್ಯನೂ, ಪರಿಶುದ್ಧ ಜೀವಿತವನ್ನು ಬಯಸುವನು. ಅವನ ಮನಸ್ಸಾಕ್ಷಿ ಅದನ್ನು ಅಪೇಕ್ಷಿಸುವದು. ಸಮಾಜವೂ ಅದನ್ನೇ ನಿರೀಕ್ಷಿಸುವದು. ಆದರೆ ಮನುಷ್ಯನೋ ಪಾಪಭೋಗಗಳಿಗೆ ದಾಸನಾಗಿ, ದಿನ ಕಳೆದಂತೆಲ್ಲಾ, ಬಿಡುಗಡೆ ಇಲ್ಲದೆ, ಸೈತಾನನ ಹಿಡಿತದಲ್ಲಿ ಬೀಳುವನು. ಅವನು ಮಾಡಬೇಕೆಂದು ನೆನಸಿದ್ದನ್ನು ಮಾಡದೆ, ಮಾಡಬಾರದ್ದನ್ನು ಮಾಡುವನು. ಪ್ರಪಂಚದ ಕಾನೂನು ಕಟ್ಟಳೆಗಳು ತಡೆಯಲು ಪ್ರಯತ್ನಿಸಿದರೂ, ಅವನು ಸೈತಾನನಿಂದ ಬಿಡುಗಡೆ ಹೊಂದಲು ಸಾಧ್ಯವಾಗದೆ ಹೋಗುವದು.

ಮಧ್ಯಪಾನ ಮಾಡಬಾರದೆಂಬುದು ಎಲ್ಲರಿಗೂ ತಿಳಿದಿದೆ. ಕುಡಿಕತನದಿಂದ ಜೀವನ ಹಾಳಾಗುವದು ಕುಟುಂಬ ನಾಶವಾಗುವದು, ಮಕ್ಕಳ ಭವಿಷ್ಯ ಹಾಳಾಗುವದು ಎಂದು ತಿಳಿದಿದ್ದರೂ ಕುಡುಕನು ಅದನ್ನು ಬಿಟ್ಟು ಬಿಡಲಾಗದ ಸ್ಥಿತಿಯಲ್ಲಿರುವನು. ಅವನನ್ನು ಕುಡಿಯುವಂತೆ ಪ್ರೇರೇಪಿಸಿ, ಸೈತಾನನ ಶಕ್ತಿ ಅವನನ್ನು ಆವರಿಸಿರುವದು. ಅದೇ ರೀತಿ ಕಳ್ಳನಿಗೂ ತಾನು ಕಳ್ಳತನ ಮಾಡಬೇಕೆಂಬ ಪ್ರೇರಣೆ ಉಂಟಾಗುವದು. ಅವನು ಎಷ್ಟೇ ಬಾರಿ ಸೆರೆಮನೆಗೆ ಹೋಗಿ ಬಂದರೂ, ಪುನಃ ಕಳ್ಳತನ ಮಾಡುವನು. ಇಂಥವರೆಲ್ಲರೂ, ಸೈತಾನನ ದಾಸರಾಗಿ, ಅವನ ಹಿಡಿತದಿಂದ ಬಿಡಿಸಿಕೊಳ್ಳಲಾರದವರಾಗಿರುವರು. ದುರವಸ್ಥೆಯಲ್ಲಿ ಬಿದ್ದ ಮನುಷ್ಯನು ಯಾರು ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವರು? ಎಂದು ಗೋಳಾಡಿದ ವ್ಯಕ್ತಿ ಒಬ್ಬ ಕುಡುಕನೂ ಅಲ್ಲ ಕಳ್ಳನೂ ಅಲ್ಲ, ಅವನು ಒಬ್ಬ ಭಕ್ತನು ರಕ್ಷಿಸಲ್ಪಟ್ಟು, ಅಭಿಷೇಕಿಸಲ್ಪಟ್ಟು ದೇವಸೇವೆ ಮಾಡುವಾತನು. ಆದರೆ ಕೆಲವು ವಿಷಯಗಳಲ್ಲಿ ಅವನಿಗೆ ಬಿಡುಗಡೆ ಇಲ್ಲ, ಆತನೇ ಅಪೊಸ್ತಲನಾದ ಪೌಲನು ಈ ಸಮಸ್ಯೆಯ ಕುರಿತು ರೋಮಾಪುರ ಪತ್ರಿಕೆ 7ನೇ ಅಧ್ಯಾಯ ಪೂರ್ತಿ ಆತನು ಬರೆದಿರುವನು.

ದೇವಮಕ್ಕಳೇ, ಪೌಲನಂತೆಯೇ ಯಾವದಾದರೊಂದು ಸ್ವಭಾವದಿಂದ ನೀವು ಬಳಲುತ್ತಿರಬಹುದು ನೀವು ರಕ್ಷಿಸಲ್ಪಟ್ಟ ಕ್ರೈಸ್ತರೇ, ಆದರೆ ಕೋಪ ಬರುವದು. ವ್ಯರ್ಥ ಮಾತುಗಳಿಂದ, ಚಾಡಿಮಾತುಗಳಿಂದ, ಬಿಡುಗಡೆ ಇಲ್ಲದೇ ಇರಬಹುದು. ಕ್ರಿಸ್ತನ ಮೂಲಕ ಬಿಡುಗಡೆಯ ಬಾಗಿಲನ್ನು ತೆರೆದಿರುವನು. "ಕುಮಾರನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು" (ಯೋಹಾ 8:36).

**ನೆನಪಿಗೆ : 'ಕರ್ತನ ಕಡೆಗೆ ತಿರುಗಿ ಕೊಂಡಾಗಲೇ ಆ ಮುಸುಕು ತೆಗೆಯಲ್ಪಡುವದು. ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು' (2ಕೊರಿ 3:17).**

# ಹೊರೆಗಳನ್ನು ನೀಗಿಸುವನು!



**'ಐಗುಪ್ತ್ಯರು ಮಾಡಿಸುವ ಬಿಟ್ಟೀ ಸೇವೆಯನ್ನು ನಾನು ನಿಮಗೆ ತಪ್ಪಿಸಿದಾಗ ಯೆಹೋವನು ಎಂಬ ನಾನೇ....ತಿಳಿದುಬರುವದು' (ವಿಮೋ 6:7).**

ಐಗುಪ್ತ ಎಂಬದು ದಾಸತ್ವದ ಪ್ರಪಂಚವನ್ನೂ, ಅಂದರೆ ಆಸೆ ಇಚ್ಛೆಗಳನ್ನು ಸೂಚಿಸುವದು. ಫರೋಹನ ಎಂಬುವನು, ಸೈತಾನನಿಗೆ ಗುರುತಾಗಿರುವನು. ಐಗುಪ್ತದಲ್ಲಿದ್ದ ಇಸ್ರಾಯೇಲ್ಯರು ಒಂದೆರಡು ವರುಷಗಳಲ್ಲ ನಾನ್ನೂರು ವರುಷಗಳು ದಾಸತ್ವದಲ್ಲಿ ಬಹಳವಾಗಿ ಕಷ್ಟವನ್ನು ಅನುಭವಿಸಿದರು.

ಇಸ್ರಾಯೇಲ್ಯರನ್ನು ಐಗುಪ್ತದ ದಾಸತ್ವದಿಂದ ಬಿಡುಗಡೆಗೊಳಿಸಲು, ಕರ್ತನು ಮೋಶೆಯನ್ನು ಎಬ್ಬಿಸಿದನು. ಇಸ್ರಾಯೇಲ್ಯರಿಗೆ ಸಿಕ್ಕಿದ ಬಿಡುಗಡೆ ಲೌಕೀಕ ರೀತಿಯ ಬಿಡುಗಡೆ. ಆದರೆ ಆತ್ಮೀಕ ರೀತಿಯಲ್ಲಿ ಪ್ರಪಂಚ, ಶರೀರ, ಸೈತಾನನಿಂದ ಬಿಡುಗಡೆ ಮಾಡಲು, ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಪ್ರಪಂಚಕ್ಕೆ ಕಳುಹಿಸಿದನು. "ಆತನು ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ, ಅವರನ್ನು ಕಾಯುವನು" (ಮತ್ತಾ 1:21). ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ರಕ್ಷಕನೆಂದು ಅರ್ಥ. ಆದ್ದರಿಂದಲೇ, ಬಿಡುಗಡೆ ನಾಯಕ, ಜಯವನು ಕೊಡುವನು ಎಂದು ಹಾಡುತ್ತೇವೆ. ಹೌದು ಆತನೊಬ್ಬನೇ ಸೈತಾನನ ಕೈಯಿಂದಲೂ, ದುಷ್ಟ ಶಕ್ತಿಗಳಿಂದಲೂ, ಜನರನ್ನು ಬಿಡಿಸುವಾತನು. ದಾವೀದನು ಹೇಳುತ್ತಾನೆ "ದೇವರು ಅವನನ್ನು ಕೈಬಿಟ್ಟಿದ್ದಾನೆ ಬೆನ್ನಟ್ಟಿಹಿಡಿಯಿರಿ. ಬಿಡಿಸುವವರು ಯಾರೂ ಇಲ್ಲ ಎಂದು ಹೇಳಿಕೊಳ್ಳುತ್ತಾರೆ" (ಕೀರ್ತ 71:11). ಎಂದೂ, "ನನ್ನ ಕೇಡಿಗೆ ಪ್ರಯತ್ನಿಸಿದವರು ಆಶಾಭಂಗ ಪಟ್ಟು ಅಪಮಾನ ಹೊಂದಿದ್ದಾರೆ. ಆದುದರಿಂದ ನನ್ನ ನಾಲಿಗೆಯು ದಿನವೆಲ್ಲಾ ನಿನ್ನ ನೀತಿ ಸಾಧನೆಯನ್ನು ವರ್ಣಿಸುತ್ತಿರುವದು (ಕೀರ್ತ 71:24) ಎಂದೂ ಹೇಳುತ್ತಾನೆ. ಹೌದು ಕರ್ತನು ತನ್ನ ಮಕ್ಕಳ ಕಷ್ಟ ಸಂಕಟಗಳ ಹೊರೆಯನ್ನು ನೀಗಿಸುವಾತನಾಗಿರುವನು. ತನ್ನನ್ನು ನಂಬಿ, ಮೊರೆಯಿಡುವ ತನ್ನ ಮಕ್ಕಳನ್ನು ಆತನು ಎಂದಿಗೂ ಕೈ ಬಿಡದ ದೇವರಾಗಿರುವನು.

ದೇವಮಕ್ಕಳೇ, ಬಿಡುಗಡೆ ನೀಡುವ ಕ್ರಿಸ್ತನು ಇನ್ನೂ ಜೀವಿಸುವಾತನಾಗಿರುವನು. ಬಿಡುಗಡೆಗಾಗಿ ನೀವು ಮಾಡುವ ಪ್ರತಿಯೊಂದು ಪ್ರಾರ್ಥನೆಯನ್ನು ಆತನು ಕೇಳಿ ನಿಶ್ಚಯವಾಗಿ ನಿಮ್ಮನ್ನು ಬಿಡಿಸಿ ಕಾಪಾಡುವನು. "ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನಿವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು" (ಮತ್ತಾಯ 11:28).

**ನೆನಪಿಗೆ : 'ಐಗುಪ್ತ್ಯರ ಕೈಯಿಂದಲೂ, ಫರೋಹನ ಕೈಯಿಂದಲೂ ನಿಮ್ಮನ್ನು ಬಿಡುಗಡೆ ಮಾಡಿದ ಯೆಹೋವನಿಗೆ ಸ್ತೋತ್ರವಾಗಲಿ' (ವಿಮೋ 18:10).**

## ಬಿಡುಗಡೆಗೊಳಿಸುವ ಅಧಿಕಾರ!

ಬೆಳಿಗ್ಗೆ : ವಿಮೋ 31,32,33
ಸಂಜೆ : ಮತ್ತಾ 22:1–22

**'ನಿನ್ನನ್ನು ಬಿಡಿಸುವ ಅಧಿಕಾರವೂ ನಿನಗೆ ಗೊತ್ತಿಲ್ಲವೊ?' (ಯೋಹಾ 19:10).**

ಅನೇಕರು ತಮ್ಮ ಅಧಿಕಾರದಿಂದಲೂ ತಮಗೆ, ಸಿಕ್ಕಿರುವ ಪದವಿಗಳಿಂದಲೂ, ಇತರರನ್ನು ಬಿಡುಗಡೆ ಮಾಡಬಹುದೆಂದು ಭಾವಿಸಿರುವರು. ರೋಮ್ ಸರ್ಕಾರದಲ್ಲಿ ಗೌರ್ನರ್ ಪದವಿಯಲ್ಲಿದ್ದ ಪಿಲಾತನು, ಯೇಸುಕ್ರಿಸ್ತನನ್ನು ನೋಡಿ, "ನಿನ್ನನ್ನು ಬಿಡಿಸುವ ಅಧಿಕಾರವು ತನಗಿರುವದೆಂದು ನಿನಗೆ ಗೊತ್ತಿಲ್ಲವೋ? ಎಂದು ಕೇಳಿದನು. ಅದನ್ನು ಕೇಳಿದ ಕ್ರಿಸ್ತನಿಗೆ ನಗು ಬಂದಿರಬೇಕು. ಯಾಕೆಂದರೆ ನಿಜವಾಗಿ ಆ ಅಧಿಕಾರ ಇರುವದು ಕ್ರಿಸ್ತನಿಗೇ, ಆತನೊಬ್ಬನೇ ಆಕಾಶದಲ್ಲೂ ಭೂಮಿಯಲ್ಲೂ ಸಕಲ ಅಧಿಕಾರವನ್ನು ಹೊಂದಿರುವವನು. ದೆವ್ವಗಳನ್ನು ಓಡಿಸುವ ವ್ಯಾಧಿಗಳನ್ನು ಗುಣಪಡಿಸುವ ಕಟ್ಟುಗಳಿಂದ ಬಿಡಿಸುವ ಅಧಿಕಾರವನ್ನು ಹೊಂದಿರುವಾತನು.

ಪಿಲಾತನ ಮಾತಿಗೆ, ಕ್ರಿಸ್ತನು ಅವನನ್ನು ನೋಡಿ "ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ, ಯಾವ ಅಧಿಕಾರವೂ ಇರುತ್ತಿರಲಿಲ್ಲ. ಆದ್ದರಿಂದ ನಿನಗೆ ಒಪ್ಪಿಸಿದವನಿಗೆ ಹೆಚ್ಚಿನ ಪಾಪ ಉಂಟು ಅಂದನು. ಈ ಮಾತಿನ ದೆಸೆಯಿಂದ ಪಿಲಾತನು ಆತನನ್ನು ಬಿಡಿಸುವದಕ್ಕೆ ಪ್ರಯತ್ನ ಪೇಚಾಡಿದನು. ಆದರೆ ಯೆಹೂದ್ಯರು ಇವನನ್ನು ಬಿಡಿಸಿದರೆ ನೀನು ಕೈಸರನಿಗೆ ಮಿತ್ರನಲ್ಲ" ಎಂದು ಕೂಗಿದರು (ಯೋಹಾ 19:11,12). ಯೆಹೂದ್ಯರು ಯೇಸುಕ್ರಿಸ್ತನಿಗೆ ವಿರೋಧವಾಗಿ ಕೂಗಿದ್ದರಿಂದ, ಪಿಲಾತನು ಬಿಡುಗಡೆ ಮಾಡುವ ಅಧಿಕಾರವನ್ನು ಚಲಾಯಿಸಲಾಗಲಿಲ್ಲ. ಇಂಥಹ ಅನೇಕ ಸುಳ್ಳು ನಾಯಕರು ಇರುವರು, ದಾರ್ಯಾವೇಷನು, ಚಕ್ರವರ್ತಿಯಾಗಿದ್ದರೂ, ದಾನಿಯೇಲನನ್ನು ಸಿಂಹದ ಗವಿಯಿಂದ, ಬಿಡುಗಡೆ ಮಾಡಲಾಗಲಿಲ್ಲ. ದೇಶಾಧಿಪತಿಗಳನ್ನು ಪ್ರಧಾನಿಗಳನ್ನು ಎದುರು ಹಾಕಿಕೊಂಡು ತನ್ನ ಆಜ್ಞೆಯನ್ನು ಬದಲಿಸದೇ ಹೋದನು. ಆದರೆ ಯೇಸುಕ್ರಿಸ್ತನು ಅಂಥವನಲ್ಲ, ತನ್ನ ಬಳಿಗೆ ಬರುವ ಪ್ರತಿಯೊಬ್ಬರನ್ನೂ ತಳ್ಳಿ ಬಿಡದೆ ನಿಮ್ಮ ಎಲ್ಲಾ ಸಮಸ್ಯೆಗಳಿಂದ, ಬಿಡುಗಡೆ ಮಾಡಲು ಸಮರ್ಥನಾಗಿರುವನು. "ಆತನು ನುಡಿದ ಮಾತ್ರಕ್ಕೆ ಆಗುವದು, ಆಜ್ಞಾಪಿಸಿದರೆ ಸ್ಥಾಪನೆಯಾಗುವದು" (ಕೀರ್ತ 33:9). ಶತಾಧಿಪತಿ ಯೇಸುವಿನ ಬಳಿ ಬಂದಾಗ, ತನ್ನ ಆಳಿನ ಸ್ವಸ್ಥತೆಗಾಗಿ ಬೇಡಿದಾಗ ಆ ಕ್ಷಣದಲ್ಲೇ ಆ ಆಳಿಗೆ ಗುಣವಾಯಿತು.

ದೇವಜನರೇ, ನಿಮ್ಮ ಸಮಸ್ಯೆಗಳೇನೇ ಇರಲಿ, ಯೇಸುಕ್ರಿಸ್ತನ ಬಳಿಗೆ ಬನ್ನಿರಿ. ನಿಮ್ಮನ್ನು ಬಿಡುಗಡೆಗೊಳಿಸುವದಕ್ಕಾಗಿ ತನ್ನ ಅಮೂಲ್ಯ ರಕ್ತವನ್ನೇ ಚೆಲ್ಲಿರುವನು. ನಿಮ್ಮ ಬಿಡುಗಡೆಗಾಗಿ, ನೀವು ಯಾವದೇ ಕ್ರಯ ತೆರಬೇಕಾಗಿಲ್ಲ. ಆತನೇ ನಿಮ್ಮನ್ನು ಬಿಡುಗಡೆ ಮಾಡುವನು.

**ನೆನಪಿಗೆ : 'ಯೆಹೋವನು ತನ್ನ ಪ್ರಜೆಯನ್ನು ಸಂತೈಸಿ ದಿಕ್ಕಿಲ್ಲದ ತನ್ನ ಜನರನ್ನು ಕರುಣಿಸುತ್ತಿದ್ದಾನೆ' (ಯೆಶಾ 19:49).**

# ಅಬ್ರಹಾಮನ ವಂಶಸ್ಥಳು!

ಬೆಳಿಗ್ಗೆ : ವಿಮೋ 34,35
ಸಂಜೆ : ಮತ್ತಾ 22:23–46

**'ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್‌ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ ಅಂದನು' (ಲೂಕ 13:16).**

ಅನೇಕ ಜನರು ಈ ಪ್ರಪಂಚದಲ್ಲಿ ಹಲವು ರೀತಿಯ ಕಟ್ಟುಗಳಲ್ಲಿ ಸಿಲುಕಿ ತಮಗೆ ಯಾರು ಬಿಡುಗಡೆ ನೀಡುವರು ಎಂದು ಹಲುಬುತ್ತಿರುವರು. ಕೆಲವರಿಗೆ ಮರಣದ ಕಟ್ಟು, ಕೆಲವರಿಗೆ ನೆಮ್ಮದಿಯನ್ನು ಹಾಳುಮಾಡುವ ಕಟ್ಟು, ಇನ್ನು ಕೆಲವರಿಗೆ ವ್ಯಾಧಿಯಕಟ್ಟು.

ಒಂದು ದೇವಾಲಯದಲ್ಲಿ, ಹದಿನೆಂಟು ವರುಷಗಳಿಂದ ಸೈತಾನನಿಂದ ಬಿಡುಗಡೆ ಹೊಂದಲಾರದೆ ಇದ್ದ ಒಬ್ಬ ಸ್ತ್ರೀಯನ್ನು ಯೇಸುಕ್ರಿಸ್ತನು ಕಂಡನು. ಆ ಕಟ್ಟಿನ ಹಿಂದೆ ಒಂದು ದುರಾತ್ಮವಿರುವ ಸಂಗತಿ. ದೇವಾಲಯದ ಯಾಜಕನಿಗಾಗಲಿ, ಬೇರೆ ಯಾರಿಗಾಗಲಿ ತಿಳಿಯದಾಗಿತ್ತು. ಆ ಕಟ್ಟು ಅವಳನ್ನು ನಡುಬಗ್ಗಿದವಳನ್ನಾಗಿಸಿತ್ತು. ಆ ಆತ್ಮ ಅವಳನ್ನು ಬಲಹೀನಗೊಳಿಸಿತ್ತು. ಅವಳು ಅಬ್ರಹಾಮನ ವಂಶಸ್ಥಳು ಎಂದೂ, ಅಬ್ರಹಾಮನಲ್ಲಿ ಕರ್ತನು ಮಾಡಿದ ಒಡಂಬಡಿಕೆಯ ವಾಗ್ದಾನ ಅವಳಿಗೆ ಇರುವದೆಂದು, ಬಿಡುಗಡೆ ಹೊಂದಬೇಕಾದವಳು ಎಂದು. ಅವರು ತಿಳಿದಿರಲಿಲ್ಲ ಹೊರನೋಟಕ್ಕೆ ಗುರುತಿಸಲಾರದಂಥ ಬಲಹೀನಗೊಳಿಸುವ ದುರಾತ್ಮ ಒಂದು ಅವಳನ್ನು ಹಿಡಿದು ಕೊಂಡಿತ್ತು. ಯೇಸು ಕ್ರಿಸ್ತನು ಅವಳ ಮೇಲೆ ಕನಿಕರಗೊಂಡು, ಅವಳ ಮೇಲೆ ತನ್ನ ಕೈಗಳನ್ನಿಟ್ಟನು. "ಅಮ್ಮಾ ನಿನ್ನ ಬಲಹೀನತೆಯಿಂದ ಬಿಡುಗಡೆ ಹೊಂದಿದ್ದೀ" ಎಂದು ಹೇಳಿ ಸ್ವಸ್ಥವಾಗಿಸಿದನು.

ಇಂದು ಪ್ರಪಂಚವು, ಅದರ ಅಧಿಪತಿಯಾದ ಸೈತಾನನ ಹಿಡಿತದಲ್ಲಿರುವದು. ಆಕಾಶ ಮಂಡಲದಲ್ಲಿರುವ ದುರಾತ್ಮ ಸೇನೆಗಳು, ಮನುಷ್ಯನ ಆತ್ಮ, ಪ್ರಾಣ, ಶರೀರವನ್ನು ದಾಸತ್ವದಲ್ಲಿಟ್ಟಿರುವದು. ಅನೇಕ ರೀತಿಯ ಕಟ್ಟುಗಳು, ದುರಾತ್ಮಗಳು ಪ್ರಪಂಚದಲ್ಲಿರುವದು ಆದರೆ ಬಿಡುಗಡೆಗೊಳಿಸುವವನು ಯೆಸುಕ್ರಿಸ್ತನೊಬ್ಬನೇ. ಆತನು ನಿಮಗಾಗಿ ಚೆಲ್ಲಿದ ರಕ್ತವು ನಿಮ್ಮನ್ನು ಬಿಡುಗಡೆ ಮಾಡುವದು. ಆತನ ಮಾತುಗಳು ಸತ್ಯವೇದ ವಾಕ್ಯಗಳು, ನಿಮ್ಮನ್ನು ಬಿಡುಗಡೆ ಮಾಡುವದು.

ದೇವಜನರೇ, ಆತನ ನಾಮದ ಮೇಲೆ ಇತರ ಜನಾಂಗದವರು, ನಂಬಿಕೆ ಇಡುವರೆಂದು ಬರೆದಿರುವಂತೆಯೇ, ಅನೇಕರು ಕ್ರಿಸ್ತನ ಮೇಲೆ ನಂಬಿಕೆ, ಪ್ರೀತಿಯನ್ನಿಟ್ಟು, ಆತನನ್ನು ಅಂಗೀಕರಿಸಿಕೊಂಡಿರುವರು. ಇಂದು ಯೇಸುಕ್ರಿಸ್ತನನ್ನು ಕರೆಯಿರಿ. ಆತನ ಕೃಪೆ ನಿಮ್ಮ ಮೇಲೆ ಇಳಿದು ಬಿಡುಗಡೆ ನೀಡುವನು.

**ನೆನಪಿಗೆ : 'ನಾನಾದರೋ ಕುಗ್ಗಿದವನೂ ದಿಕ್ಕಿಲ್ಲದವನೂ ಆಗಿದ್ದೇನೆ; ಕರ್ತನೇ ನನ್ನ ಹಿತಚಿಂತಕನು. ನನ್ನ ದೇವರೇ, ನೀನೇ ನನಗೆ ಸಹಾಯಕನೂ ರಕ್ಷಕನೂ ಆಗಿದ್ದೀ; ತಡಮಾಡಬೇಡ' (ಕೀರ್ತ 40:17).**

# ಬೇಟೆಗಾರನ ಬಲೆ!

ಬೆಳಿಗ್ಗೆ : ವಿಮೋ 36,37,38
ಸಂಜೆ : ಮತ್ತಾ 23:1–22

**'ನಿನ್ನನ್ನು ಬೇಟೆಗಾರನ ಬಲೆಯಿಂದಲೂ....ತಪ್ಪಿಸುವವನು ಆತನೇ' (ಕೀರ್ತ 91:3).**

ಬಲೆಯನ್ನು ಇಡುವವನು, ಸೈತಾನನು. ಆದರೆ, ಬಲೆಯಿಂದ ಬಿಡಿಸಿ, ಬಿಡುಗಡೆಗೊಳಿಸುವಾತನು ಕರ್ತನು. ಬೇಡನು ಪಕ್ಷಿಗಳಿಗೆ ಮೃಗಗಳಿಗೆ ಬಲೆ ಬೀಸುವನು. ಸೈತಾನನೋ, ಮನುಷ್ಯನಲ್ಲಿರುವ ಅಮೂಲ್ಯವಾದ ಆತ್ಮಕ್ಕೆ ಬಲೆ ಬೀಸುವನು.

ಎಲ್ಲಾ ಪಕ್ಷಿಗಳಿಗೂ, ಮೃಗಗಳಿಗೂ, ಒಂದೇ ರೀತಿಯ ಬಲೆಯನ್ನು ಬೇಡನು ಬೀಸುವದಿಲ್ಲ. ಪಕ್ಷಿಗಳನ್ನು ಹಿಡಿಯಲು ಧಾನ್ಯಗಳನ್ನು ಇಡುವನು. ಇಲಿಯನ್ನು ಹಿಡಿಯಲು ಮಸಾಲೆ ವಡೆಯನ್ನು ಇಡುವರು. ಮೀನುಹಿಡಿಯಲು ಕೊಕ್ಕೆಯಲ್ಲಿ ಹುಳುವನ್ನು ಸಿಕ್ಕಿಸುವರು. ಆನೆಯನ್ನು ಹಿಡಿಯಲು ದೊಡ್ಡ ಹಳ್ಳವನ್ನು ತೋಡಿ, ಮೇಲೆ ಎಲೆಗಳನ್ನು ಗರಿಗಳನ್ನು ಹರವಿ, ಅದರ ಮೇಲೆ ಕಬ್ಬುಗಳನ್ನು ಇಡುವರು. ಅದು ಆಸೆಯಾಗಿ ತಿನ್ನಲು ಬರುವಾಗ ಹಳ್ಳದಲ್ಲಿ ಬಿದ್ದು ಸಿಕ್ಕಿಕೊಳ್ಳುವದು.

ಯಾಕೋಬನು, ತನ್ನ ಅಣ್ಣನ ಜೇಷ್ಠಪುತ್ರ ಹಕ್ಕನ್ನು ಕಸಿದುಕೊಳ್ಳಲು, ಬಲೆಯಂತೆ ಕೆಂಪು ಗುಗ್ಗರಿಯನ್ನು ಬೇಯಿಸುತ್ತಿದ್ದನು. ಜ್ಞಾನಿಯಾದ ಸೊಲೊಮೋನನನ್ನು ಹಿಡಿಯಲು ಸೈತಾನನು ಅನ್ಯ ಸ್ತ್ರೀಯರನ್ನು ಬಲೆಯಾಗಿ ಇಟ್ಟನು. ಹೀಗೆಯೇ ಇಸ್ರಾಯೇಲ್ಯರ ನ್ಯಾಯಾಧಿಪತಿಯಾದ ಸಂಸೋನನು, ಶಾರೀರಿಕ ಇಚ್ಛೆ ಬಯಸಿ, ತನ್ನ ಬಲವನ್ನು ಕಳೆದುಕೊಂಡು, ಕುರುಡನಾದನು. ತನ್ನ ಕರೆಯನ್ನು, ಆರಿಸಿ ಕೊಳ್ಳುವಿಕೆಯನ್ನು ನಷ್ಟಪಡಿಸಿಕೊಂಡನು.

ಬಲೆ ಎಂಬುದು, ಮರೆಯಾಗಿ ಇಡಲ್ಪಟ್ಟಿರುವದು ಅನೇಕರು ಅದನ್ನು ನೋಡುವದಿಲ್ಲ, ಆದರೆ ಅಲ್ಲಿ ಇಟ್ಟಿರುವ ಸುಖ ಭೋಗಗಳನ್ನು ಮಾತ್ರ ನೋಡುವರು. ಬಲೆಯ ಹಿಂದೆ ಶತ್ರುವಾದ ಸೈತಾನನು ಇರುವನು. ದಾವೀದನು ಬಲೆಯ ಕುರಿತು ಕೀರ್ತನೆ ಪುಸ್ತಕದಲ್ಲಿ ಅಧಿಕವಾಗಿ ಬರೆದಿರುವನು. ಅವನ ಸ್ವಂತ ಮಾವನಾದ ಸೌಲನು, ದಾವೀದನಿಗೆ ವಿರೋಧವಾಗಿ ಬಲೆಯನ್ನಿಟ್ಟನು. ಅದಕ್ಕಾಗಿ ತನ್ನ ಮಗಳಾದ ಮಿಾಕಲಳನ್ನು ದಾವೀದನಿಗೆ ಮದುವೆ ಮಾಡಿದನು. ದಾವೀದನನ್ನು ಕೊಲ್ಲಬೇಕೆಂಬದೇ ಸೌಲನ ಉದ್ದೇಶವಾಗಿತ್ತು (1ಸಮು 18:21–25). ದಾವೀದನು ತನ್ನ ಅನುಭವದಿಂದ ಹೀಗೆ ಬರೆಯುತ್ತಾನೆ – "ನಮ್ಮ ಜೀವವು ಬೇಡೆಗಾರನ ಬಲೆಯಿಂದ ತಪ್ಪಿಸಿಕೊಂಡ ಪಕ್ಷಿಯಂತಿದೆ. ಬಲೆಯು ಹರಿದು ಹೋಯಿತು, ನಾವು ತಪ್ಪಿಸಿಕೊಂಡೆವು. ಭೂಮ್ಯಾಕಾಶಗಳನ್ನು ಉಂಟು ಮಾಡಿದ ಯೆಹೋವನ ನಾಮದಲ್ಲಿ ನಮಗೆ ರಕ್ಷಣೆಯಾಗುವದು (ಕೀರ್ತ 124:7,8) ಎಂದು.

ದೇವಮಕ್ಕಳೇ, ಒಂದು ವೇಳೆ, ನೀವು ಯಾವದಾದರೂ ಬಲೆಯಲ್ಲಿ ಸಿಕ್ಕಿಕೊಂಡಿರುವಿರಾದರೆ ಕರ್ತನ ಬಳಿಗೆ ಬಂದು ಕಣ್ಣೀರಿನಿಂದ ನಿಮ್ಮ ಪಾಪಗಳನ್ನು ಅರಿಕೆ ಮಾಡಿ ನಿಶ್ಚಯವಾಗಿ ಆತನು ಬಿಡಿಸುವನು.

**ನೆನಪಿಗೆ : ಯೆಹೋವನಿಗೆ ಕೊಂಡಾಟವಾಗಲಿ; ಆತನು ನಮ್ಮನ್ನು ಅವರ ಹಲ್ಲುಗಳಿಗೆ ಕೊಳ್ಳೆಕೊಡಲಿಲ್ಲ' (ಕೀರ್ತ 124:4,6).**

# ಇಚ್ಛೆಯೆಂಬ ಬಲೆ!

ಬೆಳಿಗ್ಗೆ : ವಿಮೋ 39,40
ಸಂಜೆ : ಮತ್ತಾ 23:23–39

**'ನಿನ್ನ ಹೃದಯವು ಅವಳ ಬೆಡಗನ್ನು ಮೋಹಿಸದಿರಲಿ, ಅವಳು ತನ್ನ ಕಣ್ಣುರೆಪ್ಪೆಗಳಿಂದ ನಿನ್ನನ್ನು ವಶಮಾಡಿಕೊಂಡಾಳು, ನೋಡಿಕೋ' (ಜ್ಞಾನೋ 6:25).**

ಪ್ರೀತಿ ಬೇರೆ, ಇಚ್ಛೆ ಬೇರೆ, ಪ್ರೇಮ ಬೇರೆ, ಕಾಮ ಬೇರೆ, ಸ್ವಾಭಾವಿಕವಾಗಿ ಗಂಡು ಹೆಣ್ಣು ಒಬ್ಬರನ್ನೊಬ್ಬರು ಬಯಸುವರು. ಆದರೆ ಸೈತಾನನು, ಅದನ್ನು ಉಪಯೋಗಿಸಿಕೊಂಡು, ಜನರನ್ನು ತಪ್ಪಾದ ಮಾರ್ಗದಲ್ಲಿ ನಡೆಸುವನು. ಕೆಲವರು ತಮ್ಮ ಸ್ವಾರ್ಥಕ್ಕಾಗಿ, "ನಿನ್ನನ್ನು ಪ್ರೀತಿಸುವೆನು ನಿನಗಾಗಿ ಪ್ರಾಣವನ್ನೇ ಕೊಡುವೆನು" ಎಂದೆಲ್ಲಾ ಹೇಳಿ ಮೋಸಮಾಡುವರು.

ಜ್ಞಾನಿಯಾದ ಸೊಲೊಮೋನನು, ಒಂದು ಘಟನೆಯನ್ನು ಗಮನಿಸಿದನು. "ಅಲ್ಪ ಬುದ್ಧಿಯುಳ್ಳ ಅನೇಕ ಯುವಕರಲ್ಲಿ, ಜ್ಞಾನಹೀನನಾದ ಒಬ್ಬ ಯೌವನಸ್ಥನು ವೇಶ್ಯಾವೇಷವನ್ನು ಧರಿಸಿದ ಒಬ್ಬ ಕಪಟ ಸ್ತ್ರೀ, ಅವನನ್ನು ಎದುರುಗೊಂಡು, ಬಾ ಬೆಳಗಿನ ತನಕ ಬೇಕಾದಷ್ಟು ರಮಿಸುವ ಕಾಮವಿಲಾಸಗಳಿಂದ ಸಂತೋಷಿಸುವ ಎಂದು ಅವನನ್ನು ತನ್ನ ಸವಿ ಮಾತುಗಳಿಂದ ವಶಪಡಿಸಿಕೊಂಡಳು. ಅವನು ತನ್ನ ಪ್ರಾಣಾಪಾಯವನ್ನು ತಿಳಿಯದೆ ಬಾಣವು ತನ್ನ ಕಾಳಿಜವನ್ನು ತಿವಿಯುವ ಕಡೆಗೆ ತಟ್ಟನೆ ಅವಳ ಹಿಂದೆ ಹೋದನು (ಜ್ಞಾನೋ 7:7,10,18,21,23).

ಆದುದರಿಂದ ಪ್ರಸಂಗಿ, ಯೌವನಸ್ಥರನ್ನು ಎಚ್ಚರಿಸುತ್ತಾ ಹೀಗೆ ಹೇಳುತಾನೆ – "ಯೌವನದಲ್ಲಿಯೇ, ನಿನ್ನ ಸೃಷ್ಟಿಕರ್ತನನ್ನು ಸ್ಮರಿಸು, ಮಣ್ಣುಭೂಮಿಗೆ ಸೇರಿ ಇದ್ದ ಹಾಗಾಗುವದು, ಆತ್ಮವು ತನ್ನನ್ನು ದಯಪಾಲಿಸಿದ ದೇವರ ಬಳಿಗೆ ಸೇರುವದು; ಇಷ್ಟರೊಳಗಾಗಿ ಕರ್ತನನ್ನು ಸ್ಮರಿಸದೇ ಇರಬೇಡ' ಎಂದು (ಪ್ರಸ 12:1,7). ದಾವೀದನು ತನ್ನ ಜೀವಿತದ ಅನುಭವದಿಂದ, ಯೌವನಸ್ಥರಿಗೆ ಹೇಳುವ ಬುದ್ಧಿವಾದ ಏನು ಗೊತ್ತೇ? "ಯೌವನಸ್ಥನು ತನ್ನ ನಡತೆಯನ್ನು ಶುದ್ಧಪಡಿಸಿಕೊಳ್ಳುವದು ಯಾವದರಿಂದ? ನಿನ್ನ ವಾಕ್ಯವನ್ನು ಗಮನಿಸಿ ನಡೆಯುವದರಿಂದಲೇ, ನಾನು ನಿನಗೆ ವಿರೋಧವಾಗಿ ಪಾಪ ಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ" (ಕೀರ್ತ 119:9,11).

ದೇವಮಕ್ಕಳೇ, ನೀವು ಬಲೆಗಳಲ್ಲಿ ಸಿಕ್ಕಿಕೊಳ್ಳದಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ. ನಮ್ಮ ಜ್ಞಾನೇಂದ್ರಿಯಗಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳಬೇಕು. ಸತ್ಯವೇದವು "ಆತ್ಮವನ್ನು ಸ್ವಾದೀನ ಮಾಡಿಕೊಳ್ಳದವನು ಗೋಡೆ ಬಿದ್ದ ಹಾಳೂರಿಗೆ ಸಮಾನ" (ಜ್ಞಾನೋ 25:28) ಎಂದು ಹೇಳುತ್ತದೆ. "ದಾಟುವ ಮೊದಲು ಮುಂದೆ ಏನಿರುವದು ಎಂಬುದನ್ನು ಗಮನಿಸಿ ದಾಟು" ಎಂಬುದು ಆಂಗ್ಲ ಭಾಷೆಯಲ್ಲಿನ ಗಾದೆಯಾಗಿದೆ.

**ನೆನಪಿಗೆ : 'ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ' (ರೋಮಾ 8:1,2).**

# ಮೂರು ಉರುಲುಗಳು!

ಬೆಳಿಗ್ಗೆ : ಯಾಜಕ 1,2,3
ಸಂಜೆ : ಮತ್ತಾ 24:1–28

**ಸೇರುವ ದೇಶದ ನಿವಾಸಿಗಳ ಸಂಗಡ ಯಾವ ಒಡಂಬಡಿಕೆಯನ್ನೂ ಮಾಡಿಕೊಳ್ಳಬಾರದು ... ಮಾಡಿಕೊಂಡರೆ ಅದು ನಿಮ್ಮ ಮಧ್ಯದಲ್ಲಿ ಉರುಲಿನಂತಿರುವದು (ವಿಮೋ 34:12)**

ಇಪ್ಪತ್ತು ಲಕ್ಷಕ್ಕೂ ಮೇಲ್ಪಟ್ಟ, ಇಸ್ರಾಯೇಲ್ಯರನ್ನು ಮೋಶೆ ಐಗುಪ್ತ ದೇಶದಿಂದ ಹೊರಡಿಸಿ, ಕಾನಾನಿನ ಕಡೆಗೆ ನಡೆಸಿಕೊಂಡು ಹೋದನು. ಕಾನಾನೆಂಬದು ಹಾಲೂ, ಜೇನೂ ಹರಿಯುವ ದೇಶ. ಮೂಲಪಿತೃಗಳಿಗೆ ವಾಗ್ದಾನಿಸಲ್ಪಟ್ಟ ದೇಶ. ಅಲ್ಲಿ ಏಳು ಜನಾಂಗಗಳು, ಮೂವತ್ತೊಂದು ರಾಜರು ಇದ್ದರು. ಮೋಶೆ, ಒಬ್ಬ ಆತ್ಮೀಕ ತಂದೆಯಂತೆ, ಅನ್ಯಜನಾಂಗಗಳೊಂದಿಗೆ ಹೇಗೆ, ನಡೆದುಕೊಳ್ಳಬೇಕು? ಅವರು ಹೇಗೆ ಮೂರು ಉರುಲುಗಳನ್ನು ಒಡ್ಡುವರು? ಎಂದು ಹೇಳಿ ಇಸ್ರಾಯೇಲ್ಯರನ್ನು ಎಚ್ಚರಿಸಿದನು.

**1. ಒಡಂಬಡಿಕೆಯೆಂಬ ಉರುಲು :** ಕರ್ತನು ಇಡೀ ದೇಶವನ್ನು ನಿಮ್ಮ ಕೈಗಳಲ್ಲಿ ಒಪ್ಪಿಸಿಕೊಟ್ಟಿರುವಾಗ, ಆ ಕಾನಾನಿನ ನಿವಾಸಿಗಳೊಂದಿಗೆ, ರಾಜರೊಂದಿಗೆ, ಒಡಂಬಡಿಕೆ ಮಾಡಿಕೊಂಡು ಸಂಧಾನಮಾಡಿಕೊಳ್ಳಬಾರದು. ಅದು ನಿಧಾನವಾಗಿ ಅವರಿಗೆ ಉರುಲಾಗಿ ಬಿಡುವರು. ಅದರಂತೆಯೇ ಹೊಸ ಒಡಂಬಡಿಕೆಯಲ್ಲಿರುವ ನಮಗೂ ಸಹ, ಅಪೊ.ಪೌಲನು ಉರುಲನ್ನು ಕುರಿತು ಎಚ್ಚರಿಕೆ ನೀಡುವನು. ಅದು ಏನು? "ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ. ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವನಿಗೂ ಪಾಲುಗಾರಿಕೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದೆವಲ್ಲಾ" (2ಕೊರಿ 6:14–16).

**2. ವಿಗ್ರಹಾರಾಧನೆ ಎಂಬ ಉರುಲು :** ಅನ್ಯಜನಾಂಗದ ದೇಶವನ್ನು ನೀವು ಸ್ವತಂತ್ರಿಸಿಕೊಳ್ಳುವಾಗ, ಅಲ್ಲಿರುವ ವಿಗ್ರಹಗಳನ್ನು ಸುಟ್ಟು ಬಿಡಬೇಕು. ಅವುಗಳನ್ನು ನಮಸ್ಕರಿಸುವದೋ, ಅಡ್ಡಬೀಳುವದೋ ಮಾಡಬಾರದು. ಅದು ನಿಮಗೆ ಉರುಲಾಗಿರುವದೆಂದು ಕರ್ತನು ಎಚ್ಚರಿಸಿದನು (ವಿಮೋ 23:33, ಧರ್ಮೋ7:16). ಆದರೂ ಇಸ್ರಾಯೇಲ್ಯರು "ಶಿಟ್ಟೀಮ್" ಎಂಬ ಸ್ಥಳಕ್ಕೆ ಬಂದಾಗ, ಮೋವಾಬ್ಯರ ಹಬ್ಬಗಳಲ್ಲಿ ಭಾಗವಹಿಸಿ ಅವರ ದೇವತೆಗಳಿಗೆ ನಮಸ್ಕರಿಸಿದ್ದರಿಂದ ಇಸ್ರಾಯೇಲ್ಯರಲ್ಲಿ 24 ಸಾವಿರ ಜನರು ಮರಣ ಹೊಂದಿದರು (ಅರಣ್ಯ 25: 1–9). "ಮಕ್ಕಳೇ ನೀವು ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ" (1ಯೋಹಾ 5: 21).

**3. ವ್ಯರ್ಥವಾದ ಮಾತುಗಳೆಂಬ ಉರುಲು :** "ಮಾತಾಳಿಗೆ ಪಾಪ ತಪ್ಪದು" (ಜ್ಞಾನೋ 10:19). ಆದ್ದರಿಂದ ಸೈತಾನನು ನಿಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥ ಪಡಿಸುವಂತೆ, ವ್ಯರ್ಥ ಮಾತುಗಳನ್ನಾಡಿಸುವನು. ಇದರಿಂದ ಹಲವು ಸಮಸ್ಯೆಗಳು, ಹೋರಾಟಗಳು ಉದ್ಭವಿಸುವದು.

ದೇವಜನರೇ, ದಾವೀದನಂತೆ ನನ್ನ ಬಾಯಿಗೆ ಕಾವಲಿರಿಸು ಎಂದು ಪ್ರಾರ್ಥಿಸಿರಿ. ಮರಣವು ಜೀವವೂ ನಾಲಿಗೆಯ ವಶ. ಆದ್ದರಿಂದ ನಿಮ್ಮ ಮಾತಿನ ಮೇಲೆ ಗಮನವಿಡಿರಿ.

**ನೆನಪಿಗೆ : 'ಜ್ಞಾನಿಯ ಬೋಧೆ ಜೀವದ ಬುಗ್ಗೆ; ಅದನ್ನಾಲಿಸುವವನು ಮೃತ್ಯುಪಾಶದಿಂದ ತಪ್ಪಿಸಿಕೊಳ್ಳುವನು' (ಜ್ಞಾನೋ 13:14).**

# ಇನ್ನೂ ಮೂರು ಉರುಲುಗಳು!

ಬೆಳಿಗ್ಗೆ : ಯಾಜಕ 4,5
ಸಂಜೆ : ಮತ್ತಾ 24:29–51

**'ಐಶ್ವರ್ಯವಂತರಾಗಬೇಕೆಂದು ಮನಸ್ಸು ಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು....ಅನೇಕ ಆಶೆಗಳಲ್ಲಿ ಬೀಳುತ್ತಾರೆ' (1ತಿಮೋ 6:9).**

ಐಶ್ವರ್ಯವಂತರಾಗ ಬೇಕೆಂದು ಬಯಸುವವರು ತಮಗೆ ಅರಿವಿಲ್ಲದಂತೆಯೇ ಸೈತಾನನ ಉರ್ಲಿನಲ್ಲಿ ಹೋಗಿ ಬೀಳುವರು. ತಪ್ಪಾದ ಮಾರ್ಗದಲ್ಲಿ ಹಣ ಸಂಪಾದಿಸಲು ಹೋಗಿ ಸರ್ಕಾರದ ನಿಯಮಗಳನ್ನು ಮಿಾರುವರು. "ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು, ಅದರಿಂದ ಕ್ರಿಸ್ತ ನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ" (1ತಿಮೊ 6:10).

ಒಂದು ಕುಟುಂಬದವರು, ಅವರ ಹೋಟೆಲಿನ ಪ್ರಾರಂಬೋತ್ಸವಕ್ಕೆ ನನ್ನನ್ನು ಪ್ರಾರ್ಥಿಸಲು ಆಹ್ವಾನಿಸಿದ್ದರು. ಅವರ ಆಹ್ವಾನದಂತೆ ನಾನು ಹೋಗಿ ಸತ್ಯವೇದ ವಾಕ್ಯವನ್ನು ಓದಿ, ಹಾಡು ಹೇಳಿ, ಪ್ರಾರ್ಥನೆ ಮಾಡಿ ಆ ಹೋಟಲನ್ನು ಉದ್ಘಾಟಿಸಿದೆನು. ನಂತರ ಆ ಹೋಟಲನ್ನು ಪೂರ್ತಿಯಾಗಿ ನೋಡಿ ಬರಲು ಬಯಸುವೆನೆಂದು ಹೇಳಿದೆನು. ಆದರೆ ಅದು ಅವರಿಗೆ ಇಷ್ಟವಾಗಲಿಲ್ಲ. ಯಾಕೆಂದರೆ ಹೋಟೆಲ್‌ನ ಹಿಂಭಾಗದಲ್ಲಿ ಮಧುಪಾನ ಮಾರುವ ಏರ್ಪಾಟು ಮಾಡಿದ್ದರು. ಅವರ ಕಾರ್ಯ ನನಗೆ ಬಹಳ ವ್ಯಥೆಯನ್ನುಂಟುಮಾಡಿತು. ನೀವು ಮಾಡುತ್ತಿರುವದು ಸರಿಯಲ್ಲ, ಇದು ಕರ್ತನಿಗೆ ಬಹಳ ವೇದನೆ ಉಂಟುಮಾಡುವದು ಎಂದು ಹೇಳಿದೆನು.

ಎರಡನೆಯ ಉರುಲು, ಮನುಷ್ಯನಿಗೆ ಭಯಪಡುವದಾಗಿದೆ. "ಮನುಷ್ಯನ ಭಯ ಉರುಲು" (ಜ್ಞಾನೋ 29:25). ನಿಮ್ಮ ಆಂತರ್ಯದಲ್ಲಿ ತುಂಬಿರುವದೇನು? ಮನುಷ್ಯನಿಗೆ ಭಯಪಡುವ ಭಯವಾ? ಇಲ್ಲವೇ, ದೇವರಿಗೆ ಭಯಪಡುವ, ಪರಿಶುದ್ಧವಾದ ಭಯುವಾ? ಕರ್ತನಿಗೆ ಭಯುಪಡುವವನು ಕೆಟ್ಟದ್ದಕ್ಕೆ ದೂರವಾಗಿರುವನು. ನನ್ನನ್ನು ನೋಡುವ ದೇವರು ಒಬ್ಬನಿರುವನು, ಆತನಿಗೆ ಲೆಕ್ಕ ಒಪ್ಪಿಸಬೇಕು ಎಂಬ ಭಯದಿಂದ ಪಾಪಕ್ಕೆ ದೂರವಾಗಿರುವನು. ಅಂಥವನನ್ನು ಕರ್ತನು, ಕಡೆಯವರೆಗೆ ನಡೆಸುವನು.

ಮೂರನೆಯದು, ಮಾಡಿಕೊಂಡ ಹರಕೆಯನ್ನು ತೀರಿಸದೆ ಇರುವದು ಉರುಲಾಗಿರುವದು. "ದುಡುಕಿ ಮುಡುಪುಕಟ್ಟುವದು ಮನುಷ್ಯನಿಗೆ ಉರುಲು; ಹರಕೆ ಹೊತ್ತ ಮೇಲೆ ವಿಚಾರಮಾಡಬೇಕಾಗುತ್ತದೆ" (ಜ್ಞಾನೋ 20:25). "ಯಾವನಾದರೂ ಯೆಹೋವನಿಗೆ ಹರಕೆ ಮಾಡಿದರೆ, ಇಲ್ಲವೆ ತಾನು ಯಾವದಾದರೂ ಒಂದನ್ನು ಮುಟ್ಟದೆ ಇರುವೆನೆಂದು ಆಣೆಯಿಟ್ಟುಕೊಂಡರೆ, ಅವನು ತನ್ನ ಮಾತನ್ನು ಮಿಾರದೆ ಹೇಳಿದಂತೆಯೇ ನೆರವೇರಿಸ ಬೇಕು" (ಅರಣ್ಯ 30:2) ಎಂದು ದೇವರ ವಾಕ್ಯಹೇಳುತ್ತದೆ.

**ನೆನಪಿಗೆ : 'ದೇವರನ್ನು ನಂಬಿ ನಿರ್ಭಯದಿಂದಿರುವೆನು; ನರಪ್ರಾಣಿಗಳು ನನಗೆ ಮಾಡುವದೇನು?' (ಕೀರ್ತ 56:11).**

# ದಾಸತ್ವದ ಆತ್ಮದಿಂದ!

ಬೆಳಿಗ್ಗೆ : ಯಾಜಕ 6,7
ಸಂಜೆ : ಮತ್ತಾ 25:1–30

**'ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ' (ರೋಮಾ 8:15).**

ದೇವರು, ತನ್ನ ಕುಮಾರನಾದ, ಯೇಸುಕ್ರಿಸ್ತನ ಮೂಲಕವಾಗಿಯೂ, ಆತನ ಮಹಿಮೆಯುಳ್ಳ ನಾಮದಿಂದಲೂ, ಆತನ ಅಮೂಲ್ಯವಾದ ರಕ್ತದಿಂದಲೂ ನಿಮ್ಮನ್ನು ಬಿಡುಗಡೆ ಮಾಡಿರುವನು. ಆ ಬಿಡುಗಡೆಯಲ್ಲಿ ನೆಲೆಗೊಳ್ಳಿರಿ. ನೀವು ಪಡೆದ ಸ್ವತಂತ್ರವನ್ನು ಬಿಟ್ಟುಕೊಡಬೇಡಿ. ಪವಿತ್ರಾತ್ಮನನ್ನು ಹೊಂದುವಾಗ, ಭಯಪಡುವ ದಾಸತ್ವದ ಆತ್ಮ ನಿಮ್ಮನ್ನು ಬಿಟ್ಟು ಹೋಗುವದು. "ಅಪ್ಪಾ, ತಂದೆಯೇ" ಎಂದು ಕರೆಯುವ ಪುತ್ರಸ್ವೀಕಾರ ಆತ್ಮ ನಿಮ್ಮೊಳಗೆ ಬರುವದು ಮಾತ್ರವಲ್ಲ, ನೀವು ದೇವರ ಮಕ್ಕಳಾಗಿರುವಿರೆಂದು ಪವಿತ್ರಾತ್ಮನು ತಾನೇ ನಿಮ್ಮ ಆತ್ಮದೊಂದಿಗೆ ಸಾಕ್ಷಿಕೊಡುವದು. "ದೇವರು ನಮಗೆ ಭಯಪಡುವ ಆತ್ಮವನ್ನು ಕೊಡದೆ ಬಲ ಪ್ರೀತಿ, ಶಿಕ್ಷಣದ ಆತ್ಮವನ್ನು ನೀಡಿರುವನು" (2ತಿಮೊ 1:7). ಭಯದ ಆತ್ಮ ನಿಮ್ಮನ್ನು ಬಿಟ್ಟು ಹೋಗಿ, ಪವಿತ್ರಾತ್ಮನು ನಿಮ್ಮನ್ನು ತುಂಬಿರುವನು ಎಂಬುದನ್ನು ನಂಬಿ, ದೇವರನ್ನು ಸ್ತುತಿಸಿರಿ. "ನಾನು ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳಲು ಆತನು ಸದುತ್ತರವನ್ನು ಕೊಟ್ಟು ಎಲ್ಲಾ ಭೀತಿಯಿಂದ ನನ್ನನ್ನು ತಪ್ಪಿಸಿದನು" (ಕೀರ್ತ 34:4) ಎಂಬುದು ದಾವೀದನ ಅನುಭವವಾಗಿತ್ತು. ಹಲ್ಲೆಲೂಯ!

ಅನೇಕರನ್ನು ಹಿಡಿದಿರುವ ಭಯ ದೆವ್ವದ ಭಯ, ಕೆಲವರಿಗೆ ಏನಾಗಿ ಬಿಡುವದೊ ಎಂಬ ಭಯ, ಜೊತೆಗೆ ಕಳವಳ, ಇನ್ನು ಕೆಲವರಿಗೆ ತಮ್ಮ ಭವಿಷ್ಯದ ಕುರಿತು ಭಯ. ಈ ಭಯಗಳು ಬರಲು ಕಾರಣವೇನು? ಪಾಪಗಳು ಕ್ಷಮಿಸಲ್ಪಟ್ಟಿರುವ ನಿಶ್ಚಯ ಇಲ್ಲದೇ ಇರುವದರಿಂದ ಬರುವದು. ಅನೇಕರು ರಹಸ್ಯ ಪಾಪಗಳನ್ನು ಆಂತರ್ಯದಲ್ಲೇ ಹುದುಗಿಸಿಟ್ಟಿರುವದರಿಂದ, ಭಯ ಉಂಟಾಗುವದು. ಆದರೆ ನೀವು ಪಾಪವನ್ನು ಅರಿಕೆ ಮಾಡಿ, ಪವಿತ್ರಾತ್ಮ ಅಭಿಷೇಕವನ್ನು ಹೊಂದುವಾಗ, ಕರ್ತನು ಪುತ್ರಸ್ವೀಕಾರ ಆತ್ಮವನ್ನು ನೀಡುವನು ಭಯ ಓಡಿಹೋಗುವದು.

ದೇವಜನರೇ, ರಕ್ಷಣೆಯೊಳಗೆ ಬರುವ ಮೊದಲು ಈ ದೆವ್ವಗಳು, ಅಶುದ್ಧಾತ್ಮಗಳು, ಸೈತಾನನೂ ನಿಮಗೆ ಶತ್ರುಗಳಂತೆ ನಿಮ್ಮನ್ನು ಆಳುತ್ತಾ ನಡೆಸಿರಬಹುದು, ಆದರೆ ಕ್ರಿಸ್ತನು ಅಶುದ್ಧಾತ್ಮಗಳನ್ನು ಓಡಿಸಲು ನಿಮ್ಮೊಳಗೆ ಪರಲೋಕ ರಾಜ್ಯವನ್ನು ಸ್ಥಾಪಿಸಿರುವನು. ಅಶುದ್ಧಾತ್ಮಗಳನ್ನು ಓಡಿಸಲೂ, ಅಧಿಕಾರವನ್ನೂ ಕೊಟ್ಟಿರುವನು ನಿಮ್ಮ ಕುರಿತಾಗಿ ಕರ್ತನ ಬಯಕೆ ಏನು ಗೊತ್ತೇ? "ಪ್ರಿಯನೇ, ನೀನು ಆತ್ಮ ವಿಷಯದಲ್ಲಿ ಅಭಿವೃದ್ಧಿ ಹೊಂದಿರುವ ಪ್ರಕಾರ, ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿ ಹೊಂದಿ ಸುಕ್ಷೇಮವಾಗಿರಬೇಕು" ಎಂಬುದೇ ಆಗಿದೆ (3ಯೋಹಾ 1:2).

**ನೆನಪಿಗೆ : 'ಹೀಗಿರಲಾಗಿ ದೇವರಿಗೆ ಒಳಗಾಗಿರಿ, ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು' (ಯಾಕೋ 4:7).**

# ವಾಗ್ದಾನ ವಚನಗಳು!

ಬೆಳಿಗ್ಗೆ : ಯಾಜಕ 8,9,10
ಸಂಜೆ : ಮತ್ತಾ 25:31–46

**'ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ ಯಾವದೂ ನಿಮಗೆ ಕೇಡು ಮಾಡುವದೇ ಇಲ್ಲ' (ಲೂಕ 10:19).**

ನನ್ನ ಯೌವನದ ದಿನಗಳಲ್ಲಿ ರಕ್ಷಿಸಲ್ಪಟ್ಟಾಗ, ಒಬ್ಬ ಯೌವನಸ್ಥನೊಳಗೆ, ಭಯಂಕರವಾದ ಅಶುದ್ಧಾತ್ಮ ಒಂದನ್ನು ನೋಡಿದೆನು. ಅದು ಅವನನ್ನು ತನ್ನ ವಶದಲ್ಲಿ ಇಟ್ಟುಕೊಂಡಿತ್ತು. ಅವನ ಮನಸ್ಸನ್ನು ಆವರಿಸಿಕೊಂಡು, ಅವನು ಬೀದಿ ನಾಯಿಯಂತೆ ಅಲೆಯುವ ಹಾಗೆ ಮಾಡಿತ್ತು.

ಬಿಡುಗಡೆ ಹುಡುಕಿಕೊಂಡು, ಅವನು ನನ್ನ ಬಳಿಗೆ ಬಂದನು. ಆ ದಿನಗಳಲ್ಲಿ ನನಗೆ ದೆವ್ವವನ್ನು ಓಡಿಸುವದು ಹೇಗೆ? ಬಿಡುಗಡೆ ಮಾಡುವದು ಹೇಗೆ? ಎಂಬುದು ತಿಳಿದಿರಲಿಲ್ಲ, ಆದ್ದರಿಂದ ಒಬ್ಬ ಬೋಧಕರ ಬಳಿ ಈ ಕುರಿತು ಆಲೋಚನೆಯನ್ನು ಕೇಳಿದೆನು. ಅವರು ಲೂಕ 10:19 ನೇ ವಾಕ್ಯವನ್ನು ನನಗೆ ಸೂಚಿಸಿದರು. ಈ ವಾಕ್ಯವನ್ನು ಓದುತ್ತಾ, ಓದುತ್ತಾ, ನನ್ನೊಳಗೆ ನಂಬಿಕೆ ಉಂಟಾಯಿತು. ಪುನಃ ಪುನಃ ಆ ಮಾತನ್ನು ಅರಿಕೆ ಮಾಡಿದೆನು, ಒಂದು ಸ್ಪಂಜ್ ಹೇಗೆ ನೀರನ್ನು ಹೀರಿಕೊಳ್ಳುವದೋ, ಅದರಂತೆ, ನನ್ನ ಅಂತರ್ಯ ಆ ಮಹಿಮೆಯನ್ನು ಹೀರಿಕೊಂಡಿತು, ಮಾರಣೆಯ ದಿನ ಈ ವಾಕ್ಯದ ಮೂಲಕ ದೆವ್ವವನ್ನು ಎದುರಿಸಿದಾಗ ದೆವ್ವವು ಅವನನ್ನು ಬಿಟ್ಟು ಓಡಿಯೇ ಹೋಯಿತು. ನಿಮ್ಮ ಮನಸ್ಸನ್ನು, ಆಲೋಚನೆಗಳನ್ನು ಆಕ್ರಮಿಸಿ ಅಧೀನ ಮಾಡಿಕೊಳ್ಳಲು ಸೈತಾನನು ಪ್ರಯತ್ನಿಸುವಾಗ, ದೇವರ ವಾಕ್ಯವೆಂಬ ಖಡ್ಗವನ್ನು ಹಿಡಿದುಕೊಳ್ಳಿರಿ (ಎಫೆ 6:17). "ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು ಪ್ರಾಣ, ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದ್ದಾಗಿದೆ" (ಇಬ್ರಿ 4:12). ಪ್ರಕಟನೆ ಗ್ರಂಥದಲ್ಲಿ "ಆತನ ಬಾಯೊಳಗಿಂದ ಹರಿತವಾದ ಇಬ್ಬಾಯಿ ಕತ್ತಿ ಹೊರಡುತ್ತಿತ್ತು" ಎಂದು ಬರೆಯಲ್ಪಟ್ಟಿರುವದು (ಪ್ರಕ 1:16). ಆ ಕತ್ತಿ ದೇವರ ವಾಕ್ಯಗಳೇ! ಯೇಸುಕ್ರಿಸ್ತನು ನಾಲ್ವತ್ತು ದಿನಗಳು ಉಪವಾಸವಿದ್ದು ಪ್ರಾರ್ಥಿಸಿದಾಗ ಸೈತಾನನು ಹಲವು ಶೋಧನೆಗಳನ್ನು ಒಡ್ಡಿದನು,. ಯೇಸುವೋ "ಬರೆಯಲ್ಪಟ್ಟಿರುವದು" ಎಂದು ಹೇಳಿ ಸತ್ಯವೇದ ವಾಕ್ಯಗಳ ಮೂಲಕ ಅವನನ್ನು ಸೋಲಿಸಿದನು.

ದೇವಮಕ್ಕಳೇ, ನಿಮ್ಮ ಜೀವಿತದಲ್ಲಿ, ದೇವರ ವಾಕ್ಯವನ್ನು ಬಲವಾಗಿ ಹಿಡಿದುಕೊಳ್ಳಿರಿ. ವಾಕ್ಯದಂತೆ, ನಿಮ್ಮ ಜೀವಿತವನ್ನು ರೂಪಿಸಿಕೊಳ್ಳಿರಿ. ಕರ್ತನ ವಾಕ್ಯಗಳನ್ನು ವಿಶ್ವಾಸ ಅರಿಕೆ ಮಾಡಿರಿ. ದೇವರ ವಾಕ್ಯವನ್ನು ಕೈಕೊಂಡು ಸೈತಾನನನ್ನು ಎದುರಿಸಿ ನಿಲ್ಲುವಾಗ, ನಿಶ್ಚಯವಾಗಿಯೇ, ಅವನನ್ನು ಜಯಿಸುವಿರಿ.

**ನೆನಪಿಗೆ : 'ಸಿಂಹಸರ್ಪಗಳ ಮೇಲೆ ನಡೆಯುವಿ; ಪ್ರಾಯದ ಸಿಂಹವನ್ನೂ, ಘಟಸರ್ಪವನ್ನೂ ತುಳಿದು ಬಿಡುವಿ' (ಕೀರ್ತ 91:13).**

# ಬಿಡುಗಡೆಯ ರಕ್ತ!

ಬೆಳಿಗ್ಗೆ : ಯಾಜಕ 11,12
ಸಂಜೆ : ಮತ್ತಾ 26:1–35

**'ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ, ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು' (ಪ್ರಕ 12:11).**

ಬಿಡುಗಡೆಯ ಸೇವೆ ಮಾಡಲು ಬಯಸುವವರು ಅಧಿಕವಾಗಿ, ಶಿಲುಬೆಯಲ್ಲಿ ಯೇಸುಕ್ರಿಸ್ತನು ಚೆಲ್ಲಿದ ಅಮೂಲ್ಯವಾದ ರಕ್ತವನ್ನು ಧ್ಯಾನಿಸುವರು. ಆದಿಕಾಲದಿಂದಲೇ ಕುರಿಮರಿಯ ರಕ್ತ, ಪಾಪಗಳನ್ನು ತೊಳೆದು ಶುದ್ಧೀಕರಿಸುವದು ಎಂಬುದನ್ನು, ದೇವಜನರು ಅರಿತಿದ್ದರು. ಇಸ್ರಾಯೇಲ್ಯರು, ಐಗುಪ್ತದ ದಾಸತ್ವದಿಂದ ಬಿಡುಗಡೆ ಹೊಂದುವಾಗ, ಪಸ್ಕದ ಕುರಿಮರಿಯ ರಕ್ತವನ್ನು ತಮ್ಮ ಮನೆಬಾಗಿಲಿನ ನಿಲವು ಪಟ್ಟಿಗಳ ಮೇಲೆ ಹಚ್ಚಿದರು. ಅದು ಸೈತಾನನನ್ನು, (ಸಂಹಾರಕ ದೂತನನ್ನು) ಮನೆಗಳೊಳಗೆ ಪ್ರವೇಶಿಸದಂತೆ ತಡೆಯಿತು. ಆ ಬಿಡುಗಡೆಯಲ್ಲಿ ಸಮಾಧಾನವೂ, ಸಂತೋಷವೂ ಇತ್ತು. ಆದರೆ, ಪಸ್ಕದ ಕುರಿಯ ರಕ್ತವು ಹಚ್ಚದೇ ಇದ್ದ ಐಗುಪ್ತದ ಮನೆಗಳಲ್ಲಿ, ಸಂಹಾರಕ ದೂತನು, ಹೊಕ್ಕು ಚೊಚ್ಚಲು ಮಕ್ಕಳನ್ನೆಲ್ಲಾ ಕೊಂದು ಹಾಕಿದನು.

ಯೇಸುಕ್ರಿಸ್ತನು ಕಲ್ವಾರಿ ಶಿಲುಬೆಯಲ್ಲಿ, ತನ್ನ ರಕ್ತವನ್ನು ಚೆಲ್ಲಿದಾಗ, ದೇವಜನರಿಗೆ ಅನೇಕ ಪ್ರಕಟಣೆಗಳು ದೊರಕಿತು. ಯೇಸುಕ್ರಿಸ್ತನು ಗೆತ್ಸೇಮನೆ ತೋಟದಲ್ಲಿ ಪ್ರಾರ್ಥಿಸುತ್ತಿದ್ದಾಗ, ಪ್ರಥಮ ಬಾರಿಗೆ ರಕ್ತ ಸುರಿಸಿದನು. ಆ ರಕ್ತ ಪ್ರಾರ್ಥಿಸಲಾಗದಂತೆ ತಡೆಯುವ ಎಲ್ಲಾ ಇರುಳಿನ ಶಕ್ತಿಯನ್ನು ನೀಗಿಸಿ, ದೇವ ಪ್ರಸನ್ನತೆಯನ್ನು ನೀಡುವದು, ಪ್ರಾರ್ಥನಾತ್ಮವನ್ನು ತರುವದು. ಮುಳ್ಳಿನ ಕೀರಿಟವನ್ನು ಧರಿಸಲ್ಪಟ್ಟ ಆತನ ಶಿರಸ್ಸಿನಿಂದ ಸುರಿದ ರಕ್ತ, ಶಾಪಗಳನ್ನು ಮುರಿದು ಆಶೀರ್ವಾದ ತರುವದು. ತನ್ನ ಅಂಗೈಗಳಿಂದ ಚೆಲ್ಲಿದ ರಕ್ತ, ಕೈಗಳು ಮಾಡಿದ ಪಾಪಗಳೆಲ್ಲವನ್ನೂ ತೊಳೆದು ಶುದ್ಧೀಕರಿಸುವದು. ಕ್ರಿಸ್ತನ ಬೆನ್ನೆಲ್ಲಾ ಕೊರೆಡೆಗಳಿಂದ ಹೊಡೆಯಲ್ಪಟ್ಟು, ಉತ್ತ ನೆಲದಂತಾಗಿ, ಸುರಿದ ರಕ್ತವು ವ್ಯಾಧಿಗಳನ್ನು ಗುಣಪಡಿಸುವದು. ಬಲಹೀನತೆಗಳನ್ನು ಹೋಗಲಾಡಿಸಿ, ಬಲಪಡಿಸುವದು. ಕ್ರಿಸ್ತನ ಪಾದದಿಂದ ಹರಿದ ರಕ್ತ, ಸೈತಾನನ ತಲೆಯನ್ನು ಜಜ್ಜುವದು. ಅವನ ಕ್ರಿಯೆಗಳನ್ನು ಲಯಪಡಿಸುವದು. ಎಲ್ಲಾ ದಾಸತ್ವದ ನೊಗದಿಂದ ಬಿಡುಗಡೆ ನೀಡುವದು. ಯೇಸುಕ್ರಿಸ್ತನ ಪಾದಗಳು, ಸೈತಾನನ ತಲೆಯನ್ನು ಜಜ್ಜುವದು ಎಂಬುದನ್ನು ಏದೆನ್ ತೋಟದಲ್ಲಿ ಕರ್ತನು ತಿಳಿಸಿದ್ದನು (ಆದಿ 3:15).

ದೇವಜನರೇ, ಶಿಲುಬೆಯಲ್ಲಿ ಜಜ್ಜಲ್ಪಟ್ಟು ಸುರಿದ ಯೇಸುಕ್ರಿಸ್ತನ ರಕ್ತವನ್ನು ಅಧಿಕವಾಗಿ ಧ್ಯಾನಿಸಿರಿ. ಆತನು ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿ ನಮ್ಮ ಪಾಪಗಳನ್ನು ತೊಳೆದು ನಮ್ಮನ್ನು ಕ್ರಯಕ್ಕೆ ಕೊಂಡು ಕೊಂಡಿದ್ದಾನೆ. ಆತನ ಪಾದಗಳಿಂದ ಸುರಿದ ರಕ್ತವನ್ನು ಕೈಯಲ್ಲಿ ಹಿಡಿದು, ಸೈತಾನನ ತಲೆಯನ್ನು ಜಜ್ಜಿರಿ. ಹೌದು ಕುರಿಮರಿಯಾದಾತನ ರಕ್ತದಿಂದಲೂ ಆತನ ಸಾಕ್ಷಿಯ ವಾಕ್ಯಗಳಿಂದಲೂ, ನೀವು ಸೈತಾನನ ತಲೆಯನ್ನು ಜಜ್ಜಿರಿ.

**ನೆನಪಿಗೆ : 'ನೀನು ಅಗುಳಿ ಹಾಕಿದ ಉದ್ಯಾನವನ, ಬೇಲಿಯೊಳಗಿನ ಬುಗ್ಗೆ, ಮುಚ್ಚಿ ಮುದ್ರಿಸಿದ ಬಾವಿಯಾಗಿರುವಿ' (ಪ.ಗೀ 4:12).**

## ಉಪವಾಸವೂ ಪ್ರಾರ್ಥನೆಯೂ!

ಬೆಳಿಗ್ಗೆ : ಯಾಜಕ 13
ಸಂಜೆ : ಮತ್ತಾ 26:36–56

**'ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆಯಾತದರಿಂದಲೂ ಬಿಟ್ಟು ಹೋಗುವದಿಲ್ಲವೆಂದು ಅವರಿಗೆ ಹೇಳಿದನು' (ಮಾರ್ಕ 9:29).**

ನೀವು ಜಯಶಾಲಿಗಳಾಗಿ ಮುಂದೆ ಸಾಗಬೇಕೆಂದರೆ, ದಾಸತ್ವದೊಳಗೆ ಸಿಲುಕದಂತೆ, ನಿಮ್ಮನ್ನು ಕಾಪಾಡಿಕೊಳ್ಳಿರಿ. ಇದಕ್ಕೆ ಉಪವಾಸ ಪ್ರಾರ್ಥನೆ ಅತಿ ಮುಖ್ಯವಾದದ್ದು. ಹಳೆಯ ಒಡಂಬಡಿಕೆಯ ಕಾಲದ ಭಕ್ತರು, ಉಪವಾಸದ ದಿವಸಗಳನ್ನು ಗೊತ್ತು ಮಾಡಿಕೊಂಡು ಚಿಕ್ಕವರು ದೊಡ್ಡವರು ಎಲ್ಲಾರು ಸೇರಿ ವಾರಕ್ಕೆ ಎರಡು ಸಾರಿ ಉಪವಾಸ ಮಾಡುತ್ತಿದ್ದರು. ದೇಶದಲ್ಲಿ ಯುದ್ಧ, ಕ್ಷಾಮ, ಪ್ರಕೃತಿವಿಕೋಪ ಉಂಟಾಗುವಾಗ, ಕರ್ತನು ತಮ್ಮನ್ನು ರಕ್ಷಿಸುವಂತೆ, ದೇಶದಲ್ಲೆಲ್ಲಾ ಉಪವಾಸವನ್ನು ಸಾರುತ್ತಿದ್ದರು.

ಅದರಂತೆಯೇ ಕುಟುಂಬಗಳಲ್ಲಿ, ಮಾಟಮಂತ್ರಗಳು, ದೆವ್ವಗಳ ಕಟ್ಟುಗಳು ಇರುವಾಗ, ಅವುಗಳ ಮೇಲೆ ಜಯಹೊಂದಲು ಉಪವಾಸವಿದ್ದು ಪ್ರಾರ್ಥಿಸಿರಿ. ಕೆಲವು ದೆವ್ವಗಳು ಗದರಿಸಿದರೆ ಓಡಿ ಹೋಗುವವು. ಕೆಲವು ದೆವ್ವಗಳು ಯೇಸುವಿನ ಹೆಸರಿನಲ್ಲಿ ಎಂದು ಹೇಳುವಾಗಲೇ ಬಿಟ್ಟು ಹೋಗುವವು. ಯೇಸುವಿನ ರಕ್ತವನ್ನು ಕೈಯಲ್ಲಿ ಹಿಡಿದು ಅಂಧಕಾರ ಶಕ್ತಿಗಳನ್ನು ಎದುರಿಸಿ ನಿಲ್ಲುವಾಗ, ಅವು ಓಡಿ ಹೋಗುವವು. ಆದರೆ ಕೆಲವು ದುರಾತ್ಮಗಳನ್ನು ಓಡಿಸಬೇಕಿದ್ದರೆ, ಉಪವಾಸ, ಪ್ರಾರ್ಥನೆ ಬಹು ಅಗತ್ಯವಾದದ್ದು. ಉಪವಾಸ ಪ್ರಾರ್ಥನೆ ಎರಡೂ ಸೇರಿರುವಾಗ, ಯಾವದೇ ರೀತಿಯ ದೆವ್ವಗಳು, ದುರಾತ್ಮಗಳು ಓಡಿ ಹೋಗುವದು ನಿಶ್ಚಯ.

ಅನೇಕರು "ಉಪವಾಸ' ಎಂದು ಹೇಳುವರು. ಆದರೆ ಅದಕ್ಕೆ ತಕ್ಕಂತೆ ಪ್ರಾರ್ಥಿಸುವದಿಲ್ಲ. ನಾನು ಕೆಲಸ ಮಾಡುತ್ತಲೇ ಉಪವಾಸ ಮಾಡುವೆನೆಂಬುದಲ್ಲಾ ಬರೀ ಬೂಟಾಟಿಕೆಯಾಗಿರುವದು. ನಿಜವಾಗಿ ಉಪವಾಸ ಮಾಡಿ. ಪ್ರಾರ್ಥಿಸುವವರು, ಕರ್ತನ ಭಾರವನ್ನು ತನ್ನ ಮೇಲೆ ಹಾಕಿಕೊಳ್ಳುವರು. ಪವಿತ್ರಾತ್ಮನೊಂದಿಗಿನ ಐಕ್ಯದೊಂದಿಗೆ ಕಣ್ಣೀರಿನೊಂದಿಗೆ, ಭಾರದಿಂದ ಪ್ರಾರ್ಥಿಸುವರು.

ದೇವಮಕ್ಕಳೇ, "ಪ್ರಾರ್ಥಿಸಬೇಕು, ಪ್ರಾರ್ಥಿಸಬೇಕು"ಎಂಬ ಯೋಚನೆಯನ್ನು ನಿಮ್ಮ ಆಂತರ್ಯದಲ್ಲಿ ಬಡಿದೆಬ್ಬಿಸಿರಿ, ಜಾಗ್ರತಗೊಳಿಸಿರಿ ಆಗ ಪ್ರಾರ್ಥಿಸುತ್ತಾ ಪ್ರಾರ್ಥಿಸುತ್ತಾ, ನಿಮ್ಮೊಳಗೆ ಉನ್ನತ ಬಲವೂ, ನಂಬಿಕೆಯೂ ಬರುವದು. ಕರ್ತನ ಪಾದದಲ್ಲಿ ಹೆಚ್ಚಿನ ಸಮಯವನ್ನು ಕಳೆಯುವಾಗ ಅದು ನಿಮಗೆ ಆಶೀರ್ವಾದವಾಗಿರುವದು. ಉಪವಾಸವಿರುವಾಗ, ನಿಮ್ಮ ಶರೀರವನ್ನು ದಂಡಿಸುವಿರಿ. ನಿಮ್ಮ ಒಳಗೆ ಇರುವ ಆತ್ಮ ಬಲಗೊಳ್ಳುವದು.

**ನೆನಪಿಗೆ : 'ದಾನಿಯೇಲನೇ, ಭಯಪಡಬೇಡ, ನೀನು [ದೈವಸಂಕಲ್ಪವನ್ನು] ವಿಮರ್ಶಿಸುವದಕ್ಕೂ ನಿನ್ನನ್ನು ನಿನ್ನ ದೇವರ ಮುಂದೆ ತಗ್ಗಿಸಿಕೊಳ್ಳುವದಕ್ಕೂ ಮನಸ್ಸಿಟ್ಟ ಮೊದಲನೆಯ ದಿನದಲ್ಲಿಯೇ ನಿನ್ನ ವಿಜ್ಞಾಪನೆ ದೇವರಿಗೆ ಮುಟ್ಟಿತು' (ದಾನಿ 10:12).**

# ಬಂದಿಗಳಿಗೆ ಬಿಡುಗಡೆ!



**'ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ, ಆತನು....ಸೆರೆಯವರಿಗೆ ಬಿಡುಗಡೆಯಾಗುವದನ್ನು, ಬಂದಿಗಳಿಗೆ ಕದ ತೆರೆಯುವದನ್ನು ಪ್ರಸಿದ್ಧಿಪಡಿಸುವದಕ್ಕೂ ಯೆಹೋವನು ನೇಮಿಸಿರುವ ಶುಭವರುಷ' (ಯೆಶಾ 61:1).**

ಬಂದನ ಅಂದರೆ ಕಟ್ಟಲ್ಪಡುವದು ಎಂದು ಅರ್ಥ. ಇಂದು ಮಾನವನು ಅನೇಕ ರೀತಿಯ ಕಟ್ಟುಗಳಿಂದ ಬಂಧಿಸಲ್ಪಟ್ಟಿರುವನು. ವ್ಯಾಧಿಯ ಕಟ್ಟು, ಮಂತ್ರ ತಂತ್ರಗಳ ಕಟ್ಟು, ದೆವ್ವದ ಕಟ್ಟು, ಪಾಪದ ಬಂಧನ ಮುಂತಾದವುಗಳಿಂದ ಬಂಧಿಸಲ್ಪಟ್ಟು ತಮ್ಮನ್ನು ಈ ಕಟ್ಟುಗಳಿಂದ ಬಿಡಿಸುವವರು ಯಾರಿದ್ದಾರೆ? ಎಂದು ತೊಳಲಾಡು ತ್ತಿರುವರು. ತಮ್ಮ ಬಿಡುಗಡೆಗಾಗಿ ತೀರ್ಥಯಾತ್ರೆಗಳನ್ನು ಮಾಡುವರು. ಹರಕೆಗಳನ್ನು ಹೊರುವರು ಮಂತ್ರವಾದಿಗಳ ಬಳಿಗೆ ಹೋಗುವರು. ನಿಜವಾದ ಬಿಡುಗಡೆಯ ಮಾರ್ಗವನ್ನು ತಿಳಿಯದಾಗಿರುವರು.

ಹಳೆಯ ಒಡಂಬಡಿಕೆಯ ಕಾಲದಲ್ಲಿ ಜನರು ತಮ್ಮ ಪಾಪಗಳ ಪರಿಹಾರಕ್ಕಾಗಿ ವರ್ಷಕ್ಕೆ ಒಮ್ಮೆ ಯಾಜಕನ ಬಳಿ ಹೋಗಿ ಪಶು ಪಕ್ಷಿಗಳನ್ನು ದೋಷಪರಿಹಾರಕ ಯಜ್ಞವಾಗಿ ಅರ್ಪಿಸುತ್ತಿದ್ದರು. ಪುನಃ ಪುನಃ ಪಾಪಮಾಡುತ್ತಲೇ ಬಂದರು. ಕರ್ತನು ಪ್ರವಾದಿಗಳ ಮೂಲಕ ಎಚ್ಚರಿಸಿದಾಗ್ಯೂ, ಜನರು ದೇವರ ಕಡೆಗೆ ತಿರುಗಲಿಲ್ಲ ಕೊನೆಗೆ, ಕರ್ತನು ತನ್ನ ಏಕ ಕುಮಾರನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿ ಜನರ ಪಾಪಗಳಿಗಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ಅರ್ಪಿಸಿದನು. ಆತನ ರಕ್ತದಿಂದ ನಮಗೆ ಪಾಪ ಪರಿಹಾರವಾಗಿ ಬಿಡುಗಡೆ ಉಂಟಾಯಿತು. ಯಾರ್‍ಯಾರು ಆತನ ಹೆಸರಿನಲ್ಲಿ ಅಂದರೆ ದೇವಕುಮಾರನಾದ ಕ್ರಿಸ್ತಯೇಸುವಿನ ಹೆಸರಿನಲ್ಲಿ ನಂಬಿಕೆ ಇಡುವರೋ ಅವರಿಗೆ ದೇವರ ಮಕ್ಕಳಾಗುವ ಬಾಧ್ಯತೆ ದೊರೆಯಿತು. ಕ್ರಿಸ್ತಯೇಸು ಈ ಲೋಕದಲ್ಲಿ ಜೀವಿಸಿದ ಮೂವತ್ತು ಮೂರುವರೆ ವರುಷಗಳಲ್ಲಿ ಕೊನೆಯ ಮೂರುವರೆ ವರುಷಗಳಲ್ಲಿ ದೇವರ ರಾಜ್ಯದ ಕುರಿತಾಗಿ ಸುವಾರ್ತೆ ಸಾರಿದನು. ವ್ಯಾಧಿಪೀಡಿತರನ್ನು ಸ್ವಸ್ಥಪಡಿಸಿದನು. ದೆವ್ವಹಿಡಿದವರನ್ನು ಬಿಡುಗಡೆಗೊಳಿಸಿದನು. ಕುಂಟರು ನಡೆದಾಡಿದರು. ಕಣ್ಣು ಕಾಣದವರು ದೃಷ್ಟಿ ಪಡೆದರು. ಸತ್ತವರು ಜೀವದಿಂದ ಎದ್ದರು, ಮಾತ್ರವಲ್ಲ ತನ್ನ ಮರಣದ ಮೂಲಕ ಸೈತಾನನ ತಲೆಯನ್ನು ಜಜ್ಜಿದನು ಮರಣದ ಕೊಂಡಿಯನ್ನು ಮುರಿದನು.

ದೇವಜನರೇ, ನೀವೂ ಸಹ ಕ್ರಿಸ್ತನನ್ನು ಅಂಗೀಕರಿಸಿಕೊಂಡು, ಆತನಲ್ಲಿದ್ದ ಪ್ರೀತಿ, ಕನಿಕರ, ಕರುಣೆಯಿಂದ ತುಂಬಿದವರಾಗಿ ಜನರಿಗೆ ಉಪಕಾರಗಳನ್ನು ಮಾಡಿರಿ, ದೇವರಾತ್ಮನಿಂದ ತುಂಬಿದವರಾಗಿ, ಇತರರಿಗೆ ಆಶೀರ್ವಾದದ ನಿಧಿಯಾಗಿರ್ರಿ.

**ನೆನಪಿಗೆ : 'ದೇವರು ನಜರೇತಿನ ಯೇಸುವನ್ನು ಪವಿತ್ರಾತ್ಮದಿಂದಲೂ ಬಲದಿಂದಲೂ ಅಭಿಷೇಕಿಸಿದನು, ದೇವರು ಆತನ ಸಂಗಡ ಇದ್ದದರಿಂದ ಆತನು ಉಪಕಾರಗಳನ್ನು ಮಾಡುತ್ತಾ....ಗುಣಪಡಿಸಿದನು' (ಅ.ಕೃ 10:38).**

# ಪವಿತ್ರಾತ್ಮನ ಮಹಿಮೆ!

ಬೆಳಿಗ್ಗೆ : ಯಾಜಕ 15,16
ಸಂಜೆ : ಮತ್ತಾ 27:1–26

**'ಬಿರುಗಾಳಿಯಿಂದ ಹೊಡೆಯಲ್ಪಟ್ಟು ಇಕ್ಕಟ್ಟಿನಲ್ಲಿ ಹರಿಯುವ ತೊರೆಯ ಹಾಗೆ ಆತನು ರಭಸದಿಂದ ಬರುವನಷ್ಟೆ' (ಯೆಶಾ 59:19).**

ನೀವು ಬಿಡುಗಡೆ ಹೊಂದಲೂ, ಪಡೆದ ಬಿಡುಗಡೆಯಲ್ಲಿ ಸ್ಥಿರವಾಗಿ ನಿಲ್ಲಲೂ, ಬಿಡುಗಡೆಯ ಸೇವೆಯಲ್ಲಿ ಕಟ್ಟಲ್ಪಟ್ಟವರನ್ನು ಬಿಡುಗಡೆಗೊಳಿಸಲು, ದೇವರಾತ್ಮನ ಸಹಾಯ, ನಿಮಗೆ ಅಗತ್ಯವಾದದ್ದು. ಶತ್ರುಗಳ ಎಲ್ಲಾ ಸಂಚುಗಳನ್ನೂ, ಕೆಡುಕನ್ನೂ ದೇವರಾತ್ಮನು ಅರಿತು ಮುರಿದು ಹಾಕುವನು. 'ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ, ಎಂಬುದು ಸೇನಾಧೀಶ್ವರನಾದ ಯೆಹೋವನ ನುಡಿ' (ಜೆಕರ್ಯ 4:6).

ಯೇಸುಕ್ರಿಸ್ತನು ಈ ಪ್ರಪಂಚದಲ್ಲಿದ್ದಾಗ, ಕಟ್ಟಲ್ಪಟ್ಟವರನ್ನು ಬಿಡುಗಡೆ ಮಾಡಿದನು. ದೆವ್ವಗಳನ್ನು ಓಡಿಸಿದನು ಆತನ ಸೇವೆಯಲ್ಲಿ ಮೂರರಲ್ಲಿ ಒಂದು ಭಾಗ, ಬಂಧಿಗಳಿಗೆ ಬಿಡುಗಡೆ ನೀಡುವ ಸೇವೆಯಾಗಿತ್ತು. ಬಿಡುಗಡೆಗೊಳಿಸುವ ಸೇವೆಯನ್ನು ಮುಂದುವರಿಸಲು, ಪವಿತ್ರಾತ್ಮನನ್ನು ಈ ಲೋಕಕ್ಕೆ ಕಳುಹಿಸುವದಾಗಿ, ಶಿಷ್ಯರಿಗೆ ವಾಗ್ದಾನ ಮಾಡಿದನು. ನಾನು ತಂದೆಯನ್ನು ಕೇಳಿಕೊಳ್ಳುವೆನು. ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ ಅತನು ನಿಮ್ಮೊಳಗೆ ಇರುವನು (ಯೋಹಾ 14:16). ಒಂದು ಕಡೆ ಆತನು ಬಿಡುಗಡೆಗೊಳಿಸುವವನು. ಮತ್ತೊಂದೆಡೆ ಸಂತೈಸುವಾತನು. ಪಂಚಾಶತ್ತಮ ದಿನದಂದು ಪವಿತ್ರಾತ್ಮನು ಬಿರುಗಾಳಿಯಂತೆಯೂ, ಅಗ್ನಿಯ ನಾಲಿಗೆಯಂತೆಯೂ, ಬಂದು ಶಿಷ್ಯರನ್ನು ಆವರಿಸಿದನು. ಅವರು ಸೈತಾನನನ್ನು ಜಯಿಸುವ ಉನ್ನತ ಬಲದಿಂದ ತುಂಬಿದವರಾದರು. ಪವಿತ್ರಾತ್ಮನು ನಿಮ್ಮೊಳಗೆ ಬರುವಾಗ, ಪರಲೋಕಭಾಷೆಯಾದ ಅನ್ಯಭಾಷೆಯನ್ನು ನಿಮ್ಮೊಳಗೆ ಇಡುವನು. ಸಂಸೋನನ ಮೇಲೆ ದೇವರಾತ್ಮನು ಬಲವಾಗಿ ಇಳಿದು ಬಂದದ್ದರಿಂದ ಅವನ ಕೈಯಲ್ಲಿ ಏನೂ ಇಲ್ಲದಿದ್ದರೂ, ಒಂದು ಹೋತಮರಿಯನ್ನು ಸೀಳಿಹಾಕುವಂತೆ ಸಿಂಹವನ್ನು ಸೀಳಿಬಿಟ್ಟನು (ನ್ಯಾಯಾ 14:6). ಗಿದ್ಯೋನನು ಯೆಹೋವನ ಆತ್ಮನ ಆವೇಶವುಳ್ಳವನಾಗಿ ಕೊಂಬನ್ನು ಊದಿ ಯುದ್ಧದಲ್ಲಿ ಜಯಗಳಿಸಿದನು (ನ್ಯಾಯ 6:34).

ದೇವಮಕ್ಕಳೇ, ಇದು ನಿಮ್ಮ ಕಾಲ, ನಿಮ್ಮ ಮೇಲೆ ಪವಿತ್ರಾತ್ಮನು ಇಳಿದು ಬರುವ ಸಮಯ. "ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು, ನಿಮ್ಮಲ್ಲಿರುವ ಗಂಡಸರೂ ಹೆಂಗಸರೂ ಪ್ರವಾದಿಸುವರು ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು. ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನಗಳಾಗುವವು" (ಯೋವೇಲ 2:28). "ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ, ಸಮಾರ್ಯ ಸೀಮೆಗಳಲ್ಲಿಯೂ, ಭೂಲೋಕದ ಕಟ್ಟ ಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು" (ಅ.ಕೃ 1:8).

**ನೆನಪಿಗೆ : 'ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷಣಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ' (2ತಿಮೊ 1:7).**

# ಅಧಿಕಾರ ಕೊಟ್ಟನು!

**ಬೆಳಿಗ್ಗೆ : ಯಾಜಕ 17,18**
**ಸಂಜೆ : ಮತ್ತಾ 27:27–56**

**'ಯೇಸುಕ್ರಿಸ್ತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತರಕ್ಕೆ ಕರೆದು ದೆವ್ವಗಳನ್ನು ಬಿಡಿಸುವದದಕ್ಕೂ, ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುವದಕ್ಕೂ ಅವರಿಗೆ ಅಧಿಕಾರ ಕೊಟ್ಟನು' (ಮತ್ತಾ 10:1).**

ನೀವು ಬಿಡುಗಡೆಗೊಳಿಸುವ ಸೇವೆಯಲ್ಲಿ ತೊಡಗುವ ಮೊದಲು, ನಾಲ್ಕು ಸುವಾರ್ತೆಗಳಲ್ಲಿ ಯೇಸುಕ್ರಿಸ್ತನು ಹೇಗೆ ಬಿಡುಗಡೆಯ ಸೇವೆ ಮಾಡಿದನು? ಯಾವ ರೀತಿಯಲ್ಲಿ ದುರಾತ್ಮಗಳನ್ನು ಓಡಿಸಿದನು? ಎಂಥಹ ವ್ಯಾಧಿಗಳನ್ನು ಗುಣಪಡಿಸಿದನು? ಎಂಬುದನ್ನು ಓದಿ "ದೇವರೇ, ಆ ಕೃಪೆಯನ್ನು ನನಗೆ ಅನುಗ್ರಹಿಸು" ಎಂದು ಪ್ರಾರ್ಥಿಸಿರಿ. ಅಪೊಸ್ತಲಕೃತ್ಯಗಳಲ್ಲಿ ಅಪೊ.ಪೇತ್ರನು, ಅಪೊ.ಪೌಲನು, ಅಪೊ.ಫಿಲಿಪ್ಪನು ಹೇಗೆ ಬಿಡುಗಡೆಗೊಳಿಸುವ ಸೇವೆಯನ್ನು ಮಾಡಿದರು ಎಂಬುದನ್ನು ತಿಳಿದುಕೊಳ್ಳಿರಿ.

ಹಲವು ವರುಷಗಳ ಹಿಂದೆ, ನಾನೂ ಮತ್ತು ಡಾ॥ ಕ್ಲಿಫರ್ಡ್‌ಕುಮಾರ್ ರವರೂ ಒಂದು ಹಳ್ಳಿಗೆ ಹೋಗಿದ್ದೆವು. ಪ್ರಸಂಗದ ಸಮಯದಲ್ಲಿ ಇದ್ದಕ್ಕಿದ್ದಂತೆ ಸುಂಟರಗಾಳಿಯೊಂದು ಬೀಸಿತು. ಅದರಿಂದ ಆ ಹಳ್ಳಿಯಲ್ಲಿದ್ದ ವಿದ್ಯುತ್ ಟ್ರಾನ್ಸ್ ಪಾರ್ಮರ್ ಒಡೆದು ಕೆಳಕ್ಕೆ ಬಿತ್ತು. ಆ ಹಳ್ಳಿ ಕತ್ತಲೆಯಲ್ಲಿ ಮುಳುಗಿತು. ಯಾವ ಧ್ವನಿ ವರ್ಧಕವೂ ಕೆಲಸ ಮಾಡದೆ ಹೋಯಿತು. ಆದರೂ ದೇವರ ವಾಕ್ಯವನ್ನು ಗಟ್ಟಿಯಾದ ಶಬ್ದದಿಂದ ಸಾರಿ, ಕೂಟವನ್ನು ಮುಗಿಸಿದೆವು. ಅಂತ್ಯದ ವೇಳೆಯಲ್ಲಿ ದೆವ್ವಗಳು ಚೀರಾಡಿ ಓಡಿ ಹೋದವು ಒಂದು ಅಶುದ್ಧಾತ್ಮ ಹೇಳಿತು. "ನೀವು ಪ್ರಸಂಗಿಸ ಮಾಡಬಾರದೆಂದು ನಾನೇ ಸುಂಟರ ಗಾಳಿಯನ್ನು ಬರಮಾಡಿದೆನು. ಆ ಟ್ರಾನ್ಸ್ ಫಾರ್ಮರ್‌ನ್ನು ಒಡೆದು ಹಾಕಿದೆ. ಆದಾಗ್ಯೂ ನೀವು ಅದನ್ನು ಲೆಕ್ಕಿಸದೆ ಸುವಾರ್ತೆಯನ್ನು ಸಾರಿದಿರಿ, ಯೇಸುಕ್ರಿಸ್ತನು ದೊಡ್ಡವನು" ಎಂದು. ನಮ್ಮ ದೇಶದಲ್ಲಿ ದೆವ್ವಹಿಡಿದವರು ತಲೆದೂಗಿದರು, ತಲೆ ಆಡಿಸುತ್ತಾ ಚೀರಾಡುವಂತೆ, ಪರದೇಶಗಳಲ್ಲಿ ಹಾಗೆ ಆಡುವವರು ಬಹಳ ಕಮ್ಮಿ ಅವರಲ್ಲಿ ಡಿಪ್ರೆಷನ್ ಇರುತ್ತದೆ ಮನಗುಂದಿದವರಾಗಿ ಯೂವದರಲ್ಲಿಯೂ ಆಸಕ್ತಿ ಇಲ್ಲದವರಾಗಿ ನಡೆದಾಡುವ ಹೆಣಗಳಂತೆ ಜೀವಿಸುವರು.

ದೇವಮಕ್ಕಳೇ, ನೀವು ಕ್ರಿಸ್ತನ ಹೆಜ್ಜೆಯ ಜಾಡನ್ನು ಅನುಸರಿಸಿ ಬಂಧನಕ್ಕೆ ಒಳಗಾದವರನ್ನು ಬಿಡುಗಡೆಗೊಳಿಸಿರಿ. ಕೆಲವರಿಗೆ ವ್ಯಾಧಿಯ ಕಟ್ಟು, ಕೆಲವರಿಗೆ ಸೈತಾನನ ಕಟ್ಟು, ಕೆಲವರಿಗೆ ಮರಣದ ಕಟ್ಟು, ಯಾವುದೇ ಬಂಧನವಾಗಿರಲಿ ಅವುಗಳನ್ನು ಕರ್ತನು ಕೊಟ್ಟ ಅಧಿಕಾರದಿಂದ ಬಿಡಿಸಿರಿ. ಕರ್ತನು ನೀಡಿರುವ ಅಧಿಕಾರವನ್ನು ಪವಿತ್ರಾತ್ಮನ ಬಲವನ್ನು ಉಪಯೋಗಿಸಿ ಜನರಿಗೆ ಉಪಕಾರಗಳನ್ನು ಮಾಡಿರಿ.

**ನೆನಪಿಗೆ : 'ಆ ಎಪ್ಪತ್ತು ಮಂದಿಯು ಸಂತೋಷವುಳ್ಳವರಾಗಿ....ಸ್ವಾಮಿ, ದೆವ್ವಗಳು ಕೂಡಾ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಅಂದರು' (ಲೂಕ 10:17).**

# ಭೋಗದಾಶೆಯಿಂದ ಬಿಡುಗಡೆ!

ಬೆಳಿಗ್ಗೆ : ಯಾಜಕ 19,20
ಸಂಜೆ : ಮತ್ತಾ 27:57–66

**'ನಿಮ್ಮಲ್ಲಿ ಯುದ್ಧಗಳೂಯ ಕಾದಾಟಗಳೂ ಎಲ್ಲಿಂದ ಹುಟ್ಟುತ್ತವೆ? ನಿಮ್ಮ ಇಂದ್ರಿಯಗಳಲ್ಲಿ ಹೋರಾಡುವ ಭೋಗಾಶೆಗಳಿಂದಲೇ ಅಲ್ಲವೇ?' (ಯಾಕೋಬ 4:1).**

ಭೋಗದಾಶೆ ಎಂಬುದು ಸೈತಾನನು ಬೀಸುವ ಒಂದು ದೊಡ್ಡ ಉರುಲು. ಇದು ಸೈತಾನನ ಒಂದು ಆಯುಧವಾಗಿರುವದು. ಭೋಗದಾಶೆ ಮನುಷ್ಯನನ್ನು ದಾಸನನ್ನಾಗಿಸುವದು, ಅಶ್ಲೀಲ ಚಿತ್ರಗಳು, ಸಿನಿಮಾಗಳು ಮನುಷ್ಯನನ್ನು ದಾಸತ್ವಕ್ಕೆ ಒಳಪಡಿಸುವದು. ತನ್ನ ಆಶೆ ಆಕಾಂಕ್ಷೆಗಳನ್ನು ನಿಗ್ರಹಿಸಿಕೊಳ್ಳಲಾಗದವನನ್ನು ಕರ್ತನು ಉಪಯೋಗಿಸಲು ಸಾಧ್ಯವಾಗದು. ಮನೋನಿಗ್ರಹ ಅಥವಾ ಶಮೆ ದಮೆ ಆತ್ಮನ ಫಲಗಳಲ್ಲಿ ಒಂದಾಗಿರುವದು. ಭಕ್ತನಾದ ಯಾಕೋಬನು ಈ ಶಮೆ ದಮೆಯ ಕುರಿತಾಗಿ ತನ್ನ ಪತ್ರಿಕೆಯಲ್ಲಿ ಅಧಿಕವಾಗಿ ಪ್ರಸ್ತಾಪಿಸಿರುವನು. ಈ ಮನೋನಿಗ್ರಹಣಾ ಶಕ್ತಿಯನ್ನು ಪಡೆಯುವದಾದರೂ ಹೇಗೆ? "ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ಆ ಮೇಲೆ ಆಶೆಯು ಬಸುರಾಗಿ ಪಾಪವನ್ನು ಹೆರುತ್ತದೆ. ಪಾಪವು ತುಂಬಾ ಬೆಳೆದು ಮರಣವನ್ನು ಹಡೆಯುತ್ತದೆ' (ಯಾಕೋ 1:14–16). ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಾಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೇನೂ. ವ್ಯಭಿಚಾರಿಗಳು ನೀವು ಇಹಲೋಕಸ್ನೇಹವು ದೇವರಿಗೆ ವೈರತ್ವವೆಂಬುದು ನಿಮಗೆ ತಿಳಿಯದೋ? ಲೋಕಕ್ಕೆ ಸ್ನೇಹಿತನಾಗಬೇಕೆಂದಿರುವವನು ತನ್ನನ್ನು ದೇವರಿಗೆ ವಿರೋಧಿಯನ್ನಾಗಿ ಮಾಡಿಕೊಳ್ಳುತ್ತಾನೆ' (ಯಾಕೋ 4:3,4) ಎಂದು ಬರೆಯುತ್ತಾನೆ.

ಮನೋನಿಗ್ರಹ ಎಂಬದು ಮನಸ್ಸಿನ ಸ್ಥಿರತೆಯನ್ನು ತೀರ್ಮಾನವನ್ನು ಕುರಿತದ್ದಾಗಿದೆ. ಮನಸ್ಸಿನಲ್ಲಿ ದೃಢತೆಯನ್ನು ಹೊಂದಿದವರನ್ನು ಲೋಕದ ಆಶಾಪಾಶಗಳು ಹಿಡಿಯಲಾಗದು ತನ್ನ ಜೇಷ್ಠಪುತ್ರನಾದ ರೂಬೇನನನ್ನು ತಂದೆಯಾದ ಯಾಕೋಬನು ಶಪಿಸುತ್ತಾ ದಡವನ್ನು ಮೀರಿದ ಪ್ರವಾಹದಂತಿರುವ ನೀನು, ಇನ್ನು ಮೇಲೆ ಪ್ರಮುಖನ ಸ್ಥಾನದಲ್ಲಿ ಇರುವದಿಲ್ಲ" ಎಂದು ಹೇಳಿದನು (ಆದಿ 49:4). ಕಾರಣ, ತಾಯಿಗೆ ಸಮಾನಳಾದ ತನ್ನ ಚಿಕ್ಕಮ್ಮನ ಬಳಿ ತಪ್ಪಾಗಿ ನಡೆದುಕೊಂಡನು. ಈ ಇಚ್ಛೆ ಅಥವಾ ಭೋಗದಾಶೆ ಅನೇಕ ದೇವಸೇವಕರನ್ನು ತಾಕುವದರಿಂದ ಅವರು ಸೇವೆಯಲ್ಲಿ ಫಲ ಕಾಣುವದಿಲ್ಲ. ಅಶುದ್ಧಾತ್ಮಗಳು ಬಿಟ್ಟು ಹೋಗುವದಿಲ್ಲ. ಮನಸ್ಸಾಕ್ಷಿ ಬಾಧಿಸುವದರಿಂದ ಪ್ರಾರ್ಥಿಸಲಾಗುವದಿಲ್ಲ.

ದೇವಜನರೇ, ಭೋಗದಾಶೆಗಳನ್ನು ಸೈತಾನನು ನಿಮ್ಮೊಳಗೆ ತಂದು ಹಾಕಲು ಬಯಸುವನು. ಆದರೆ ಕ್ರಿಸ್ತನೋ ತನ್ನ ಪರಿಶುದ್ಧವಾದ ರಕ್ತದಿಂದ ನಿಮ್ಮನ್ನು ತೊಳೆದು, ತಪ್ಪಿತಸ್ಥ ಮನೋಭಾವವನ್ನು ನೀಗಿಸಿ ನಿಮ್ಮೊಳಗೆ ಬರಲು ಬಯಸುವನು ದೈವೀಕ ಜ್ಞಾನಕ್ಕೆ ವಿರೋಧವಾಗಿ ಏಳುವ ಅಂಧಕಾರ ಶಕ್ತಿಗಳನ್ನು ಎದುರಿಸಿಲು ಕ್ರಿಸ್ತನನ್ನೇ ಆಶ್ರಯಿಸಿರಿ.

**ನೆನಪಪಿಗೆ : 'ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು...ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿಯೂ ಅರ್ಪಿಸಿರಿ....ಆರಾಧನೆಯು' (ರೋಮಾ 12:1).**

**'ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು....' (ಆದಿ 3:6).**

ಪಾಪವೂ, ಇಚ್ಛೆಗಳಲ್ಲಿ ಮೊದಲು ಮನಸ್ಸಿನ ಯೋಚನೆಗಳಲ್ಲಿ ಮಾಡುವದು. ಆದಿಯಲ್ಲಿ ಹವ್ವಳು, ನಿಷೇಧಿಸಲ್ಪಟ್ಟ ಹಣ್ಣನ್ನು ತನ್ನ ಮನಸ್ಸಿನಲ್ಲಿ, ಭಾವನೆಗಳಲ್ಲಿ ಬಯಸಿದಳು. ಆ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ, ನೋಡುವದಕ್ಕೆ ರಮ್ಯವಾಗಿಯೂ, ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇರುವದೆಂದು ಭಾವಿಸಿದಳು ಇದರಿಂದ ಶಾರೀರಿಕ ಇಚ್ಛೆಗೆ ಒಳಾಗಾಗಿ ಪಾಪದಲ್ಲಿ ಬಿದ್ದಳು.

ಸತ್ಯವೇದ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಒಬ್ಬ ವಿಧ್ಯಾರ್ಥಿ, ಬಹಳ ದುಃಖದಿಂದ "ಅಯ್ಯಾ ಕಾಲೇಜಿನಲ್ಲಿ ಓದುವಾಗ ಪಾಠಗಳು ನನ್ನನ್ನು ಉತ್ಸಾಹಗೊಳಿಸುವದು. ಆದರೆ ಹೊರಗೆ ಬಂದು ಜನರೊಡನೆ ಬೆರೆತಾಗ, ಕಣ್ಣಿನ, ಶಾರೀರಿಕ ಇಚ್ಛೆಗಳು ನನ್ನನ್ನು ಪೀಡಿಸುವದು. ಗೋಡೆಗಳ ಮೇಲೆ ಕಾಣುವ ಸಿನಿಮಾ ಪೋಸ್ಟರುಗಳು, ಬಟ್ಟೆ ಅಂಗಡಿಗಳಲ್ಲಿರುವ ಹೆಣ್ಣು ಗೊಂಬೆಗಳನ್ನು ನೋಡುವಾಗ, ನನ್ನ ಮನಸ್ಸನ್ನು ಕೆಡಿಸುವದು. ಅಭಾಸ ವಸ್ತ್ರಗಳನ್ನು ಧರಿಸುವ ಹೆಣ್ಣುಮಕ್ಕಳು ನನ್ನ ಪವಿತ್ರತೆಯನ್ನು ಕೆಡಿಸುವರು" ಎಂದು ಹೇಳಿದನು. ಯೇಸುಕ್ರಿಸ್ತನು ಹೇಳಿದನು "ಪರ ಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡುವವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಟುಬಿಡು, ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವದಕ್ಕಿಂತ ಅವಯುವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ" (ಮತ್ತಾ 5:28,29).

ದೇವಮಕ್ಕಳೇ, ಸೈತಾನನು ನಿಮ್ಮೊಳಗೆ ತಂದು ಹಾಕುವ ಇಚ್ಛೆಗಳು ನಿಮ್ಮ ಆಂತರ್ಯವನ್ನು ಪ್ರವೇಶಿಸದಂತೆ ಎಚ್ಚರವಾಗಿರಿ. ಒಂದು ವೇಳೆ ಪ್ರವೇಶಿಸಿದ್ದೇ ಆದರೆ ಮೊಳಕೆಯಲ್ಲೇ ಚಿವುಟಿ ಹಾಕಿರಿ. ಮರವಾಗಿ ಬೆಳೆಯಲು ಬಿಟ್ಟರೆ ಅದರಿಂದ ಹೊರಗೆ ಬರುವದು ಕಠಿಣವಾದಕಾರ್ಯ. ಒಂದು ಹಡಗಿನಲ್ಲಿ ಒಂದು ಸಣ್ಣ ರಂಧ್ರವಾದಾಗ ಅದನ್ನು ಕೂಡಲೆ ಮುಚ್ಚಿಹಾಕದಿದ್ದರೆ, ಅದು ದೊಡ್ಡದಾಗಿ ನೀರು ತುಂಬಿಕೊಂಡು ಹಡಗು ಮುಳುಗಿ ಹೋಗುವದು. ಹಾಗೆಯೇ ನಿಮ್ಮೊಳಗೆ ಅಶುದ್ಧ ಆಲೋಚನೆಗಳು, ಭಾವನೆಗಳು ಬರುವಾಗ ಕೂಡಲೇ ಅದನ್ನು ತೆಗೆದುಹಾಕಿರಿ. "ದೇವರೇ, ನಾನು ಯಾವದೇ ಪಾಪದಲ್ಲಿ ಬೀಳದಂತೆ ಕಾಪಾಡು. ಹಾಗೆ ಬೀಳುವ ಮೊದಲೇ ನಿನ್ನ ಸನ್ನಿಧಿಗೆ ನನ್ನನ್ನು ಸೇರಿಸಿಕೋ ಎಂದು ಪ್ರಾರ್ಥಿಸಿರಿ" ಸತ್ಯವೇದವು ಹೇಳುತ್ತದೆ "ಆತ್ಮವನ್ನು ಸ್ವಾಧೀನ ಮಾಡಿಕೊಳ್ಳದವನು ಗೋಡೆ ಬಿದ್ದ ಹಾಳೂರಿಗೆ ಸಮಾನ" (ಜ್ಞಾನೋ 25:28).

**ನೆನಪಿಗೆ : 'ವ್ಯಭಿಚಾರಿಯೋ ಕೇವಲ ಬುದ್ಧಿಶೂನ್ಯನು ಇಂಥಾ ಕಾರ್ಯವನ್ನು ಮಾಡುವವನು ತನ್ನನ್ನೇ ನಾಶಪಡಿಸಿಕೊಳ್ಳುವನು' (ಜ್ಞಾನೋ 6:32).**

# ಸೆರೆಯಿಂದ!

ಬೆಳಿಗ್ಗೆ : ಯಾಜಕ 23,24
ಸಂಜೆ : ಮಾರ್ಕ 1:1–20

**'ಮನಮುರಿದವರನ್ನು ಕಟ್ಟಿ ವಾಸಿಮಾಡುವದಕ್ಕೂ ಸೆರೆಯವರಿಗೆ ಬಿಡುಗಡೆಯಾಗುವದನ್ನು ಬಂದಿಗಳಿಗೆ [ಕದ] ತೆರೆಯುವದನ್ನು....ಕರ್ತನು ನನ್ನನ್ನು ನೇಮಿಸಿದನು' (ಯೆಶಾ 61:1–3).**

ಕ್ರಿಸ್ತನನ್ನು ತಂದೆ ದೇವರು ಯಾಕೆ ಭೂಮಿಗೆ ಕಳುಹಿಸಿದನು? ಸೆರೆಯವರಿಗೆ ಬಿಡುಗಡೆಯ ಶುಭಸಂದೇಶವನ್ನು ಸಾರುವದಕ್ಕಾಗಿಯೇ ಪ್ರಾಪಂಚಿಕ ರೀತಿಯ ಸೆರೆಯು ಉಂಟು, ಸೈತಾನನು ಇಟ್ಟಿರುವ ದಾಸತ್ವದ ಸೆರೆಯೂ ಉಂಟು. ಯಾವ ರೀತಿಯ ಸೆರೆಯಲ್ಲಿ ನೀವು ಇರುವುರಾದರೂ ಕರ್ತನು ನಿಮ್ಮನ್ನು ಸೆರೆಯಿಂದ ವಿಮೋಚಿಸಲೂ ದಾಸತ್ವವನ್ನು ಮಾರ್ಪಡಿಸಿ, ಬಿಡುಗಡೆ ನೀಡಲು ಕಾತುರ ಉಳ್ಳವನಾಗಿರುವನು. ಹಾಗೂ ನಮ್ಮ ಪಾಪ ಶಾಪಗಳನ್ನು ಮುರಿದು ನಮಗೆ ರಕ್ಷಣೆ ಎಂಬ ವಸ್ತ್ರವನ್ನು ಕೊಟ್ಟಿದ್ದಾನೆ.

ಬಡತನ, ಕುಟುಂಬದಲ್ಲಿನ ಚಿಂತೆ, ವ್ಯಾಧಿಗಳು ಮುಂತಾದವುಗಳು ಪ್ರಾಪಂಚಿಕ ರೀತಿಯ ಸೆರೆ. ಇದಕ್ಕೆ ಮನುಷ್ಯನು ತನಗೆತಾನೇ ಕಾರಣ ಕರ್ತನಾಗಿರುತ್ತಾನೆ. ಅವನಲ್ಲಿರುವ ಅವಿವೇಕತನ, ಸೋಮಾರಿತನ, ಸ್ವಾರ್ಥ, ಕರ್ತವ್ಯಬಾಹಿರತೆ, ಮುಂತಾದವುಗಳು ಅವನನ್ನು ಪ್ರಾಪಂಚಿಕ ರೀತಿಯ ಸೆರೆಗೆ ತಳ್ಳುವದು. ಸೈತಾನನು ಈ ಲೋಕ ಇಚ್ಛೆಗಳನ್ನು ಒಬ್ಬನಲ್ಲಿ ತಂದು ಹಾಕಿ ಅವನನ್ನು ದಾಸತ್ವದ ಸೆರೆಗೆ ತಳ್ಳುವನು. ಕುಡಿಕತನ ಮಾಧಕ ವಸ್ತುಗಳ ಸೇವನೆ, ವ್ಯಭಿಚಾರ ದುರಾತ್ಮಗಳ ಕಾಟ, ಇವೆಲ್ಲವೂ ಸೈತಾನನು ಒಡ್ಡುವ ಸೆರೆ, ಇದರಲ್ಲಿ ಸಿಕ್ಕಿ ಬಿದ್ದವರು, ಬಿಡುಗಡೆ ಹೊಂದುವದು ಬಹಳ ಕಷ್ಟ. ಆದರೆ ಈ ಎಲ್ಲಾ ಸೆರೆಯಿಂದ ಬಿಡುಗಡೆ ಹೊಂದಲು ಇರುವ ಮಾರ್ಗವೆಂದರೆ ಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿಕೊಳ್ಳುವದೇ ಆಗಿದೆ. ಇಂಥಹ ಸೆರೆಗಳಿಂದ ಜನರನ್ನು ಬಿಡುಗಡೆ ಗೊಳಿಸುವದಕ್ಕಾಗಿಯೇ, ತಂದೆ ದೇವರು ಯೇಸುಕ್ರಿಸ್ತನನ್ನು ಈ ಭೂಮಿಗೆ ಕಳುಹಿಸಿದನು. ನಮ್ಮ ಪಾಪ ಶಾಪಗಳ ವಿಮೋಚನೆಗಾಗಿ, ಆತನು ಸಜೀವ ಬಲಿಯಾಗಿ ಅರ್ಪಿತನಾದನು. ಪ್ರಾಪಂಚಿಕ ಸೆರೆಗಿಂತಲೂ ಭಯಂಕರವಾದದ್ದು ಪಾಪವೆಂಬ ಸೆರೆ ಯಾಕೆಂದರೆ ಪಾಪಮಾಡುವವನು ಪಾಪಕ್ಕೆ ದಾಸನಾಗಿರುವನು. "ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂಥದಾಗಿದೆ...ದೇಹದಿಂದ ನನ್ನನ್ನು ಬಿಡಿಸುವವನು ಯಾರು" ಎಂದು ಅಪೊ.ಪೌಲನು ಬರೆಯುತ್ತಾನೆ (ರೋಮಾ 7:23).

ದೇವಜನರೇ, ಇಂದು ನೀವು ಯಾವದೇ ಸೆರೆಗೆ ಒಳಪಟ್ಟಿದ್ದರೂ, ಕ್ರಿಸ್ತನು ನಿಮ್ಮನ್ನು ಅದರೊಳಗಿಂದ ಬಿಡಿಸಲು ಶಕ್ತನಾಗಿರುವನು. ಇಂದೇ, ಆತನ ಬಳಿಗೆ ಬಂದು ಬಂಧಮುಕ್ತರಾಗಿರಿ.

**ನೆನಪಿಗೆ : 'ನಾವು ಈಗಿನ ದೇಹದಲ್ಲಿರುವವರೆಗೂ ನರಳುತ್ತೇವೆ. ಪರಲೋಕದಿಂದ ದೊರಕುವ....ಧರಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ' (2ಕೊರಿ 5:2).**

**'ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ' (ಮತ್ತಾ 6:10).**

ಇಂದು ಪ್ರಪಂಚದಲ್ಲಿ ಮೂನ್ನೂರಕ್ಕೂ ಅಧಿಕವಾದ ದೇಶಗಳುಂಟು. ಕೆಲವು ಪ್ರಜಾಪ್ರಭುತ್ವದ ದೇಶಗಳು, ಕೆಲವು ಕಮ್ಯೂನಿಸ್ಟ್ ದೇಶಗಳು, ಕೆಲವು ಏಕಚಕ್ರಾಧಿಪತ್ಯ ದೇಶಗಳು. ಅದೇ ವೇಳೆಯಲ್ಲಿ ಕಣ್ಣಿಗೆ ಕಾಣದಂಥ ಕರ್ತನ ರಾಜ್ಯವು ಸೈತಾನನ ರಾಜ್ಯವೂ ಪ್ರಪಂಚದಲ್ಲಿರುವದು.

ಸೈತಾನನೂ ಅವನ ಸೈನ್ಯಗಳೂ, ಹೇಗಾದರೂ ಪ್ರಪಂಚವನ್ನೆಲ್ಲಾ ತನ್ನ ಕೈವಶ ಮಾಡಿಕೊಂಡು ಆಳ್ವಿಕೆ ನಡೆಸಬೇಕೆಂದು ಬಯಸುವರು. ಅದೇ ವೇಳೆಯಲ್ಲಿ ದೇವರೂ, ಭಕ್ತರೂ, ಕರ್ತನ ಪರಲೋಕ ರಾಜ್ಯವನ್ನು ಭೂಮಿಯಲ್ಲಿ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಿರುವರು. ಪರಲೋಕರಾಜ್ಯ ಭೂಮಿಯಲ್ಲಿ ಬರಬೇಕೆಂದರೆ, ಸೈತಾನನ ರಾಜ್ಯ ನಾಶವಾಗಬೇಕು. ಒಬ್ಬ ಮನುಷ್ಯನನ್ನು ರಕ್ಷಣೆಯ ಮಾರ್ಗದಲ್ಲಿ ನಡೆಸುವಾಗ, ಅವನು ಅಂಧಕಾರದಿಂದ, ಆಶ್ಚರ್ಯವಾದ ಬೆಳಕಿನ ಬಳಿಗೆ ಬರುವನು. ಅವನೊಳಗೆ ಪವಿತ್ರಾತ್ಮನ ಮೂಲಕವಾಗಿ ದೇವರ ರಾಜ್ಯ ಸ್ಥಾಪಿಸಲ್ಪಡುವದು. ಅಲ್ಲಿ ಸೈತಾನನ ದೊರೆತನಗಳು, ಅಧಿಕಾರಗಳು, ಆಕಾಶ ಮಂಡಲದ ದುರಾತ್ಮ ಸೈನ್ಯಗಳು ಇವುಗಳಿಗೆ, ಒಳಗೆ ಬರಲು ಸಾಧ್ಯವಿಲ್ಲ. ಯಾಕೋಬಿಗೆ ವಿರೋಧವಾಗಿ ಮಂತ್ರ ತಂತ್ರಗಳಿಲ್ಲ, ಇಸ್ರಾಯೇಲಿಗೆ ವಿರೋಧವಾಗಿ ಕಣಿ ಹೇಳುವವರಿಲ್ಲ (ಅರಣ್ಯ 23:23). ಆದರೆ ಅಲ್ಪವಿಶ್ವಾಸಿಗಳನ್ನು ಸೈತಾನನು ತಾಕುವನು ಅವನೊಳಗೆ ಬಂದು ಆಳಲು ಪ್ರಯತ್ನಿಸುವನು.

ಹಗ್ಗದ ಜಗ್ಗಾಟದಂತೆ (tug of war) ಎರಡು ಶಕ್ತಿಗಳಿಗೂ ಎಳೆದಾಟ ನಡೆಯುವದು. ಸೈತಾನನ ಸಹಾಯವಾಗಿ, ಅಶುದ್ದಾತ್ಮಗಳು ಅಶ್ಲೀಲ ಚಿತ್ರಗಳು, ನಟ ನಟಿಯರು ಸೇರಿರುವರು. ಕರ್ತನ ಪಕ್ಕದಲ್ಲಿ ಸಾವಿರಾರು ದೇವದೂತರು, ಭಕ್ತರು ನಿಲ್ಲುವರು. "ನಿಮ್ಮ ಆತ್ಮ ಯಾರನ್ನು ಆಶ್ರಯಿಸಿಕೊಂಡಿರುವದು"? ಎಂಬುದೋ, ನಿಮ್ಮ ಆತ್ಮೀಕ ಜೀವಿತದ ಜಯವನ್ನು ನಿರ್ಣಯಿಸುವದು. ಯೇಸುಕ್ರಿಸ್ತನು ಈ ಪ್ರಪಂಚದಲ್ಲಿದ್ದ ದಿನಗಳಲ್ಲಿ, ದೆವ್ವಗಳನ್ನು ಓಡಿಸಿ, ಜನರಿಗೆ ಬಿಡುಗಡೆ ಕೊಟ್ಟನು. ಅನಂತರ, ಶಿಷ್ಯರು, ಅಪೊಸ್ತಲರು, ದೆವ್ವಗಳನ್ನು ಓಡಿಸಿದರು ಪ್ರತಿಯೊಬ್ಬ ವಿಶ್ವಾಸಿಗೂ ದೆವ್ವಗಳನ್ನು ಓಡಿಸುವ ಅಧಿಕಾರವನ್ನು ಕರ್ತನು ನೀಡಿರುವನು (ಮಾರ್ಕ 16:17,18).

ದೇವಜನರೇ, ಕರ್ತನು ನಿಮ್ಮನ್ನು ಬಿಡಿಸಿರುವನಾದರೆ, ಕಟ್ಟಲ್ಪಟ್ಟಿರುವ ಮಕ್ಕಳನ್ನು ಬಿಡುಗಡೆಗೊಳಿಸುವ ಸೇವೆಯಲ್ಲಿ ತೊಡಗಿರಿ. ಒಬ್ಬ ಮನುಷ್ಯನೊಳಗೆ ಅಶುದ್ಧಾತ್ಮ ಇರುವದಾದರೆ, ಅದನ್ನು ಓಡಿಸದ ಹೊರತು ಸುವಾರ್ತೆ ಹೇಳಲು ಸಾಧ್ಯವಿಲ್ಲ. ಒಳಗಿರುವ ಸೈತಾನನು ಕ್ರಿಸ್ತನನ್ನೂ ಆತನ ಬಲವಾದ ಆತ್ಮವನ್ನು ಎದುರಿಸಿ ನಿಂತೇ ಇರುತ್ತಾನೆ. ದೇವರ ರಾಜ್ಯ ಭೂಮಿಯಲ್ಲಿ ಸ್ಥಾಪಿಸಲ್ಪಡುವಂತೆ ಪ್ರಾರ್ಥಿಸಿರಿ, ಸೈತಾನನನ್ನು ಎದುರಿಸಿ ನಿಲ್ಲಿರಿ.

**ನೆನಪಿಗೆ : 'ಸೈತಾನನಿಗೆ ಅವಕಾಶಕೊಡಬೇಡಿರಿ' (ಎಫೆ 4:27)**

# ಸಾಯಂಕಾಲವಾದಾಗ!

ಬೆಳಿಗ್ಗೆ : ಯಾಜಕ 26,27
ಸಂಜೆ : ಮಾರ್ಕ 2

**'ಸಂಜೆಯಾಗಲು ದೆವ್ವಹಿಡಿದ ಬಹಳ ಜನರನ್ನು ಆತನ ಬಳಿಗೆ ಕರತಂದರು; ಆತನು ಮಾತು ಮಾತ್ರದಿಂದಲೇ ದೆವ್ವಗಳನ್ನು ಬಿಡಿಸಿದ್ದಲ್ಲದೆ, ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ವಾಸಿಮಾಡಿದನು' (ಮತ್ತಾ 8:16).**

ದೆವ್ವಗಳನ್ನು ಓಡಿಸಿ, ಜನರಿಗೆ ಬಿಡುಗಡೆ ಕೊಡುವದಕ್ಕೆ ಐದು ಮೆಟ್ಟಿಲುಗಳುಂಟು.

**1. ಸೈತಾನನಿಗೆ ಸ್ಥಳ ಕೊಡಬೇಡಿರಿ.** ಅವನೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬೇಡಿರಿ. ಅವನ ಯಾವ ಸರಕು ನಿಮ್ಮಲ್ಲಿ ಇರಬಾರದು. ಯೇಸುಕ್ರಿಸ್ತನು ಹೇಳಿದನು "ಇಹಲೋಕಾಧಿಪತಿಯು ಬರುತ್ತಾನೆ. ಅವನಿಗೆ ಸಂಬಂಧಪಟ್ಟದ್ದು ಯಾವದೊಂದೂ ನನ್ನಲಿಲ್ಲ' ಎಂದು (ಯೋಹಾ 14:30).

**2. ದೇವರಿಗೆ ಒಳಗಾಗಿರಿ ಸೈತಾನನನ್ನು ಎದುರಿಸಿರಿ,** ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು (ಯಾಕೋ 4:7). ಸೈತಾನನನ್ನು ಎದುರಿಸಿ ನಿಲ್ಲುವಾಗ, ನೀವು ಕರ್ತನನ್ನು ನೂರಕ್ಕೆ ನೂರರಷ್ಟು ಸೇವಿಸುವಿರಾ? ಆತನಿಗೆ ವಿಧೇಯರಾಗುವಿರಾ? ಎಂಬುದನ್ನು ಧೃಢಪಡಿಸಿಕೊಳ್ಳಿರಿ. ರಕ್ಷಿಸಲ್ಪಟ್ಟವರ ಮಾತುಗಳಿಗೆ ದೆವ್ವಗಳು ವಿಧೇಯವಾಗುವವು ಶಿಷ್ಯರಿಗೆ ದೆವ್ವಗಳು ವಿಧೇಯವಾದವು (ಲೂಕ 10:17).

**3. ಬಲಿಷ್ಟನನ್ನು ಕಟ್ಟಿಹಾಕಿರಿ.** "ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದು ಹೇಗೆ? (ಮತ್ತಾ 12:29). ಭೂಮಿಯಲ್ಲಿ ನಿಮಗೆ ಕಟ್ಟುವದಕ್ಕೂ ಬಿಚ್ಚುವದಕ್ಕೂ ಅಧಿಕಾರ ಉಂಟು (ಮತ್ತಾ 16:19).

**4. ಸೈತಾನನನ್ನು ಖಂಡಿಸಿರಿ.** ಯೇಸುಕ್ರಿಸ್ತನು, ಸೈತಾನನನ್ನು ಓಡಿಸುವಾಗ, ಕೆಲವು ವೇಳೆ, ಅವನು ಮಾತಾಡದಂತೆ ಗದರಿಸಿದನು, ಖಂಡಿಸಿದನು ಹಾಗೆಯೇ ಪ್ರಧಾನ ದೇವದೂತನಾದ ಮಿಕಾಯೇಲನು ಸೈತಾನನನ್ನು ಎದುರಿಸಿ ನಿಂತಾಗ "ಅವನು ಸೈತಾನನ ಮೇಲೆ ದೂಷಣಾಭಿಪ್ರಾಯವನ್ನು ಹೇಳುವದಕ್ಕೆ ಧೈರ್ಯಗೊಳ್ಳದೆ ಕರ್ತನು ನಿನ್ನನ್ನು ಖಂಡಿಸಲಿ ಎಂದು ಹೇಳಿದನು' (ಯೂದ 1:9).

**5. ಸೈತಾನನನ್ನು ಓಡಿಸಿರಿ,** ಕರ್ತನು ಕೊಟ್ಟಿರುವ ಅಧಿಕಾರವನ್ನೂ, ಆಳ್ವಿಕೆಯನ್ನು ಉಪಯೋಗಿಸಿ, ಅವನನ್ನು ಓಡಿಸಿರಿ (ಲೂಕ 10:19).

ದೇವಜನರೇ, ಕಲ್ವಾರಿಯಲ್ಲಿ ಕ್ರಿಸ್ತನು ಹೊಂದಿದ ಜಯವನ್ನು, ನೀವು ಉಪಯೋಗಿಸಿ, ಸೈತಾನನನ್ನು ಎದುರಿಸಿ ನಿಲ್ಲಿರಿ. ಸೈತಾನನೇ, ನೀನು ಸೋತು ಹೋದವನು. ತಲೆ ಜಜ್ಜಿಲ್ಪಟ್ಟವನು. ಯೇಸುವಿನ ರಕ್ತವನ್ನು ಚಿಮುಕಿಸಿ, ನಿನ್ನ ತಲೆಯನ್ನು ಪುನಃ ನಾನು ತುಳಿಯುವೆನು' ಎಂದು ಹೇಳಿರಿ. ಪ್ರಿಯರೇ, ಯುದ್ಧವು ಕರ್ತನದು ಸೋಲು ಸೈತಾನನದು, ಆದರೆ ಜಯವೋ ನಮ್ಮದು. ದೆವ್ವವನ್ನು ಓಡಿಸಿದ ನಂತರ ಆ ಹೃದಯವನ್ನು ಪವಿತ್ರಾತ್ಮನಿಂದ ತುಂಬಿರಿ ಬರಿದಾಗಿ ಬಿಡಬೇಡಿರಿ.

**ನೆನಪಪಿಗೆ : 'ಬಿರುಗಾಳಿಯಿಂದ ಹೊಡೆಯಲ್ಪಟ್ಟು ಇಕ್ಕಟ್ಟಿನಲ್ಲಿ ಹರಿಯುವ ತೊರೆಯ ಹಾಗೆ ಆತನು ರಭಸದಿಂದ ಬರುವನಷ್ಟೆ' (ಯೆಶಾ 59:19).**

# ಬಿಡುಗಡೆಯ ಆತ್ಮನು!

ಬೆಳಿಗ್ಗೆ : ಅರಣ್ಯ 1,2
ಸಂಜೆ : ಮಾರ್ಕ 3:1–19

**'ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು' (2ಕೊರಿ 3:17).**

ಕಟ್ಟುಗಳಲ್ಲಿ ಜೀವಿಸುವ ಅನೇಕರು ತಮಗೆ ಬಿಡುಗಡೆ ಅವಶ್ಯ' ಎಂಬುದನ್ನು ತಿಳಿಯದೇ ಇರುವರು. ಸೈತಾನನು ಇರುವನು ಎಂಬುದರಲ್ಲಿ, ಅನೇಕರಿಗೆ ನಂಬಿಕೆ ಇಲ್ಲ ಅವನ ಕಾರ್ಯಗಳನ್ನು ತಿಳಿದಿಲ್ಲ. ಅವನು ಒಬ್ಬ ಸುಳ್ಳುಗಾರ, ನಯವಂಚಕ, ಕಳ್ಳ ಎಂದು ಸಹ ಗೊತ್ತಿಲ್ಲ. ಅವನಿಗೆ ಬಿದ್ದುಹೋದ ದೇವದೂತನ ಬಲ ಅಥವಾ ಮಹಿಮೆ ಉಂಟು ಸೈತಾನ ಅಥವ ವಿರೋಧಿ ಎಂಬ ಮಾತು 36 ಸಾರಿ ಸತ್ಯವೇದದಲ್ಲಿ ಬರುವದು.

ಕೆಲವರನ್ನು ವಂಚಿಸಲು, ಸೈತಾನನು ಸರ್ಪದಂತೆ ಬರುವನು. ತಂತ್ರವಾದ ಸ್ವಭಾವ ಅವನಿಗಿರುವದು (ಆದಿ 3:1,2 2ಕೊರಿ 11:3 ಪ್ರಕ 12:9). ಕೆಲವು ವೇಳೆ ಅವನು ತೋಳದಂತೆ, ಕರ್ತನ ಮಂದೆಯೊಳಗೆ ಅದನ್ನು ಚದುರಿಸಲು ಬರುವನು. ಬಲಹೀನವಾದ ಕುರಿಗಳನ್ನು ಹಿಡಿದು ತಿಂದು ಹಾಕುವನು (ಯೋಹಾ 10:12 ಮತ್ತಾ 10:16). ಒಂದು ಕಡೆ ಸಿಂಹವಾಗಿ, ವಿಶ್ವಾಸಿಗಳನ್ನು ನುಂಗಿ ಬಿಡಲು, ತಿರುಗಾಡುವನು (1ಪೇತ್ರ 5:8). ಪಕ್ಷಿಯಂತೆ ವಾಕ್ಯವೆಂಬ ಬೀಜಗಳನ್ನು ತಿಂದು ಬಿಡುವನು. ಬೆಳೆಯನ್ನು ನಾಶಮಾಡಲು ಪ್ರಯತ್ನಿಸುವನು (ಮತ್ತಾ 13:4,5). ಅವನು ಚೇಳಿಗೂ, ಬಾಷಾನಿನ ಹೋರಿಗೂ ಹೋಲಿಸಲ್ಪಟ್ಟಿರುವನು.

ಆದರೆ, ಕರ್ತನಾದರೋ, ಬಿಡುಗಡೆ ನೀಡುವ ಆತ್ಮನಾಗಿ, ನಿಮ್ಮನ್ನು ಆತ್ಮೀಕ ಕಟ್ಟುಗಳಿಂದ, ಶಾರೀರಿಕ ಕಟ್ಟುಗಳಿಂದ, ಬಿಡುಗಡೆ ಮಾಡುವನು, ನೀವು ಕರ್ತನನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸುವಿರಾದರೆ, ಸೈತಾನನ ಯಾವದೇ ಕಾರ್ಯಗಳು ನಿಮ್ಮನ್ನು ದಾಸತ್ವಕ್ಕೆ ಒಳಪಡಿಸಲು ಸಾಧ್ಯವಿಲ್ಲ. ಎಲ್ಲಿ ದೇವರಾತ್ಮನಿರುವನೋ, ಅಲ್ಲಿ ಬಿಡುಗಡೆ ಉಂಟು ಬಿಡುಗಡೆಯ ಜೀವಿತವನ್ನು ಬಯಸಿದ, ದಾವೀದನು 'ದೇವರೇ ನನ್ನಲ್ಲಿ ಶುದ್ಧ ಹೃದಯವನ್ನು ನಿರ್ಮಿಸು, ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು, ನಿನ್ನ ರಕ್ಷಣಾನಂದವನ್ನು ನಾನು ತಿರಿಗಿ ಅನುಭವಿಸುವಂತೆ ಮಾಡು, ನನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು' ಎಂದು ಪ್ರಾರ್ಥಿಸಿದನು (ಕೀರ್ತ 51:10, 12).

ದೇವಜನರೇ, ನೀವು ಯಾವಾಗಲೂ ಪವಿತ್ರಾತ್ಮನಿಂದ ತುಂಬಿದವರಾಗಿರ್ರಿ. ಪವಿತ್ರಾತ್ಮನ ಬೆಂಕಿಯಿಂದ ಮಾತ್ರವೇ, ಸೈತಾನನ ಶಕ್ತಿಯನ್ನು ಸುಟ್ಟುಹಾಕಲು ಸಾಧ್ಯ. ಪವಿತ್ರಾತ್ಮನ ಬಲ ನಿಮ್ಮನ್ನು ಎಲ್ಲಾ ದುಷ್ಟಶಕ್ತಿಗಳಿಂದ, ರಕ್ಷಿಸುವದು ಆತನು ಯಾವಾಗಲೂ ನಿಮ್ಮೊಂದಿಗಿರುವ ಸಹಾಯಕನು (ಯೋಹಾ 14:16).

**ನೆನಪಿಗೆ : 'ನಿಮ್ಮ ವಿಷಯವಾಗಿ ಮಾತಾಡುವದಕ್ಕೂ, ನಿಮ್ಮಮೇಲೆ ತೀರ್ಪು ಮಾಡುವದಕ್ಕೂ....ಸತ್ಯವಂತನು;ಆತನಿಂದ ನಾನು ಕೇಳದವುಗಳನ್ನೇ ಲೋಕಕ್ಕೆ ಹೇಳುತ್ತೇನೆ ಅಂದನು' (ಯೋಹಾ 8:26).**

## ದೇವರ ವಾಕ್ಯ ಸಹಾಯ ಮಾಡುವದು!

ಬೆಳಿಗ್ಗೆ : ಯಾಜಕ 3,4
ಸಂಜೆ : ಮಾರ್ಕ 3:20–35

**'ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ, ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುವನು' ಅಂದನು (ಮತ್ತಾ 4:4).**

ಸೈತಾನನ ಇನ್ನೊಂದು ಹೆಸರು, 'ಶೋಧಕನು' ಎಂಬದು (ಮತ್ತಾ 4:1) ಪ್ರಪಂಚದಲ್ಲಿ ಹುಟ್ಟಿದ ಪ್ರತಿ ಮನುಷ್ಯನನ್ನೂ ಅವನು ಶೋಧಿಸದೆ ಬಿಡುವದಿಲ್ಲ. ಕಡೇ ಉಸಿರು ಇರುವವರೆಗೂ, ಮರಣದ ಕಣಿವೆಯಲ್ಲಿ ನಡೆಯುವಾಗಲೂ, ಮನಸ್ಸನ್ನು ತಳಮಳಗೊಳಿಸಿ, ಕರ್ತನನ್ನು ಅಲ್ಲಗಳೆಯಬೇಕೆಂದು ಶೋಧಿಸುವನು.

ಯೇಸುಕ್ರಿಸ್ತನ ಸೇವೆಯ ಪ್ರಾರಂಭದಲ್ಲಿ ಅವನು ನೇರವಾಗಿ, ಮೂರು ಶೋಧನೆಗಳನ್ನು ತಂದು ಹಾಕಿದನು. ಕ್ರಿಸ್ತನು ತನ್ನ ಸ್ವಂತ ಬಲದಿಂದ ಅವನನ್ನು ಎದುರಿಸದೆ, ದೇವರ ವಾಕ್ಯದ ಮೂಲಕ ಬರೆಯಲ್ಪಟ್ಟಿರುವದೇ ಎಂದು ಹೇಳಿ ಜಯಗಳಿಸಿದನು ಕಾರಣ ದೇವರ ವಾಕ್ಯಸಾಧಾರಣವಾದದ್ದಲ್ಲ ಅದು ಆತ್ಮವೂ ಜೀವವೂ ಆಗಿರುವದು ಪವಿತ್ರಾತ್ಮನ ಹರಿತವಾದ ಖಡ್ಗವಾಗಿರುವದು.

ಯೇಸುಕ್ರಿಸ್ತನು ಜಯಗಳಿಸಿದನೆಂದು ಸೈತಾನನು ಸುಮ್ಮನಾಗಿ ಬಿಡಲಿಲ್ಲ, ಪುನಃ ಪುನಃ ಶೋಧನೆಗಳ ನ್ನೊಡ್ಡಿದನು. ಮಹಾಯಾಜಕರ ಮೂಲಕ ಶೋಧಿಸಿದನು. ಪಿಲಾತ, ಹೆರೋದನ ಮೂಲಕ ಶೋಧಿಸಿದನು. ಶಿಲುಬೆಯ ಮೇಲಿರುವಾಗಲೂ 'ನೀನು ದೇವಕುಮಾರನಾಗಿದ್ದರೆ, ಶಿಲುಬೆಯಿಂದ ಇಳಿದು ಬಾ ಎಂದು ಹೇಳುವಂತೆ ಜನರನ್ನು ಪ್ರಚೋದಿಸಿ, ಅವರ ಮೂಲಕ ಶೋಧಿಸಿದನು (ಮತ್ತಾ 27:40). ಸಹಿಸಲಾಗದ ನೋವನ್ನು ಛಡಿ ಏಟುಗಳನ್ನು, ಮುಳ್ಳಿನ ಕಿರಿಟವನ್ನು ಧರಿಸುವಂತೆ ಮಾಡಿ, ಆಗಲಾದರೂ ತಂದೆಯನ್ನು ಅಲ್ಲಗಳೆಯುವನೇನೋ? ಎಂದು ಶೋಧಿಸಿದನು. ಪ್ರತಿಯೊಬ್ಬ ಸೇವಕರನ್ನೂ ಶೋಧನೆಗೆ ಒಳಪಡಿಸಿ, ಅವರ ಹೆಸರನ್ನು ನಾಶಪಡಿಸ ಬೇಕೆಂದು ಪ್ರಯತ್ನಿಸುವನು. ಸೈತಾನನು ಯಾರು? ಅವನು ಕೆಳಕ್ಕೆ ದೊಬ್ಬಲ್ಪಟ್ಟ ದೇವದೂತನು ಕಲ್ವಾರಿ ಶಿಲುಬೆಯಲ್ಲಿ ತಲೆ ಜಜ್ಜಲ್ಪಟ್ಟವನು. ನಿಮ್ಮೊಳಗೆ ಇರುವಾತನು ದೊಡ್ಡವನೆಂದೂ, ಸರ್ವಶಕ್ತನೆಂದು, ಅಗ್ನಿಮಯನಾದವನೆಂದು ಅರಿಕೆ ಮಾಡಿರಿ. ಮಾತ್ರವಲ್ಲ ಸರ್ವಶಕ್ತನಾದ ಕರ್ತನನ್ನೇ ಆಶ್ರಯಿಸಿರಿ ಸೈತಾನನು ಕೆಲವು ಸತ್ಯವೇದ ವಾಕ್ಯಗಳನ್ನು ತೋರಿಸಬಹುದು. ಆದರೆ ಕ್ರಿಸ್ತನಲ್ಲಿ ನೀವು ಯಾರಾಗಿದ್ದೀರಿ? ಎಂಬುದನ್ನು ಅವನಿಗೆ ತೋರಿಸುವಾಗ, ಅವನು ಅದನ್ನು ಎದುರಿಸಲಾರದೆ ನಿಮ್ಮನ್ನು ಬಿಟ್ಟು ಓಡಿಹೋಗುವನು.

ದೇವಮಕ್ಕಳೇ, ಕ್ರಿಸ್ತನಲ್ಲಿ ನೀವು ಯಾರು? ಸೈತಾನನ ಕ್ರಿಯೆಗಳನ್ನು ನಾಶಪಡಿಸುವಂತೆ ಕರ್ತನು ನಿಮಗೆ ಕೊಟ್ಟಿರುವ ವಾಗ್ದಾನಗಳೇನು? ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿರಿ. ಈ ಪ್ರಪಂಚದಲ್ಲಿರುವವನಿಗಿಂತ ನಿಮ್ಮೊಳಗಿರುವವನು ದೊಡ್ಡವನು. ಕರ್ತನು ಸೈತಾನನ ಕ್ರಿಯೆಗಳನ್ನು ಲಯಮಾಡುವದಕೋಸ್ಕರ ಬಂದ ದೇವಕುಮಾರನಾಗಿರುವನು.(1ಯೋಹಾ 4:4).

**ನೆನಪಿಗೆ : 'ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ, ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ,...ಅಧಿಕಾರ ಕೊಟ್ಟನು' (ಯೊಹಾನ 1:12).**

# ಬಿಡುಗಡೆಗೊಳಿಸುವವನು ದೇವರಾತ್ಮನೇ!

ಬೆಳಿಗ್ಗೆ : ಅರಣ್ಯ 5,6
ಸಂಜೆ : ಮಾರ್ಕ 4:1–20

**'ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು' (ರೋಮಾ 1:8).**

ನಿಮಗೆ ಶರೀರದಲ್ಲೂ, ಆತ್ಮದಲ್ಲೂ ಬಿಡುಗಡೆ ಅಗತ್ಯ, ಅನೇಕ ವೇಳೆ ಸೈತಾನನು ನಿಮ್ಮ ಶರೀರದಲ್ಲಿ ಅನೇಕ ವ್ಯಾಧಿಗಳು ಬಲಹೀನತೆಗಳನ್ನು ತಂದು ಹಾಕುವನು. ಆದರೆ ಅನೇಕರು ಈ ಕಟ್ಟುಗಳಿಂದ ಹೇಗೆ ಬಿಡುಗಡೆ ಹೊಂದುವದೆಂಬುದನ್ನು ಅರಿಯದವರಾಗಿ, ತೊಳಲಾಡುವರು.

ಹದಿನೆಂಟು ವರುಷಗಳಿಂದ ಸೈತಾನನಿಂದ ಕಟ್ಟಲ್ಪಟ್ಟವಳಾಗಿ ನಡುಬಗ್ಗಿ ಗೂನಿಯಾಗಿದ್ದ ಸ್ತ್ರೀಗೆ, ತಾನು ಅಬ್ರಹಾಮನ ವಂಶದವಳು, ದೇವರೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡ ಸಂತತಿಗೆ ಸೇರಿದವಳು, ನಾನು ಬಿಡುಗಡೆ ಹೊಂದ ಬೇಕು ಎಂಬುದನ್ನು ತಿಳಿಯದೆ ತನ್ನ ಜೀವಿತಕಾಲವೆಲ್ಲಾ ತಾನು ಗೂನಿಯಾಗಿಯೇ ಇರಬೇಕೆಂದು ಅಂದುಕೊಂಡಿರಬಹುದು. ಆದರೆ ಯೇಸುಕ್ರಿಸ್ತನು ಅವಳ ಮೇಲೆ ಕೈಯನ್ನು ಇಟ್ಟಾಗ, ಆ ಕಟ್ಟು ಬಿಚ್ಚಿ ಹೋಯಿತು ನಿಮಿರಿ ನಿಂತಳು.

ಒಬ್ಬ ವಿಶ್ವಾಸಿ, ತನ್ನನ್ನು ಮಿಶನರಿಯಾಗಿ ಒಪ್ಪಿಸಿಕೊಟ್ಟು ಸೇವೆಗೆ ಮುಂದೆ ಬಂದರು. ಅವರ ತಲೆಯಲ್ಲಿ ಒಂದು ಕ್ಯಾನ್ಸರ್ ಗಡ್ಡೆ ಇತ್ತು. ಹೀಗಿರುವಾಗ ಅವರು ಹೇಗೆ ಉತ್ತರ ಭಾರತಕ್ಕೆ ಹೋಗಿ, ಭಾಷೆ ತಿಳಿಯದ ಜನರ ನಡುವೆ ಬಿಡುಗಡೆಯ ಸೇವೆ ಮಾಡುವರು ಎಂದು ಇತರ ವಿಶ್ವಾಸಿಗಳು ಸೇವಕರು ನೆನಸಿದರು. ಆದರೆ ಆತನೋ, 'ಕರ್ತನ ಆತ್ಮನು ನನ್ನನ್ನು ಬಿಡುಗಡೆಗೊಳಿಸುವನು'ಎಂಬ ನಂಬಿಕೆ ಅವರಲ್ಲಿ ದೃಢವಾಗಿದ್ದಿತು. ಆತನನ್ನು ಮಿಶನರಿಯಾಗಿ ಪ್ರತಿಷ್ಠಿಸುವಾಗ ಅನೇಕ ಸೇವಕರು ಮುಂದೆ ಬಂದು ಆತನ ಶಿರಸ್ಸಿನ ಮೇಲೆ ಕೈ ಇಟ್ಟು ಅಭಿಷೇಕಿಸಿದರು. ಏನಾಶ್ಚರ್ಯ! ಆ ಸಮಯದಲ್ಲಿ ಕರ್ತನ ಆತ್ಮ ಆತನ ಮೇಲೆ ಬಲವಾಗಿ ಇಳಿದು ಬಂದನು. ಆ ಕಟ್ಟಿನಿಂದ ಪೂರ್ಣವಾದ ಬಿಡುಗಡೆ ನೀಡಿದನು. ಆತನಲ್ಲಿ ನವ ಯೌವ್ವನ ಬಂದಿತು, ಹೊಸ ಬಲದಿಂದಲೂ ಮಹಿಮೆಯಿಂದಲೂ ತುಂಬಲ್ಪಟ್ಟನು. ಇಂದಿಗೂ ಆತನು ಸೇವೆಯಲ್ಲಿ ಮಹಿಮೆಯಾಗಿ ಉಪಯೋಗಿಸಲ್ಪಡುತ್ತಿರುವರು.

ದೇವನಜರೇ, ನಿಮ್ಮಲ್ಲಿ ಯಾವದೇ ಬಲಹೀನತೆ ಇದ್ದರೂ ಇಂದು ಯೇಸುಕ್ರಿಸ್ತನು ನಿಮಗೆ ಬಿಡುಗಡೆ ನೀಡುವನು. ನೂತನ ಬಲದಿಂದಲೂ, ನೂತನ ಕೃಪೆಯಿಂದಲೂ ನಿಮ್ಮನ್ನು ಅಲಂಕರಿಸುವನು. ಶರೀರದಲ್ಲಿ ಮಾತ್ರವಲ್ಲ, ಆತ್ಮದಲ್ಲೂ ನೀವು ಬಿಡುಗಡೆ ಹೊಂದುವಿರಿ. ನೀವು ಪಡೆದಿರುವ ಆತ್ಮ ರಕ್ಷಣೆ ಅಮೂಲ್ಯವಾದದ್ದು ನಿಮಗಾಗಿ ಯೇಸುಕ್ರಿಸ್ತನು ಶಿಲುಬೆಯಲ್ಲಿ ತನ್ನ ಶರೀರಾತ್ಮಗಳನ್ನು ಯಜ್ಞವಾಗಿ ಸಮರ್ಪಿಸಿ ಪಾಪಶಾಪ, ವ್ಯಾಧಿಗಳಿಂದ ಬಿಡುಗಡೆಗೊಳಿಸಿರುವನು.

**ನೆನಪಿಗೆ : 'ನಾನು ಬೆಂಕಿಯನ್ನು ಭೂಮಿಯ ಮೇಲೆ ಹಾಕಬೇಕೆಂದು ಬಂದೆನು. ಅದು ಇಷ್ಟರೊಳಗೆ ಹತ್ತಿಕೊಂಡಿದ್ದರೆ ನನಗೆ ಎಷ್ಟೋ ಸಂತೋಷ' (ಲೂಕ 12:49).**

# ತಲೆ ಎತ್ತಿ ನಿಲ್ಲಿರಿ!

ಬೆಳಿಗ್ಗೆ : ಅರಣ್ಯ 7,8
ಸಂಜೆ : ಮಾರ್ಕ 4:21–41

**"ನಿಮ್ಮನ್ನು ಕುಗ್ಗಿಸಿದ ನೊಗವನ್ನು ಮುರಿದು ನೀವು ನೆಟ್ಟಗೆ ನಿಂತು ನಡೆಯುವಂತೆ ಮಾಡಿದ ಯೆಹೋವನು ನಾನೇ' (ಯಾಜಕ 26:13).**

ಸೈತಾನನ ಒಂದು ಭಯಂಕರ ತಂತ್ರ ಮನುಷ್ಯನನ್ನು ತಲೆತಗ್ಗಿ ನಡೆಯುವಂತೆ ಮಾಡುವದು. ಕೆಲವರನ್ನು ಪಾಪವೆಂಬ ದಾಸತ್ವದ ನೊಗ, ಸಾಲದ ಸಮಸ್ಯೆ ಇವುಗಳಿಗೆ ಒಳಪಡಿಸಿ ತಲೆತಗ್ಗಿಸುವಂತೆ ಮಾಡುವನು. ಕರ್ತನು, ಇಸ್ರಾಯೇಲ್ಯರನ್ನು, ಐಗುಪ್ತದ ದಾಸತ್ವದಿಂದ ಬಿಡಿಸಿ, ಕಾನಾನಿಗೆ ಕರೆತಂದನು. ತನ್ನ ಜನರನ್ನು ತಲೆ ಎತ್ತಿ ನಡೆಯುವಂತೆ ಮಾಡುವ ದೇವರೆಂದು ನಿರೂಪಿಸಿದನು. ಕಾನಾನಿನಲ್ಲಿ ಅವರು ಮತ್ತೊಬ್ಬರಿಂದ ಆಳಲ್ಪಡುವವರಾಗಿ ಅಲ್ಲ, ರಾಜ್ಯತ್ವದ ಅಭಿಷೇಕ ಹೊಂದಿ ಆಳ್ವಿಕೆ ನಡೆಸುವವರಾಗಿ, ಜಯಶಾಲಿಗಳಾಗಿ ಕಾಣಲ್ಪಟ್ಟರು ಇಂದು ನಿಮಗೆ ಇರುವ, ಎಲ್ಲಾ ನೊಗಗಳನ್ನು ಕರ್ತನು ,ಮುರಿದು ನಿಮ್ಮನ್ನು ಅನಂದದಿಂದ ತುಂಬಿದವರಾಗಿ, ತಲೆ ಎತ್ತಿ ನಡೆಯುವಂತೆ ಮಾಡುವನು.

ಸಣ್ಣ ಪ್ರಾಯದಲ್ಲೇ ಯೋಸೇಫನು ಕಂಡ ಕನಸಿನಲ್ಲಿ, ಹನ್ನೊಂದು ಸಿವುಡುಗಳ ಮಧ್ಯದಲ್ಲಿ, ತನ್ನ ಸಿವುಡು, ತಲೆ ಎತ್ತಿ ನಿಂತಿರುವದನ್ನು ಕಂಡನು. ಪರಿಶುದ್ಧವಾದ ಜೀವಿತ ನಿಮ್ಮನ್ನು ಯಾವಾಗಲೂ ತಲೆ ಎತ್ತಿ ನಡೆಯುವಂತೆ ಮಾಡುವದು. ಪಾಪದ, ಅನೀತಿಯ ಜೀವಿತ ತಲೆ ತಗ್ಗಿಸಿ ನಿಲ್ಲುವಂತೆ ಮಾಡುವದು ಯಾಕೋಬನಿಗೆ ಹನ್ನೆರಡು ಮಂದಿ ಮಕ್ಕಳಿದ್ದರೂ, ಯೋಸೇಫನ ಸಿವುಡು ಮಾತ್ರ ತಲೆ ಎತ್ತಿ ನಿಂತಿತು. ನಿಮ್ಮ ಕುಟುಂಬದಲ್ಲಿರುವ ಎಲ್ಲರಿಗಿಂತಲೂ, ಕರ್ತನು ನಿಮ್ಮನ್ನು ಉನ್ನತಿಗೆ ತಂದು ಆಶೀರ್ವದಿಸುವಂತೆ ಪರಿಶುದ್ಧ ಜೀವಿತಕ್ಕೆ ನಿಮ್ಮನ್ನು ಒಪ್ಪಿಸಿ ಕೊಡಿರಿ. ಆತನು ನಿಮ್ಮನ್ನುಬಾಲವಾಗದೆ ತಲೆಯಾಗಿ ನಿಲ್ಲುವಂತೆ, ಆಶೀರ್ವದಿಸುವನು.

ಪಾಪ, ಅನೀತಿ ಅಕ್ರಮಗಳು ಯಾವಾಗ್ಯೂ ಮನುಷ್ಯನನ್ನು ದಾಸತ್ವದ ನೊಗದಲ್ಲಿ ಸಿಕ್ಕಿಸುವದು. ಪ್ರಾರಂಭದಲ್ಲಿ ಅನೀತಿ, ಅಕ್ರಮಗಳು ಜೀವಿತದಲ್ಲಿ ಬಹಿರಂಗವಾಗಿ ಸಂತೋಷ ಸಮೃದ್ಧಿಗಳನ್ನು ಕಾಣುವಂತೆ ಮಾಡಿದರೂ. ಆಂತರ್ಯದಲ್ಲಿನ ಸಮಾಧಾನವನ್ನು ಕ್ರಮೇಣವಾಗಿ ನಾಶಪಡಿಸುವದು ಭಯದ ಆತ್ಮ ನಿಮ್ಮನ್ನು ಆಳುವದು.

ದೇವಜನರೇ, ನೀವು ನಿಮ್ಮ ಜೀವಿತದಲ್ಲಿ ತಲೆ ಎತ್ತಿ ನಡೆಯಬೇಕೆಂದರೆ, ಪರಿಶುದ್ಧ ಜೀವಿತವನ್ನು ನಡೆಸಲು ಕ್ರಿಸ್ತಯೇಸುವೇ ಮಾರ್ಗವಾಗಿರುವನು. ನಾನೇ ಸತ್ಯವೂ, ಮಾರ್ಗವೂ ಜೀವವೂ ಆಗಿರುವೆನೆಂದು ಹೇಳಿರುವನಲ್ಲವೇ! ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಡೆಯಿರಿ. ಹಾಗೂ ಆತನ ಆಜ್ಞೆಗಳನ್ನು ಕೈಗೊಂಡು ನಡೆಯಿರಿ.

**ನೆನಪಿಗೆ : 'ಯೆಹೋವನ ಭಯವು ಜೀವದಾಯಕವು; ಭಯಭಕ್ತಿಯುಳ್ಳವನು ತೃಪ್ತನಾಗಿ ನೆಲೆಗೊಳ್ಳುವನು ಅವನಿಗೆ ಕೇಡು ಸಂಭವಿಸದು' (ಜ್ಞಾನೋ 19:23).**

# ಪ್ರಾಯದ ಸಿಂಹ!

ಬೆಳಿಗ್ಗೆ : ಅರಣ್ಯ 9,10,11
ಸಂಜೆ : ಮಾರ್ಕ 5:1–20

**'ಆ ಜನಾಂಗದವರು, ಪ್ರಾಯದ ಸಿಂಹದಂತೆ ಎದ್ದು ಮೃಗೇಂದ್ರನಂತೆ ನಿಂತಿದ್ದಾರೆ' (ಅರಣ್ಯ 23:24).**

ಇಸ್ರಾಯೇಲ್ಯರನ್ನು ಕಾಯುವಾತನು ತೂಕಡಿಸುವದು ಇಲ್ಲ, ನಿದ್ರಿಸುವದೂ ಇಲ್ಲ. ಆತನು ನಿಮ್ಮ ಕಾಲನ್ನು ಎಡವಲು ಬಿಡುವದಿಲ್ಲ. ನೀವು ತಲೆತಗ್ಗಿಸಿ ನಿಂತುಕೊಳ್ಳುವದನ್ನು ಆತನು ಸಹಿಸುವದಿಲ್ಲ. ನೀವು ಕರ್ತನ ಮಕ್ಕಳಲ್ಲವಾ? ಆದುದರಿಂದ ಪ್ರಾಯದ ಸಿಂಹದಂತೆ, ತಲೆ ಎತ್ತಿ ನಿಲ್ಲಿರಿ. ಪ್ರಜೆಗೆ ಧರ್ಮವು ಉನ್ನತಿ, ಅಧರ್ಮವು ಅವಮಾನ' (ಜ್ಞಾನೋ 14:34). "ಶಿಷ್ಟನು ಸಿಂಹದಂತೆ ಧೈರ್ಯದಿಂದಿರುವನು' (ಜ್ಞಾನೋ 28:1).

ಯಾವಾಗ ನೀವು ನಿಮ್ಮ ಪಾಪಗಳನ್ನು ಅರಿಕೆ ಮಾಡಿ, ಬಿಟ್ಟು ಬಿಡುವಿರೋ, ಆಗ ನಿಮಗೆ ಪಾಪಕ್ಷಮಾಪಣೆಯೂ ಸಿಗುವದು. ನೀವು ರಕ್ಷಿಸಲ್ಪಡುವಾಗ, ದೇವರ ಮಕ್ಕಳಾಗುವಿರಿ' (ಯೋಹಾ 1:12). ಕರ್ತನಲ್ಲಿ ನಂಬಿಕೆಯಿಟ್ಟು ಸಕಲ ಪಾಪಸ್ವಭಾವಗಳನ್ನು ಬಿಟ್ಟು ಬಿಟ್ಟು, ತಲೆ ಎತ್ತಿ ನಡೆಯಿರಿ. ಯೆಹೋವನೇ, ನನ್ನನ್ನು ಕರುಣಿಸು ನಾನು ನಿನ್ನ ಕಿಂಕರನು ನಿನ್ನ ದಾಸಿಯ ಮಗನೂ ನಿನ್ನ ಸೇವಕನೂ ಆಗಿದ್ದೇನೆ. ನನ್ನ ಬಂಧನಗಳನ್ನು ಬಿಚ್ಚಿ ಬಿಟ್ಟಿದ್ದೀ (ಕೀರ್ತ 116:16). ಎಂಬುದೇ ದಾವೀದನ ಸಾಕ್ಷಿ. ಹಣವನ್ನೂ, ಸಂಪತ್ತನ್ನೂ ನಂಬಿರುವವರು ಬಿದ್ದು ಹೋಗುವರು. ದುರ್ಮಾಗಿಗಳಿಗೆ ಸಮಾಧಾನ ಇರುವದಿಲ್ಲ. ಕೆಲವರು ರಥಬಲದಲ್ಲಿ, ಕೆಲವರು ಅಶ್ವಬಲದಲ್ಲಿ ಹೆಚ್ಚಳ ಪಡುತ್ತಾರೆ. ನಾವಾದರೋ ನಮ್ಮ ದೇವರಾದ ಯೆಹೋವನಲ್ಲಿಯೇ ಹೆಚ್ಚಳ ಪಡುತ್ತೇವೆ. ಅವರು ಬಿದ್ದು ಹೋಗಿದ್ದಾರೆ, ನಾವೋ ನಿಂತಿದ್ದೇವೆ' (ಕೀರ್ತ 20:7,8) ಎಂಬುದೇ. ಕರ್ತನನ್ನು ನಂಬಿದ ಮಕ್ಕಳ ಸಾಕ್ಷಿ.

ಹದಿನೆಂಟು ವರುಷಗಳಿಂದ ಗೂನಿಯಾದವಳನ್ನು ನೆಟ್ಟಗೆ ನಡೆಯುವಂತೆ ಮಾಡಬೇಕೆಂದು ಕ್ರಿಸ್ತನ ಆಂತರ್ಯದಲ್ಲಿ ಉಂಟಾದ ಪ್ರೇರಣೆಗೆ ಕಾರಣವೇನು? ಹೌದು, ಅವಳು ದೇವರೊಂದಿಗೆ ನಡೆದ ಅಬ್ರಹಾಮನ ಸಂತತಿ, ಆದ್ದರಿಂದ ಅವಳು ತಲೆತಗ್ಗಿಸಿ ನಡೆಯಲೇ ಬಾರದು. ಅವಳನ್ನು ನೆಟ್ಟಗೆ ನಡೆಯುವಂತೆ ಮಾಡುವೆನು ಎಂಬ ವೈರಾಗ್ಯದಿಂದ ಅವಳು ನೆಟ್ಟಗೆ ನಡೆಯುವಂತೆ ಸ್ವಸ್ಥಪಡಿಸಿದನು. ಜಕ್ಕಾಯನನ್ನು ನೋಡಿರಿ! ಅನ್ಯಾಯವಾಗಿ ಸುಂಕ ವಸೂಲಿ ಮಾಡುತ್ತಿದ್ದರಿಂದ, ಜನರು ಅವನನ್ನು ಜನರು ಸಹಿಸುತ್ತಿರಲಿಲ್ಲ. ಅವನು ತಲೆತಗ್ಗಿಸಿ ನಿಂತನು. ಆದರೆ ಅವನು ತಲೆ ಎತ್ತಿ ನಡೆಯುವಂತೆ ಮಾಡಿದ ತೀರ್ಮಾನ ಏನು? ನಾನು ಅನ್ಯಾಯವಾಗಿ ಯಾರಿಂದ ಏನಾದರೂ ಎಳೆದುಕೊಂಡಿದ್ದೇಯಾದರೆ ನಾಲ್ಕರಷ್ಟು ಹಿಂದಕ್ಕೆ ಕೊಡುತ್ತೇನೆ ಎಂದು ಹೇಳಿದನು' (ಲೂಕ 19:8). ಕರ್ತನು ಇದನ್ನು ಕೇಳಿ ಈ ಹೊತ್ತು ಈ ಮನೆಗೆ ರಕ್ಷಣೆಯಾಯಿತು. ಇವನೂ ಅಬ್ರಹಾಮನ ವಂಶೀಕನಲ್ಲವೇ ಎಂದು ಹೇಳಿದನು (ಲೂಕ 19:8).

ದೇವಜನರೇ, ನೀವು ದೇವಕುಮಾರನಾದ ಕ್ರಿಸ್ತನ ಮಕ್ಕಳಾಗಿರುವಿರಿ ನಿಮಗೆ ಎರಡರಷ್ಟು ಆಶೀರ್ವಾದಗಳುಂಟು ತಲೆ ಎತ್ತಿ ನಡೆಯುವಿರಿ.

**ನೆನಪಿಗೆ : 'ಆತನು ದೇವದೂತರನ್ನು ಕೈ ಹಿಡಿದವನೆಂದು ಬರೆದಿಲ್ಲ ಅಬ್ರಹಾಮನ ಸಂತತಿಯನ್ನು ಕೈಹಿಡಿದಿದ್ದಾನಷ್ಟೆ' (ಇಬ್ರಿ 2:16).**

# ಖಿನ್ನತೆ!

ಬೆಳಿಗ್ಗೆ: ಅರಣ್ಯ : 12,13,14
ಸಂಜೆ : ಮಾರ್ಕ : 5:21–43

**'ಯೆಹೋವನೇ, ನನಗೆ ಸಾಕಾಯಿತು, ನನ್ನ ಪ್ರಾಣವನ್ನು ತೆಗೆದು ಬಿಡು; ನಾನು ನನ್ನ ಪಿತೃಗಳಿಗಿಂತ ಉತ್ತಮನಲ್ಲ' (1ಅರ 19:4)**

'ಖಿನ್ನತೆ' ಅಂದರೆ ಮನಗುಂದಿ ಹೋಗುವದು ಎಂದು ಅರ್ಥ. ಆಂಗ್ಲ ಭಾಷೆಯಲ್ಲಿ ಡಿಪ್ರೆಶನ್ ಎಂದು ಹೇಳುವರು. ದೇವರ ಮಕ್ಕಳು ಖಿನ್ನತೆಯಿಂದ ಖಂಡಿತವಾಗಿ ಬಿಡುಗಡೆಯಾಗಬೇಕು. ಇದರಿಂದ ಹಲವು ರೀತಿಯ ಬಲಹೀನತೆಗಳಿಗೆ ಒಳಗಾಗಿ "ಸತ್ತರೆ ಸಾಕು" ಎಂಬ ಯೋಚನೆಯನ್ನು ಸೈತಾನನು, ತಂದು ಹಾಕುವನು. 'ಖಿನ್ನತೆ' ಪ್ರವಾದಿಯಾದ ಎಲೀಯನನ್ನೂ ಬಿಡಲಿಲ್ಲ ಕರ್ಮೆಲ್ ಬೆಟ್ಟದಲ್ಲಿ "ಅಗ್ನಿಯಿಂದ ಉತ್ತರ ನೀಡುವ ದೇವರೇ ನಿಜವಾದ ದೇವರು" ಎಂದು ಬಾಳನ ಪ್ರವಾದಿಗಳಿಗೆ ಸವಾಲು ಹಾಕಿ, ಅವರನ್ನು ಕೊಂದು ಹಾಕಿದವನು, ಈಗ ಇಜಬೇಲ್‌ರಾಣಿಗೆ ಹೆದರಿ, ಸಾಕು ಕರ್ತನೇ ಎಂದು ಹೇಳುವಷ್ಟರ ಮಟ್ಟಿಗೆ ಸೈತಾನನು ಮನಗುಂದುವಿಕೆಗೆ ಅವನನ್ನು ಒಳಪಡಿಸಿದನು. ಕರ್ತನನ್ನು ನೋಡುವ ಬದಲು, ದುಷ್ಟ ಮನುಷ್ಯರನ್ನು ನೋಡುವಾಗ, ಇಂಥಹ ಯೋಚನೆಗೆಗಳು ಬರುವದು. ಶಿಷ್ಯನಾದ ಪೇತ್ರನು ಕರ್ತನನ್ನು ಬಿಟ್ಟು, ಭೋರ್ಗರೆಯುವ ಅಲೆಗಳನ್ನು ನೋಡಿದಾಗ, ಮುಳುಗಬೇಕಾದ ಪರಿಸ್ಥಿತಿ ಉಂಟಾಯಿತಲ್ಲವಾ? ಪರಿಸ್ಥಿತಿಗಳನ್ನು, ವಿರೋಧಗಳನ್ನು ನೋಡದೆ. ಕರ್ತನನ್ನು ನೋಡಿರಿ. ಆಗ ನೀವು ಎಡವಿ ಬೀಳುವದಿಲ್ಲ. ದಾವೀದನು ಹೇಳುತ್ತಾನೆ "ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆ; ಆತನು ನನ್ನ ಬಲಗಡೆಯಲ್ಲಿ ಇರುವದರಿಂದ ನಾನು ಎಂದಿಗೂ ಕದಲುವದಿಲ್ಲ" (ಕೀರ್ತ 16:8).

ಅಪೊ.ಪೌಲನಿಗೆ ಅನೇಕ ದೈವೀಕ ಪ್ರಕಟನೆಗಳು ಉಂಟಾಯಿತು. ಆದರೆ ಅವನ ಶರೀರದಲ್ಲಿ ಒಂದು ಮುಳ್ಳು ಚುಚ್ಚುತ್ತಿತ್ತು. ಆ ಮುಳ್ಳನ್ನು ಸೈತಾನನ ದೂತನೆಂದು ಕರೆದನು (2ಕೊರಿ 12:7). ಆದರೆ ಕರ್ತನು ಹೇಳಿದನು, ನೀನು ಮುಳ್ಳನ್ನು ನೋಡಬೇಡ ನನ್ನ ಕೃಪೆಯನ್ನು ದೃಷ್ಟಿಸು. ಮುಳ್ಳನ್ನೇ ನೋಡಿದಂತೆಲ್ಲಾ ಅದು ಇನ್ನೂ ಹೆಚ್ಚಾಗಿ ಚುಚ್ಚುತ್ತಲೇ ಇರುತ್ತದೆ. ಆದರೆ ಕರ್ತನ ಕೃಪೆಯನ್ನು ಯೋಚಿಸುವಾಗ, ಆ ಮುಳ್ಳನ್ನು ಜಯಿಸುವ ಕೃಪೆ ದೊರಕುವದು. ಖಿನ್ನತೆಗೆ ಸ್ಥಳ ಕೊಡದೆ, ದೇವರನ್ನು ಸ್ತುತಿಸಿ, ಮಹಿಮೆ ಪಡಿಸುವಾಗ, ಕರ್ತನ ಕೃಪೆಯಲ್ಲಿ ಸಂತೋಷಿಸಬಹುದು.

ದೇವಮಕ್ಕಳೇ, ನಿಮ್ಮ ಮೇಲಿರುವ ಭಾರಗಳನ್ನು ಕುರಿತು ಚಿಂತಿಸದಿರಿ. 'ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು; ಆತನು ನಿನ್ನನ್ನು ಉದ್ಧಾರ ಮಾಡುವನು ನೀತಿವಂತನನ್ನು ಎಂದೂ ಕದಲಗೊಡಿಸನು' (ಕೀರ್ತ 55:22). ಪ್ರಿಯರೇ, ನಿಮ್ಮನ್ನು ಖಿನ್ನತೆಗೆ ಒಳಪಡಿಸುವ ಎಲ್ಲಾ ಶತ್ರುವಿನ ಬಲವನ್ನು, ಅಪನಂಬಿಕೆಯನ್ನೂ, ಅಧೈರ್ಯವನ್ನೂ ಎದುರಿಸಿ ನಿಲ್ಲಿರಿ ಸೈತಾನನ ತಂತ್ರಗಳನ್ನು ಎದುರಿಸಿರಿ ಅವನು ಓಡಿ ಹೋಗುವನು.

**ನೆನಪಿಗೆ : 'ನಿನ್ನ ಜೀವಮಾನವೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು. ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು' (ಯೆಹೋಶುವ 1:5).**

# ಹೊರೆಗಳಿಂದ ಬಿಡುಗಡೆ!

ಬೆಳಿಗ್ಗೆ: ಅರಣ್ಯ : 15,16
ಸಂಜೆ : ಮಾರ್ಕ : 6:1–29

**'ಐಗುಪ್ತ್ಯರ ಅರಸನು–ಮೋಶೆಯೇ, ಆರೋನನೇ, ಈ ಜನರು ತಮ್ಮ ಕೆಲಸವನ್ನು ಬಿಡುವಂತೆ ನೀವು ಯಾಕೆ ಮಾಡುತ್ತೀರಿ? ಎಂದು ಹೇಳಿದನು' (ವಿಮೊ 5:4).**

ಐಗುಪ್ತದ ಫರೋಹನನಂತೆ, ಸೈತಾನನು ದಯೆ ದಾಕ್ಷಿಣ್ಯವಿಲ್ಲದೆ, ದೇವಮಕ್ಕಳ ಮೇಲೆ ಹೊರೆಗಳನ್ನು ಹೊರಿಸುತ್ತಿರುವನು. ಸರಿಯಾದ ಸಂಪಾದನೆಯಿಲ್ಲದೆ ಕುಟುಂಬದ ಭಾರ, ವ್ಯಾಧಿಯ ಭಾರ, ಸಾಲದ ಭಾರ ಹೀಗೆ ನಾನಾ ರೀತಿಯ ಹೊರೆಗಳನ್ನು ಜನರು ಹೊರುವಂತೆ ಮಾಡುತ್ತಿರುವನು.

ಕರ್ತನಾದ ಯೇಸುಕ್ರಿಸ್ತನಾದರೋ, ಆ ಭಾರವಾದ ಹೊರೆಗಳನ್ನು ತನ್ನ ಮೇಲೆ ಇಟ್ಟುಬಿಡುವಂತೆ ಹೇಳುವನು. "ಎಲ್ಲೈ ಕಷ್ಟಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರು ನನ್ನ ಬಳಿಗೆ ಬನ್ನಿರಿ ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾನು ಸಾತ್ವಿಕನೂ, ದೀನಮನಸ್ಸುಳ್ಳವನೂ, ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನಲ್ಲಿ ಕಲಿತುಕೊಳ್ಳಿರಿ' (ಮತ್ತಾ 11:28,29) ಅನ್ನುತ್ತಾನೆ. ಆತನು ಶಿಲುಬೆಯಲ್ಲಿ ನಮ್ಮ ಪಾಪಗಳನ್ನು ಹೊತ್ತಿರುವನು (ಯೆಶಾ 53:12). ಅಕ್ರಮಗಳನ್ನು ಹೊತ್ತಿರುವನು (ಯೆಶಾ 53:11). ದುಃಖಗಳನ್ನು ಹೊತ್ತಿರುವನು (ಯೆಶಾ 53:4). ಶಾಪಗಳನ್ನು ಹೊತ್ತಿರುವನು (ಗಲಾ 3:13). ಬಲಹೀನತೆಗಳನ್ನು ತನ್ನ ಮೇಲೆ ತೆಗೆದುಕೊಂಡು ವ್ಯಾಧಿಗಳನ್ನು ಹೊತ್ತಿರುವನು (ಮತ್ತಾ 8:17). ಕ್ರಿಸ್ತನು ಹೊತ್ತದ್ದನ್ನು, ಇನ್ನು ನೀವು ವ್ಯರ್ಥವಾಗಿ ನಿಮ್ಮ ತಲೆಯಲ್ಲಿ ಹೊತ್ತುಕೊಳ್ಳುವ ಅವಶ್ಯಕತೆ ಇಲ್ಲ, ಅವುಗಳೆಲ್ಲವನ್ನೂ ಕರ್ತನ ಮೇಲೆ ಹಾಕಿಬಿಟ್ಟು ನೆಮ್ಮದಿಯಿಂದ ಇರಿ.

ಒಮ್ಮೆ ಸಿಂಗಪುರದಲ್ಲಿ ಒಂದು ಕುಟುಂಬವನ್ನು ಸಂಧಿಸಿದೆ. ಅವರು ಒಂದು ರೀತಿಯ ಒತ್ತಡದಲ್ಲಿ ಜೀವಿಸುತ್ತಿದ್ದರು. ಗಂಡ ಹೆಂಡತಿ ಒಬ್ಬರನ್ನೊಬ್ಬರು ನೋಡುವದೇ ಅಪರೂಪವಾಗಿತ್ತು. ಕಾರಣ, ಎರಡು ಮೂರು ಕೆಲಸಗಳಿಗೆ ಹೋಗುತ್ತಿದ್ದರು. ಮನೆಕೊಳ್ಳಲು ಸಾಲ, ಕಾರ್‌ಕೊಳ್ಳಲು ಸಾಲ, ಮಕ್ಕಳ ವಿಧ್ಯಾಭ್ಯಾಸಕ್ಕೆ ಸಾಲ, ಮಾಡಿದ ಸಾಲವನ್ನು ತೀರಿಸಲಾಗದೆ ಹಗಲು ರಾತ್ರಿ ಸತತವಾಗಿ ದುಡಿಯುತ್ತಿದ್ದರು. ಆಶೆ ಎಂಬುದು ಎಲ್ಲರಿಗೂ ಇರುತ್ತದೆ. ಆದರೆ ಸೈತಾನನು ಮನುಷ್ಯನ ಅಂತರ್ಯದಲ್ಲಿ ಅಳತೆ ಮೀರಿದ ಆಶೆಗಳನ್ನು ತಂದು ಹಾಕಿ ಕುಟುಂಬದಲ್ಲಿನ ನೆಮ್ಮದಿ, ಶಾಂತಿ, ಸಮಾಧಾನಗಳನ್ನು ಹಾಳುಮಾಡುವನು. ಮನುಷ್ಯನನ್ನು ವ್ಯಾಧಿ, ಬಲಹೀನತೆಗಳಿಗೆ ಒಳಪಡಿಸುವನು.

ದೇವಜನರೇ, ಇಂದು ನಿಮ್ಮನ್ನು ನೋಡಿ, "ನಾನು ನಿಮ್ಮನ್ನು ನನ್ನ ಪ್ರಜೆಯೆಂಧು ಆರಿಸಿಕೊಂಡು ನಿಮಗೆ ದೇವರಾಗಿರುವೆನು....(ವಿಮೋ 6:7) ಎಂದು ಹೇಳುತ್ಥಾನೆ. ನಿಮ್ಮ ಎಲ್ಲಾ ಚಿಂತೆಯನ್ನು ಆತನ ಮೇಲೆ ಹಾಕಿ ನಿರ್ಭಯದಿಂದ ಇರ್ರಿ.

**ನೆನಪಿಗೆ: ನಿನ್ನ ಚಿಂತಾಭಾರವನ್ನು ಯೆಹೋವನ ಮೇಲೆ ಹಾಕು. ಆತನು ನಿನ್ನನ್ನು ಉದ್ಧಾರ ಮಾಡುವನು ನೀತಿವಂತನನ್ನು ಎಂದಿಗೂ ಕದಲಗಪಡಿಸನು (ಕೀರ್ತ 55:22)**

# ಕಟ್ಟುಗಳಿಂದ ಬಿಡುಗಡೆ!

ಬೆಳಿಗ್ಗೆ : ಅರಣ್ಯ 17,18,19
ಸಂಜೆ : ಮಾರ್ಕ 6:30–56

**'ಒಬ್ಬಂಟಿಗರನ್ನು ಸಂಸಾರಿಕರಾಗುವಂತೆ ಮಾಡುತ್ತಾನೆ ಸೆರೆಯಲ್ಲಿರುವವರನ್ನು ಬಿಡಿಸಿ ಸುಖಾವಸ್ಥೆಗೆ ತರುತ್ತಾನೆ' (ಕೀರ್ತ 68:6).**

ನೀವು ಏಳದಂತೆ, ಸೈತಾನನು ಕಟ್ಟುವಾಗ, ಅದನ್ನು ನೋಡಿಕೊಂಡು ಕರ್ತನು ಸುಮ್ಮನೆ ಕುಳಿತುಕೊಳ್ಳುವದಿಲ್ಲ. ಕಟ್ಟಲ್ಪಟ್ಟವರನ್ನು ಆತನು ಬಿಡಿಸುವಾತನು. ಯೇಸುಕ್ರಿಸ್ತನು ಭೂಮಿಗೆ ಬಂದ ಉದ್ದೇಶವೇನು? ಬಡವರಿಗೆ ಶುಭ ವರ್ತಮಾನವನ್ನು ಸಾರುವದಕ್ಕೂ ಮನಮುರಿದವರನ್ನು ಕಟ್ಟಿ ವಾಸಿಮಾಡುವದಕ್ಕೂ, ಸೆರೆಯವರಿಗೆ ಬಿಡುಗಡೆಯಾಗುವದನ್ನು ಬಂದಿಗಳಿಗೆ (ಕದ) ತೆರೆಯುವದನ್ನು ಪ್ರಸಿದ್ಧಿ ಪಡಿಸುವದಕ್ಕೂ ಈ ಭೂಮಿಗೆ ಬಂದನು (ಯೆಶಾ 61:1).

ಯಾವ ಒಬ್ಬ ಮನುಷ್ಯನೂ ಬಯಸಿ, ತನ್ನನ್ನು ತಾನೇ ಬಂಧಿಸಿಕೊಳ್ಳುವದಿಲ್ಲ, ಸಿಕ್ಕಿಕೊಳ್ಳುವದಿಲ್ಲ. ಕೆಲವರನ್ನು ಅವರ ಕಣ್ಣಿನಾಶೆಗಳು, ಶರೀರದಾಶೆಗಳು, ಅವರನ್ನು ಬಂಧನಕ್ಕೆ ಅಥವಾ ಕಟ್ಟುಗಳಿಗೆ ಒಳಪಡಿಸುವದು. ಕೆಲವರನ್ನು ಅವರ ಪಾಪಗಳು, ಅಕ್ರಮಗಳು ಅವರನ್ನು ಕಟ್ಟುಗಳಿಗೆ ಒಳಪಡಿಸುವದು.

ಅಪೊಸ್ತಲರ ಕೃತ್ಯಗಳು 8ನೇ ಅಧ್ಯಾಯದಲ್ಲಿ ಸೀಮೋನ ಎಂಬ ಒಬ್ಬ ಮನುಷ್ಯನನ್ನು ಕುರಿತು ಓದುತ್ತೇವೆ. ಇವನು ಒಬ್ಬ ಮಂತ್ರವಾದಿ. ಅವನು, ಫಿಲಿಪ್ಪನು. ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನ ಕುರಿತಾದ ಸುವಾರ್ತೆಯನ್ನು ಸಾರಿದಾಗ, ಈ ಮಂತ್ರವಾದಿಯಾದ ಸೀಮೋನನೂ, ಕರ್ತನನ್ನು ನಂಬಿ ದೀಕ್ಷಾಸ್ನಾನ ತೆಗೆದುಕೊಂಡನು. ಫಿಲಿಪ್ಪನು ನಡೆಸಿದ ಅಧ್ಭುತಕಾರ್ಯಗಳನ್ನು ಕಂಡು ಆಶ್ಚರ್ಯಪಟ್ಟನು. ಆದರೆ ಅವನು ಪವಿತ್ರಾತ್ಮನ ಅಭಿಷೇಕವನ್ನು ಹಣದಿಂದ ಖರೀದಿಸ ಬಹುದೆಂದು ನೆನಸಿದನು. ಅವನೊಳಗೆ ಹಣದಾಸೆ ಎಂಬ ಕಟ್ಟು ಇತ್ತು. ಅವನು ಸಮಾರ್ಯಕ್ಕೆ ಬಂದ ಅಪೊ.ಪೇತ್ರನ ಮುಂದೆ ಹಣವಿಟ್ಟು ಪವಿತ್ರಾತ್ಮ ವರವನ್ನು ತನಗೂ ಕೊಡಬೇಕೆಂದು ಕೇಳಲು, ಪೇತ್ರನು "ನೀನು ಹಾನಿಕರವಾದ ವಿಷವೂ ದುಷ್ಟತ್ವದಲ್ಲಿ ಬಿಗಿಯುವ ಬಂಧನವೂ ಆಗಿರುವವನೆಂದು ಕಾಣುತ್ತದೆ ಅಂದನು (ಅ.ಕೃ 8:23). ಅನೇಕರು, ಸೀಮೋನನಂತೆ ಬುದ್ಧಿಹೀನರಾಗಿ ಕಟ್ಟುಗಳಿಗೆ ಒಳಗಾಗಿರುತ್ತಾರೆ. ಒಬ್ಬನಲ್ಲಿರುವ ಇಹಲೋಕದ ಆಶೆ. ಅವನನ್ನು ಕಟ್ಟುಗಳಿಗೆ ಒಳಪಡಿಸುವದು.

ದೇವಜನರೇ, ನಿಮಗೆ ಇರುವ ಕಟ್ಟುಗಳು ಯಾವದಾಗಿದ್ದರೂ, ಒಂದನ್ನು ತಿಳಿದುಕೊಳ್ಳಿರಿ. ನಿಮಗಾಗಿ, ಯೇಸುಕ್ರಿಸ್ತನನ್ನು ಬಂಧಿಸಿ ದುಷ್ಟನ ಬಳಿ ಒಪ್ಪಿಸಿಕೊಟ್ಟರು (ಮತ್ತಾ 27:2). ಆದ್ದರಿಂದ ಕಟ್ಟುಗಳೆಂದರೇನು? ಎಂಬುದನ್ನು ಆತನು ಅರಿತಿರುವನು. ಆತನೇ ಈ ಕಟ್ಟುಗಳಿಂದ ನಿಮಗೆ ಬಿಡುಗಡೆ ನೀಡುವನು.

**ನೆನಪಿಗೆ : 'ಅವನ ಕೈಕಾಲುಗಳು ಬಟ್ಟೆಗಳಿಂದ ಕಟ್ಟಿದ್ದವು ಅವನ ಮುಖವು ಕೈ ಪಾವುಡದಿಂದ ಸುತ್ತಿತ್ತು. ಯೇಸು ಅವರಿಗೆ ಅವನನ್ನು ಬಿಚ್ಚಿರಿ ಹೋಗಲಿ ಅಂದನು' (ಯೋಹಾ 11:44).**

## ವಾಚಕರ ಗಮನಕ್ಕೆ

**ತಪ್ಪಿದ್ದರೆ ದಯಮಾಡಿ ನಮಗೆ ತಿಳಿಸಿರಿ.**

ನಿಮ್ಮ ವಿಳಾಸವು ಸ್ಪಷ್ಟವಾಗಿ ಇದೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಿ ಹಾಗೂ ಮುಖ್ಯವಾಗಿ **ಪಿನ್‌ಕೋಡ್** ಸಂಖ್ಯೆ (Pincode) ಸರಿಯಾಗಿ ಇರಬೇಕು. **ಒಂದು ವೇಳೆ ತಪ್ಪಿದ್ದರೆ ದಯಮಾಡಿ ನಮಗೆ ತಿಳಿಸಿರಿ.** ಇದು ಅಂಚೆ ಇಲಾಖೆಯು ಸುಲಭವಾಗಿ ಕಾರ್ಯ ನಿರ್ವಹಿಸಲು ಅತೀ ಅವಶ್ಯ.

## ಪುಸ್ತಕ ಮಿಷನರಿ ಸೇವೆಯಲ್ಲಿ ನಿಮ್ಮ ಪಾಲು

ಅನುದಿನದ ಆಹಾರ ಸಂಸ್ಥೆಯಿಂದ ಮುದ್ರಣಗೊಳಿಸಿದ ಪುಸ್ತಕಗಳು ಕರ್ನಾಟಕದಲ್ಲಿರುವ ಎಲ್ಲಾ ಭಾಗಗಳಿಗೆ ಮಿಷನರಿಗಳಾಗಿ ಹೋಗಿ ಯೇಸು ಕ್ರಿಸ್ತನ ನಾಮವನ್ನು ಘನಪಡಿಸುತ್ತಿದೆ.

ಈ ಮಿಷನರಿ ಸೇವೆಗಾಗಿ ನಿಮ್ಮ ಪ್ರಾರ್ಥನೆ ಮತ್ತು ಉದಾರವಾದ ಕಾಣಿಕೆಯನ್ನು ಬಿತ್ತಿ ಈ ಸೇವೆಯನ್ನು ಪ್ರೋತ್ಸಾಹಿಸಿರಿ. ಅನೇಕ ಅಡೆತಡೆಗಳ ಮಧ್ಯದಲ್ಲಿ ಈ ಪುಸ್ತಕ ಮಿಷನರಿ ಸೇವೆಯನ್ನು ಮಾಡುವ ಕೃಪೆಯನ್ನು ಕರ್ತನು ಅನುಗ್ರಹಿಸಿದ್ದಾನೆ.

ಒಂದು ಪುಸ್ತಕ ಮುದ್ರಿಸಲು ಪ್ರಕಟಣೆ ಮಾಡಲು **15,000/-** ರೂಗಳು ಬೇಕಾಗಿರುತ್ತದೆ. ಇದರಲ್ಲಿ ನಿಮಗೆ ಒಂದು ಸುಸಂದರ್ಭ; ಮೊತ್ತದ ವೆಚ್ಚದಲ್ಲಿ ನೀವು **10,000/-** ರೂಗಳು ಕಾಣಿಕೆಯಾಗಿ ಕೊಡುವುದಾದರೆ ನಾವು ನಿಮ್ಮ ಹೆಸರಿನಲ್ಲಿ ಒಂದು ಪುಸ್ತಕವನ್ನು ಮುದ್ರಿಸಿ ಪ್ರಕಟಿಸುತ್ತೇವೆ.

**ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.**

**Account Name: ANUDHINADA AHARA**
**SBI Bank: 34706509264 IFSC Code: SBIN0005778**

Registered News Paper. RNI No. KARKAN/2000/1321
Postal Registration No. KA/BGGPO/2530/2018-2020
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026

# ತಿರುಪತ್ತೂರು ಉಪವಾಸ ಪ್ರಾರ್ಥನಾ ಶಿಬಿರ



**ದಿನಾಂಕ 2018 ಫೆಬ್ರವರಿ 2, 3, 4**
ಶುಕ್ರವಾರ, ಶನಿವಾರ, ಭಾನುವಾರ

**ಸ್ಥಳ ಕ್ರಿಸ್ತಕುಲ ಆಶ್ರಮ, ತಿರುಪತ್ತೂರು**
ಜೋಲಾರ್ ಪೇಟೆ ಸಮೀಪ

ರೈಲು: ಬೆಂಗಳೂರು – ಚೆನ್ನೈ ರೈಲು. ಇಳಿಯಬೇಕಾದ ಸ್ಥಳ ಜೋಲಾರ್‌ಪೇಟೆ
ಬಸ್: ಬೆಂಗಳೂರು – ಹೊಸೂರ – ಕ್ರಿಷ್ಣಗಿರಿ – ತಿರುಪತ್ತೂರು

ಬೆಂಗಳೂರಿನಿಂದ 130 ಕಿ.ಮೀ. ಗಳಾಗುತ್ತದೆ.

**ನೊಂದಣಿ ಶುಲ್ಕ : ರೂ 150/-**
ಆಶ್ರಮ ತಲುಪಿದ ನಂತರ ಹೆಸರನ್ನು ನೊಂದಾಯಿಸಿಕೊಳ್ಳಿರಿ.

ದಯವಿಟ್ಟು 12 ವರ್ಷ ವಯಸ್ಸಿನೊಳಗಿನ ಮಕ್ಕಳನ್ನು
ಮತ್ತು ಅನಾರೋಗ್ಯಸ್ಥರನ್ನು ಕರೆತರಬೇಡಿ.

**ನೀವು 2018 ವರ್ಷದ ಚಂದಾ ಹಣವನ್ನು ನವೀಕರಿಸಿದ್ದೀರಾ..? ರೂ. 100/-**

ಸತ್ಯವೇದದಲ್ಲಿ ಲೂಕ 6:38 ಬರೆದಿದೆ "ಕೊಡಿರಿ, ಆಗ ನಿಮಗೂ ಕೊಡುವರು
... ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು"
ಈ ಉನ್ನತ ಸೇವೆಗಾಗಿ ನಿಮ್ಮ ಪ್ರಾರ್ಥನೆ ಹಾಗೂ ಉದಾರವಾದ
ಕಾಣಿಕೆಗಳನ್ನು ಬಿತ್ತಿ ಕರ್ತನಿಂದ ನೂತನ ಆಶೀರ್ವಾದಗಳನ್ನು ಹೊಂದಿಕೊಳ್ಳಿರಿ.

**ತಪ್ಪದೇ ದೇವರ ರಾಜ್ಯಕ್ಕಾಗಿ ನೆರವಿನ ಹಸ್ತವನ್ನು ನೀಡಿರಿ**

*Anudhinada Ahara*
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
*E-mail:* goldenbibletext@gmail.com

Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047